
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಪ್ರಶಸ್ತಿ ವಾಪಸಿಯ ಮೊದಲ ವಿಜ್ಞಾನಿ
ಪಿ.ಎಂ.ಭಾರ್ಗವ
ಇನ್ನಿಲ್ಲ



ಸಂಪುಟ 11 | ಸಂಚಿಕೆ 33 | ಪುಟ 16 | ಆಗಸ್ಟ್ 7-13, 2017 | ರೂ. 10/-

web: www.janashakthi.co.in | e-mail : js_weekly@yahoo.com



ಸಮೃದ್ಧ-ಸಮಗ್ರ-ಸೌಹಾರ್ದ ಕರ್ನಾಟಕ

ಜಾಗೃತಿ ಜಾಥಾ



ರೆಸಾರ್ಟ್ ಮತ್ತು 'ದಂಡ' ರಾಜಕಾರಣ



ಪಕ್ಷಗಳ ಮಹಾಮೈತ್ರಿ ಕುಸಿಯುತ್ತಿದೆ ಜನತೆಯ ಮಹಾಮೈತ್ರಿಗಳು ಬೆಸೆಯುತ್ತಿವೆ





ಲಿಂಗಾಯತ ಸ್ವತಂತ್ರ ಧರ್ಮ

ವಚನಕಾರರ ಮೌಲ್ಯಗಳ ಪರವಿರುತ್ತಾ ?

ಸೆಕ್ಶನ್ 498A : ಸುಪ್ರೀಂ ಹಿಮ್ಮುಖ ಚಲನೆ





ಜಿ-20 ಶೃಂಗಸಭೆಯಲ್ಲಿ ಭೂತಗಳ ಮೆರವಣಿಗೆ

ಅಡುಗೆ ಅನಿಲ ದರದ ಸತತ ಏರಿಕೆಯ ನಿರ್ಧಾರವನ್ನು ತಕ್ಷಣ ಹಿಂತೆಗೆದುಕೊಳ್ಳಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಅಡುಗೆ ಅನಿಲ ಸಿಲಿಂಡರ್‌ನ ಬೆಲೆಯನ್ನು ಪ್ರತಿತಿಂಗಳು 4 ರೂ. ನಂತೆ ಏರಿಸುತ್ತ ಅದರ ಮೇಲಿನ ಸರಕಾರೀ ಸಬ್ಸಿಡಿಯನ್ನು ಸಂಪೂರ್ಣವಾಗಿ ತೆಗೆದು ಹಾಕಲು ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರಕಾರ ನಿರ್ಧರಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಇದು ಪ್ರಧಾನ ಮಂತ್ರಿಗಳ ಈ ಹಿಂದಿನ ಅಬ್ಬರದ 'ಗಿವ್ ಇಟ್ ಅಪ್' ಪ್ರಚಾರಕ್ಕೆ ತದ್ವಿರುದ್ಧವಾಗಿದೆ. ಸಬ್ಸಿಡಿಯಿಲ್ಲದ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಕೊಳ್ಳಬಲ್ಲ ಕುಟುಂಬಗಳು ಅದನ್ನು ಬಿಟ್ಟು ಕೊಟ್ಟು ಬಡವರಿಗೆ ಅವನ್ನೆಲ್ಲ ಕೊಡುವಂತೆ ಅವಕಾಶ ಮಾಡಿ ಮಾಡಬೇಕು ಎಂಬುದು ಈ ಪ್ರಚಾರವಾಗಿತ್ತು.

ಇನ್ನೂ ಒಂದು ಸಂಗತಿಯೆಂದರೆ, ಅಂತರ್ರಾಷ್ಟ್ರೀಯ ತೈಲ ಬೆಲೆಗಳು ತೀಕ್ಷ್ಣವಾಗಿ ಇಳಿಯುತ್ತಿರುವಾಗ ಸರಕಾರ ಈ ನಿರ್ಧಾರ ಮಾಡಿದೆ. ನಿಜವಾಗಿ ಹೇಳಬೇಕೆಂದರೆ ಇದಕ್ಕೆ ಅನುಗುಣವಾಗಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಇಳಿಯಬೇಕು. ಆದರೆ ಸರಕಾರ ತನ್ನ ಆದಾಯ ಸಂಗ್ರಹವನ್ನು ಹಿಗ್ಗಿಸಿಕೊಳ್ಳಲಿಕ್ಕಾಗಿ ಜನಗಳನ್ನು ಸುಲಿಯುತ್ತಿದೆ ಎಂಬುದು ಸ್ಪಷ್ಟ ಎಂದಿರುವ **ಸಿಪಿಐ(ಎಂ) ಪೊಲಿಟ್‌ಬ್ಯುರೊ ನಮ್ಮ ದೇಶದ ಬಹುಪಾಲು ಜನಗಳ ಮೇಲೆ ಹೇರುತ್ತಿರುವ ಈ ಕಠಿಣ ಹೊರೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.**

ಸರ್ದಾರ್ ಸರೋವರ ಆಣೆಕಟ್ಟು–ಮೊದಲು ಮರುವಸತಿಯನ್ನು ಪೂರ್ಣಗೊಳಿಸಿ: ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಮಧ್ಯಪ್ರದೇಶದಲ್ಲಿ ಸುಪ್ರಿಂ ಕೋರ್ಟಿನ ನಿರ್ಣಯವನ್ನು ತಪ್ಪಾಗಿ ವ್ಯಾಖ್ಯಿಸಿ ಸರ್ದಾರ್ ಸರೋವರ ಆಣೆಕಟ್ಟಿನ ಗೇಟ್‌ಗಳನ್ನು ಮುಚ್ಚಲಾಗಿದೆ. ಜುಲೈ 31ರ ನಂತರ, ಈ ಆಣೆಕಟ್ಟಿನಿಂದ ಸಂತ್ರಸ್ತರಾಗುವವರನ್ನು ಅಲ್ಲಿಂದ ಸ್ಥಳಾಂತರಿಸುವ ಕೆಲಸವನ್ನು ಅವರಿಗೆ ಸರಿಯಾದ ಪುನರ್ವಸತಿಯನ್ನು ಒದಗಿಸಿದ ನಂತರವೇ ಮತ್ತು ಅವರಿಗೆ ಪರಿಹಾರ ನೀಡಿದ ನಂತರವೇ ಮಾಡಬೇಕು ಎಂದು ಸುಪ್ರಿಂ ಕೋರ್ಟ್ ಸ್ಪಷ್ಟವಾಗಿ ಹೇಳಿತ್ತು.

ಈ ಯೋಜನೆಯಿಂದ ಸಂತ್ರಸ್ತರಾಗುವ 40,000 ಕುಟುಂಬಗಳಿಗೆ ಮರುವಸತಿಯ ವ್ಯವಸ್ಥೆಗಳು ಇನ್ನೂ ಪೂರ್ಣಗೊಂಡಿಲ್ಲ. ರೈತರಿಗೆ ಇನ್ನೂ ಯಾವುದೇ ಪರಿಹಾರ ಸಿಕ್ಕಿಲ್ಲ. ಕೃಷಿ ಕೂಲಿಕಾರರು, ಅಂಗಡಿ ಇಟ್ಟುಕೊಂಡವರು, ಮೀನುಗಾರರಿಗಂತೂ ಯಾವುದೇ ವ್ಯವಸ್ಥೆ ಮಾಡಿಲ್ಲ.

ರಾಜಕೀಯ ಕಾರಣದಿಂದಾಗಿ, ಗುಜರಾತ್ ವಿಧಾನಸಭಾ ಚುನಾವಣೆಗಳ ಒತ್ತಡದಿಂದಾಗಿ 40,000 ಕುಟುಂಬಗಳನ್ನು ಈ ರೀತಿ ಬಲಿಗೊಡಲಾಗುತ್ತಿದೆ ಎಂಬುದು ಸ್ಪಷ್ಟ ಎಂದಿರುವ ಸಿಪಿಐ(ಎಂ), ಮೇಧಾ ಪಾಟ್ಕರ್ ನೇತೃತ್ವದ ಆಣೆಕಟ್ಟು ಸಂತ್ರಸ್ಥರ ಹೋರಾಟಕ್ಕೆ ಸೌಹಾರ್ದ ವ್ಯಕ್ತಪಡಿಸಿದೆ.

ಮರುವಸತಿ ಮತ್ತು ಪರಿಹಾರ ಶರತ್ತುಗಳನ್ನು ಪೂರೈಸುವ ವರೆಗೆ ಯಾರನ್ನೂ ಅಲ್ಲಿಂದ ಸ್ಥಳಾಂತರಿಸಬಾರದು ಮತ್ತು ಆಣೆಕಟ್ಟಿನ ಗೇಟುಗಳನ್ನು ತೆರೆದಿಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಸುಪ್ರಿಂ ಕೋರ್ಟ್ ಈ ಹಿಂದೆ ಜುಲೈ 31ರೊಳಗೆ ಎಲ್ಲ ಸಂತ್ರಸ್ಥರಿಗೂ ಪುನರ್ವಸತಿ ಕಲ್ಪಿಸಬೇಕು ಎಂದಿದ್ದರೂ ಮಧ್ಯಪ್ರದೇಶ ಹೈಕೋರ್ಟಿನ ಮಧ್ಯಂತರ ಆದೇಶವನ್ನು ಪಡೆದು ಅಲ್ಲಿನ ಬಿಜೆಪಿ ಸರಕಾರ ಆಣೆಕಟ್ಟಿನಲ್ಲಿ ನೀರು ಸಂಗ್ರಹಿಸಲಿಕ್ಕಾಗಿ ಎಲ್ಲ 30 ಗೇಟುಗಳನ್ನು ಮುಚ್ಚಲು ಮತ್ತು ಅದ-ರಿಂದಾಗಿ ಮುಳಗಡೆಯಾಗುವ ಆ ಪ್ರದೇಶದಲ್ಲಿ ಇರುವವರನ್ನು ಬಲವಂತದಿಂದ ಸ್ಥಳಾಂತರ ಮಾಡಲು ಮುಂದಾದುದನ್ನು ವಿರೋಧಿಸಿ ಪೂರ್ಣವಾಗಿ ಮರುವಸತಿ ಕಲ್ಪಿಸದೆ ಸಾವಿರಾರು ಕಟುಂಬಗಳನ್ನು ಬಲವಂತದಿಂದ ಸ್ಥಳಾಂತರ ಮಾಡುವುದನ್ನು ನಿಲ್ಲಿಸಬೇಕೆಂದು ಒಂದು ವಿಶೇಷ ಅರ್ಜಿ ಮತ್ತು ಹಿರಿಯ ಪತ್ರಕರ್ತ ಕುಲದೀಪ್ ನಾಯರ್ ಮತ್ತು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಸೇರಿದಂತೆ ಏಳು ಪ್ರತಿಷ್ಠಿತ ನಾಗರಿಕರು ರೈತರು ಮತ್ತು ಭೂಹೀನರ ಬದುಕನ್ನು ಉಳಿಸಲು ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಬೇಕು, ಎಂದು ಹಾಕಿರುವ ರಿಟ್ ಅರ್ಜಿಯನ್ನು ಜುಲೈ 31 ರಂದು ಆಲಿಸಿದ ಸುಪ್ರಿಂ ಕೋರ್ಟ್ ಆಗಸ್ಟ 8 ರಂದು ಮುಖ್ಯ ನ್ಯಾಯಾಧೀಶರು ಈ ಅರ್ಜಿಗಳ ವಿಚಾರಣೆ ನಡೆಸುವುದರೆಂದು ಹೇಳಿದೆ. ಇದನ್ನು ಹೋರಾಟ ನಿರತ 'ನರ್ಮದಾ ಬಚಾವ್ ಆಂದೋಲನ' ಸ್ವಾಗತಿಸಿದೆ.

ಮಹಿಳೆಯರು ಸುಳ್ಳುಗಾರರಲ್ಲ–ಸೆಕ್ಷನ್ 498ಎ ಬಲಪಡಿಸಿ ಸುಪ್ರಿಂ ಕೋರ್ಟ್ ಎದುರು ಮಹಿಳೆಯರ ಪ್ರತಿಭಟನೆ

ಜುಲೈ 31 ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಇತರ ಹಲವು ಮಹಿಳಾ ಸಂಘಟನೆಗಳ ಕಾರ್ಯಕರ್ತೆಯರು ಸುಪ್ರಿಂ ಕೋರ್ಟ್ ಗೇಟಿನ ಎದುರು ಪ್ರತಿಭಟನೆ ನಡೆಸಿದರು. ಇದು ಜುಲೈ 27ರಂದು ಕೌಟುಂಬಿಕ ಹಿಂಸಾಚಾರ ಕುರಿತ ಐಪಿಸಿ ಸೆಕ್ಷನ್ 498ಎ ಕುರಿತಂತೆ ಒಂದು ಕೇಸಿನ ತೀರ್ಪಿನಲ್ಲಿ ಅದು ನೀಡಿರುವ ಆದೇಶದ ಬಗ್ಗೆ ಮಹಿಳೆಯರ ಗಂಭೀರ ಆಕ್ಷೇಪಗಳನ್ನು ವ್ಯಕ್ತಪಡಿಸಲಿಕ್ಕಾಗಿ ನಡೆಸಿದ ಪ್ರತಿಭಟನೆ. ಪ್ರತಿಭಟನಾಕಾರರು ಈ ಕುರಿತು ದೇಶದ ಮುಖ್ಯ ನ್ಯಾಯಾಧೀಶರ ಮುಂದೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಕೋರಿದ್ದಾರೆ. ಈ ಕುರಿತ ಮನವಿ ಪತ್ರವನ್ನು ಈ ಪ್ರತಿಭಟನೆಯ ನಂತರ ಸಲ್ಲಿಸಲಾಯಿತು.

ಈ ಸೆಕ್ಷನ್ ಅಡಿಯಲ್ಲಿ ಹಾಕಲಾಗಿರುವ ಬಹಳಷ್ಟು ಕೇಸುಗಳು ಸುಳ್ಳು ಎಂಬ ಭಾವನೆಯಿಂದ ಈ ಆದೇಶ ನೀಡಲಾಗಿದೆ. ಈ ಮೂಲಕ 'ಮಹಿಳೆಯರು ಸುಳ್ಳುಗಾರರು ಎಂದು ಬಿಂಬಿಸಿದಂತಾಗಿದೆ ಎಂಬ ಮಹಿಳೆಯರ ಉದ್ವಿಗ್ನತೆಗೆ ಪ್ರತಿಭಟನಾಕಾರರು ದನಿ ನೀಡಿದರು. ಇದು ನಿಜವಲ್ಲ ಎಂದು ಅಧ್ಯಯನಗಳು ಸಾಬೀತು ಪಡಿಸಿವೆ.

ಈ ಆದೇಶ ಕುಟುಂಬ ಕಲ್ಯಾಣ ಕೇಂದ್ರಗಳನ್ನು ರಚಿಸಬೇಕೆಂದು ಹೇಳಿ ಒಂದು ಸಮಾಂತರ ವ್ಯವಸ್ಥೆಯನ್ನು ನಿರ್ಮಿಸ ಹೊರಟಿದೆ. ವಾಸ್ತವವಾಗಿ ಕೌಟುಂಬಿಕ ಹಿಂಸಾಚಾರದ ಹೊಡೆತಗಳನ್ನು ಎದುರಿಸುತ್ತಿರುವ ಮಹಿಳೆಯರು ರಾಜಿ–ಸಂಧಾನದ ಎಲ್ಲ ದಾರಿಗಳು ಮುಚ್ಚಿದ ಮೇಲೆಯೇ, ಕೆಲವೊಮ್ಮೆ ವರ್ಷಾನುಗಟ್ಟಲೆ ಅದನ್ನು ಸಹಿಸಿದ ನಂತರವೇ ಕೊನೆಯ ದಾರಿಯಾಗಿ ಕಾನೂನಿನ ನೆರವು ಪಡೆಯಲು ಬರುತ್ತಾರೆ, ಆದ್ದರಿಂದ ಸೆ.498ಎ ಬಲಗೊಳ್ಳಬೇಕು ಎಂದು ಅವರು ಬಯಸುತ್ತಿದ್ದರೆ ಸುಪ್ರಿಂ ಕೋರ್ಟಿನ ಈ ಆದೇಶ ಅದನ್ನು ದುರ್ಬಲಗೊಳಿಸುತ್ತದೆ, ಅದರಲ್ಲೂ **ಮಹಿಳೆಯರ ವಿರುದ್ಧ ಅಪರಾಧಗಳು ಹೆಚ್ಚುತ್ತಿರುವಾಗ. ಈಗ ತಮಗೆ ಅನುಕೂಲವಾಗಿರುವ ರಾಜಕೀಯ ವಾತಾವರಣದಲ್ಲಿ ಒತ್ತಡವನ್ನು ಹೆಚ್ಚಿಸಿರುವ ಪಿತೃಪ್ರಧಾನ ಶಕ್ತಿಗಳ ಎದುರು ಸುಪ್ರಿಂ ಕೋರ್ಟ್ ತಲೆಬಾಗಬಾರದು ಎಂದು ಮಹಿಳಾ ಸಂಘಟನೆಗಳು ಆಗ್ರಹಿಸಿವೆ.**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ 'ಸಂತ್ರಸ್ತ' ಪುರುಷರ ದೂರುಗಳನ್ನು ಸ್ವೀಕರಿಸುವ ವ್ಯವಸ್ಥೆ ಮಾಡಬೇಕು ಎಂದು ನಿರ್ದೇಶನ ನೀಡಿದೆ. ಇದು ಸ್ಪಷ್ಟವಾಗಿ ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆಗೆ ವಿರುದ್ಧವಾದದ್ದು.

ಈ ನಿರ್ದೇಶನವನ್ನು ಹಿಂತೆಗೆದುಕೊಳ್ಳಬೇಕು ಮತ್ತು ಸೆಕ್ಷನ್ 498 ಎ ಇದನ್ನು ಬಲಪಡಿಸಬೇಕು ಎಂದು ಆಗ್ರಹಿಸಿ ದೇಶವ್ಯಾಪಿ ಸಹಿ ಸಂಗ್ರಹ ಆಂದೋಲನ ನಡೆಸಲು ಈ ಮಹಿಳಾ ಸಂಘಟನೆಗಳು ನಿರ್ಧರಿಸಿವೆ.

ಮುಖ್ಯ ನ್ಯಾಯಾಧೀಶರಿಗೆ ಸಲ್ಲಿಸಿದ ಮನವಿಗೆ ಎಐಡಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆ, ಎಐಡಬ್ಲ್ಯುಸಿನ ಶುಭ್ರಾ ಮೆಂದಿರತ್ತ, ಜೊಯಿಂಟ್ ವಿಮೆನ್ಸ್ ಫೋರಂನ ಜ್ಯೋತ್ಸ್ನಾ ಚಟರ್ಜಿ, ನಾರಿ ಶಕ್ತಿ ಮಂಚ್‌ನ ಎಲಿಝಬೆತ್, ಎನ್ಎಫ್ಐಡಬ್ಲ್ಯುನ ದೀಪ್ತಿ ಭಾರತಿ, ಪ್ರಗತಿಶೀಲ್ ಮಹಿಳಾ ಮಂಚ್‌ನ ಪೂನಮ್ ಕೌಶಿಕ್, ಜಾಗೊ-ರಿಯ ಚೈತಾಲಿ ಮತ್ತಿತರ ಮಹಿಳಾ ಸಂಘಟನೆಗಳ ಮುಖಂಡರು ಸಹಿ ಹಾಕಿದ್ದಾರೆ.

(ಪುಟ 11ರಲ್ಲಿ ಈ ಕುರಿತ ಲೇಖನ ನೋಡಿ)

"ಪ್ರಿಯ ಪ್ರಧಾನಿಗಳೇ, ಮುಸ್ಲಿಮರನ್ನು, ದಲಿತರನ್ನು ಗುರಿಮಾಡುತ್ತಿರುವಾಗ ಸುಮ್ಮನಿರಲು ಸಾಧ್ಯವಿಲ್ಲ"–114 ಹಿರಿಯ ನಿವೃತ್ತ ಸೈನಿಕರ ಬಹಿರಂಗ ಪತ್ರ

ಭಾರತದ ಸೈನಿಕರ ಹೆಸರು ಹೇಳಿಕೊಂಡು ಸಂಘ ಪರಿವಾರದ ಮಂದಿ ಅವ್ಯಾಹತವಾಗಿ ತಮ್ಮ ಹುಸಿ ರಾಷ್ಟ್ರೀಯವಾದಿ ಪ್ರಚಾರವನ್ನು ನಡೆಸುತ್ತಿರುವಾಗ ಅದೇ ಸಶಸ್ತ್ರ ಪಡೆಗಳಲ್ಲಿ ದಶಕಗಳ ಕಾಲ ದುಡಿದಿರುವ 114 ಹಿರಿಯ ಅನುಭವೀ ಸೈನಿಕರು ಈ ಬಗ್ಗೆ ದಿಗ್ಭ್ರಾಂತಿಯನ್ನು ವ್ಯಕ್ತಪಡಿಸುತ್ತ ಇದನ್ನು ಬಲವಾಗಿ ಖಂಡಿಸುವ ಒಂದು ಬಹಿರಂಗ ಪತ್ರವನ್ನು ಜುಲೈ 30ರಂದು ಪ್ರಧಾನ ಮಂತ್ರಿಗಳಿಗೆ ಮತ್ತು ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಉಪರಾಜ್ಯಪಾಲರುಗಳಿಗೆ ಬರೆದಿದ್ದಾರೆ.

"ಇಂದು ದೇಶದಲ್ಲಿ ಏನು ನಡೆಯುತ್ತಿದೆಯೋ ಅದು ಸಶಸ್ತ್ರ ಪಡೆಗಳು, ಅಷ್ಟೇ ಏಕೆ, ನಮ್ಮ ಸಂವಿಧಾನ ಯಾವುದನ್ನು ಬಿಂಬಿಸುತ್ತದೆಯೋ ಅವುಗಳೆಲ್ಲದರ ಮೇಲೆ ಪ್ರಹಾರ ಮಾಡುವಂತದ್ದು" ಎಂದಿರುವ ಹಿರಿಯ ಅನುಭವೀ ಸೈನಿಕರು "ಮುಸ್ಲಿಮರು ಮತ್ತು ದಲಿತರ ಮೇಲೆ ಗುರಿಯಿಡುವುದನ್ನು ಖಂಡಿಸುತ್ತೇವೆ" ಎನ್ನುತ್ತ "ನಾವು ಇನ್ನು ಮುಂದೆ ಇದನ್ನು ಕಂಡೂ ಕಾಣದಂತಿರಲು ಸಾಧ್ಯವಿಲ್ಲ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ, ಪ್ರಧಾನ ಮಂತ್ರಿಗಳು ಮತ್ತು ರಾಜ್ಯಗಳ ಮುಖ್ಯಮಂತ್ರಿಗಳು ನಮ್ಮ ಸಂವಿಧಾನವನ್ನು ವಾಚಾ ಮತ್ತು ಮನಸಾ ಎತ್ತಿ ಹಿಡಿಯಬೇಕು ಎಂದು ಆಗ್ರಹಿಸಿದ್ದಾರೆ.

ಭಾರತದ ನೌಕಾಪಡೆಯ ಮುಖ್ಯಸ್ಥರಾಗಿದ್ದ ಅಡ್ಮಿರಲ್ ನಂದ, ಮೇಜರ್ ಜನರಲ್‌ಗಳಾಗಿ ನಿವೃತ್ತರಾದ ಎಸ್ ಜಿ ವೊಂಬತ್ಕೆರೆ, ಎಲ್ ತಹ್ಲಿಯಾನಿ, ಹೆಚ್ ಮುಖರ್ಜಿ, ಆರ್‌ಪಿ ಆರ್‌ಸಿ ನಾಯ್ಡು, ದೀಪಂಕರ್ ಬ್ಯಾನರ್ಜಿ, ವೈಸ್ ಅಡ್ಮಿರಲ್‌ಗಳಾಗಿ ನಿವೃತ್ತರಾದ ಎ ಬ್ರಿಟ್ಟೊ, ಆರ್ ಶಂಕರ್, ಏರ್ ಮಾರ್ಷಲ್‌ಗಳಾಗಿ ನಿವೃತ್ತರಾದ ಫಿಲಿಪ್ ರಾಜಕುಮಾರ್, ಡಿ ಎಸ್ ಸಭಿಕಿ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿರುವ ಮೂರೂ ಸಶಸ್ತ್ರ ಪಡೆಗಳ 114 ಹಿರಿಯ ಸೈನಿಕರು ಈ ಬಹಿರಂಗ ಪತ್ರವನ್ನು ಕಳಿಸಿದ್ದಾರೆ. ಈ ಪತ್ರದ ಪೂರ್ಣ ಒಕ್ಕಣಿಕೆ ಇಲ್ಲಿದೆ.

ಭಾರತದ ಪ್ರಧಾನ ಮಂತ್ರಿಗಳು,
ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು
ಕೇಂದ್ರಾಡಳಿತ ಪ್ರದೇಶಗಳ ಉಪರಾಜ್ಯಪಾಲರುಗಳು
ಇವರಿಗೆ

ನಮ್ಮದು ನಮ್ಮ ದೇಶದ ಭದ್ರತೆಗಾಗಿ ದುಡಿಯುವಲ್ಲಿ ಜೀವಮಾನ ಕಳೆದ ಭಾರತೀಯ ಸಶಸ್ತ್ರ ಪಡೆಗಳಲ್ಲಿ ಪಳಗಿದವರ ಒಂದು ಗುಂಪು. ಸಾಮೂಹಿಕವಾಗಿ, ನಮ್ಮ ಗುಂಪು ಯಾವುದೇ ರಾಜಕೀಯ ಪಕ್ಷಕ್ಕೆ ಸಂಬದ್ಧವಾಗಿಲ್ಲ, ನಾವೆಲ್ಲ ಸಮಾನವಾಗಿ ಬದ್ಧರಾಗಿರುವುದು ಭಾರತದ ಸಂವಿಧಾನಕ್ಕೆ ಮಾತ್ರ.

ನಮಗೆ ಈ ಪತ್ರವನ್ನು ಬರೆಯಲು ಬೇಸರವಾಗುತ್ತದೆ, ಭಾರತದಲ್ಲಿ ನಡೆಯುತ್ತಿರುವ ಪ್ರಸಕ್ತ ಘಟನೆಗಳು ನಮ್ಮ ದೇಶವನ್ನು ಆವರಿಸುತ್ತಿರುವ ವಿಭಜನಕಾರತೆಯ ಬಗ್ಗೆ ನಮ್ಮ ದಿಗ್ಭ್ರಾಂತಿ ದಾಖಲಿಸಲೇ ಬೇಕಾಗಿ ಬಂದಿದೆ. ಭಯ, ಬೆದರಿಕೆ, ದ್ವೇಷ ಮತ್ತು ಸಂಶಯದ ಪ್ರಸಕ್ತ ವಾತಾವರಣಕ್ಕೆ ಪ್ರತಿಭಟನೆಯಾಗಿ ನಾವು ದೇಶಾದ್ಯಂತ ಸಾವಿರಾರು ನಾಗರಿಕರನ್ನು ಅಣಿನೆರೆಸಿದ 'ನಾಟ್ ಇನ್ ಮೈ ನೇಮ್' (ನನ್ನ ಹೆಸರಲ್ಲಿ ಬೇಡ) ಪ್ರಚಾರಾಂದೋಲನವನ್ನು ಬೆಂಬಲಿಸುತ್ತೇವೆ.

ಸಶಸ್ತ್ರ ಪಡೆಗಳು "ವಿವಿಧತೆಯಲ್ಲಿ ಏಕತೆ"ಯನ್ನು ಬೆಂಬಲಿಸುತ್ತವೆ. ಧರ್ಮ, ಭಾಷೆ, ಜಾತಿ, ಸಂಸ್ಕೃತಿ ಅಥವ ಬೇರಾವುದೇ ವಿಷಯದಲ್ಲಿ ಭಿನ್ನತೆಗಳು ಸಶಸ್ತ್ರ ಪಡೆಗಳ ಸಮರಸತೆಗೆ ಅಡ್ಡಿಯಾಗಿಲ್ಲ. ವಿಭಿನ್ನ ಹಿನ್ನೆಲೆಯ ಸೈನಿಕರು ನಮ್ಮ ರಾಷ್ಟ್ರದ ರಕ್ಷಣೆಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದ್ದಾರೆ, ಇಂದೂ ಹೋರಾಡುತ್ತಿದ್ದಾರೆ. ನಮ್ಮ ಸೇವಾವಧಿಯಾದ್ಯಂತ ಒಂದು ಮುಕ್ತತೆ, ನ್ಯಾಯ ಮತ್ತು ನಿಷ್ಪಕ್ಷಪಾತತೆ ನಮ್ಮ ಕ್ರಿಯೆಗಳಿಗೆ ಮಾರ್ಗದರ್ಶಿಯಾಗಿದ್ದವು. ನಾವು ಒಂದು ಕುಟುಂಬ. ನಮ್ಮ ಪರಂಪರೆ ಭಾರತ ಎಂಬ ಬಹುವರ್ಣಗಳ ಹಚ್ಚಡದಂತೆ. ನಾವು ಈ ಚೈತನ್ಯಭರಿತ ವೈವಿಧ್ಯತೆಯನ್ನು ನೆಚ್ಚಿಕೊಂಡಿದ್ದೇವೆ.

ಆದರೆ ಇಂದು ದೇಶದಲ್ಲಿ ಏನು ನಡೆಯುತ್ತಿದೆಯೋ ಅದು ಸಶಸ್ತ್ರ ಪಡೆಗಳು, ಅಷ್ಟೇ ಏಕೆ, ನಮ್ಮ ಸಂವಿಧಾನ ಯಾವುದನ್ನು ಬಿಂಬಿಸುತ್ತದೆಯೋ ಅವುಗಳೆಲ್ಲದರ ಮೇಲೆ ಪ್ರಹಾರ ಮಾಡುವಂತದ್ದು. ನಾವಿಗ ಒಟ್ಟಾರೆಯಾಗಿ ಸಮಾಜದ ಮೇಲೆ ಹಿಂದೂ ಧರ್ಮದ ಸ್ವಯಂನೇಮಿತ ಅವಿರತ ಕಾವಲುಕೋರತನದ ಅಭೂತಪೂರ್ವ ದಾಳಿಗಳನ್ನು ಕಾಣುತ್ತಿದ್ದೇವೆ. ನಾವು ಮುಸ್ಲಿಮರು ಮತ್ತು ದಲಿತರ ಮೇಲೆ ಗುರಿಯಿಡುವುದನ್ನು ಖಂಡಿಸುತ್ತೇವೆ. ಮಾಧ್ಯಮ ಘಟಕಗಳು, ನಾಗರಿಕ ಸಮಾಜದ ಗುಂಪುಗಳು, ವಿಶ್ವವಿದ್ಯಾಲಯಗಳು, ಪತ್ರಕರ್ತರು ಮತ್ತು ವಿದ್ವಾಂಸರಿಗೆ ರಾಷ್ಟ್ರ-ವಿರೋಧಿಗಳೆಂಬ ಹಣೆಪಟ್ಟಿ ಹಚ್ಚಿ, ಅವರ ವಿರುದ್ಧ ಹಿಂಸಾಚಾರವನ್ನು ಹರಿಯ ಬಿಡುತ್ತಿರುವ ಮೂಲಕ, ವಿಚಾರ ಸ್ವಾತಂತ್ರ್ಯವನ್ನು ಹಿಸುಕಿ ಹಾಕುತ್ತಿದ್ದರೆ, ಪ್ರಭುತ್ವ ಅದರತ್ತ ಗಮನವನ್ನೇ ಕೊಡದಿರುವುದನ್ನು ನಾವು ಖಂಡಿಸುತ್ತೇವೆ.

ನಾವು ಇನ್ನು ಮುಂದೆ ಇದನ್ನು ಕಂಡೂ ಕಾಣದಂತಿರಲು ಸಾಧ್ಯವಿಲ್ಲ. ನಮ್ಮ ಸಂವಿಧಾನ ಪ್ರತಿಪಾದಿಸುವ ಉದಾರ ಮತ್ತು ಜಾತ್ಯತೀತ ಮೌಲ್ಯಗಳನ್ನು ಎತ್ತಿ ಹಿಡಿದು ಅದರ ಪರವಾಗಿ ಮಾತಾಡದಿದ್ದರೆ, ಅದು ನಮ್ಮ ದೇಶಕ್ಕೆ ಅಪಚಾರ ಎಸಗಿದಂತಾಗುತ್ತದೆ. ನಮ್ಮ ವೈವಿಧ್ಯತೆ ನಮ್ಮ ಶಕ್ತಿ, ಅಸಮ್ಮತಿ ದೇಶದ್ರೋಹವಲ್ಲ, ವಾಸ್ತವವಾಗಿ, ಅದು ಪ್ರಜಾಪ್ರಭುತ್ವದ ತಿರುಳು.

ನಾವು ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಅಧಿಕಾರದಲ್ಲಿರುವವರನ್ನು ನಮ್ಮ ಆತಂಕಗಳನ್ನು ಗಮನಿಸಬೇಕು, ಮತ್ತು ತುರ್ತಾಗಿ ನಮ್ಮ ಸಂವಿಧಾನವನ್ನು ವಾಚಾ ಮತ್ತು ಮನಸಾ ಎತ್ತಿ ಹಿಡಿಯಬೇಕು ಎಂದು ಆಗ್ರಹಿಸುತ್ತೇವೆ.

ಸಂಪಾದಕೀಯ

ರೆಸಾರ್ಟ್ ಮತ್ತು "ದಂಡ" ರಾಜಕಾರಣ

ಗುಜರಾತಿನ 44 ಶಾಸಕರಿಗೆ ರಾಮನಗರದ ಈಗಲ್ಟನ್ ರೆಸಾರ್ಟ್‌ನಲ್ಲಿ ಆತಿಥ್ಯ ಒದಗಿಸುತ್ತಿರುವ ಇಂಧನ ಸಚಿವ ಡಿ.ಕೆ. ಶಿವಕುಮಾರ್ ಅವರಿಗೆ ಸಂಬಂಧಿಸಿದ 64 ಸ್ಥಳಗಳಲ್ಲಿ ಆದಾಯ ತೆರಿಗೆ (ಐ.ಟಿ) ಇಲಾಖೆಯ ಅಧಿಕಾರಿಗಳು ಅಗಸ್ಟ್ 2-ರಂದು ಶೋಧ ನಡೆಸಿದರು. ಅಗಸ್ಟ್ 3-ರಂದು ಸಹ ದಾಳಿ-ಶೋಧ ಕಾರ್ಯಗಳು ಮುಂದುವರೆದವು. ತೆರಿಗೆ ವಂಚನೆ ಆರೋಪದ ಪ್ರಕರಣದ ತನಿಖೆಯ ಭಾಗವಾಗಿ ಈ ದಾಳಿ ನಡೆದಿದೆ. ಸಾಕ್ಷ್ಯ ಸಂಗ್ರಹಕ್ಕಾಗಿ ಈ ಕಾರ್ಯಾಚರಣೆ ನಡೆಸಲಾಗಿದೆ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 132ರ ಅನ್ವಯ ಕಾನೂನು ಬದ್ಧವಾಗಿಯೇ ಶೋಧ ನಡೆಸಲಾಗಿದೆ. ಬಹಳ ಹಿಂದಿನಿಂದಲೇ ತನಿಖೆ ನಡೆಯುತ್ತಿತ್ತು. ಈ ದಾಳಿ-ಶೋಧಗಳು ಮುಂದುವರೆದ ಭಾಗವಷ್ಟೇ. ಐಟಿ ಅಧಿಕಾರಿಗಳು ನಡೆಸಿದ ದಾಳಿ ವೇಳೆ ಒಟ್ಟು- 11.43 ಕೋಟಿ ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಇದು ರಾಜಕೀಯ ಪ್ರೇರಿತ ದಾಳಿ ಎಂದು ಕಾಂಗ್ರೆಸ್ ಆರೋಪಿಸಿದೆ. 'ಗುಜರಾತ್ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಗೂ ಕರ್ನಾಟಕದಲ್ಲಿ ನಡೆದ ಐಟಿ ದಾಳಿಗೂ ಯಾವುದೆ ನಂಟಿಲ್ಲ' ಎಂದು ಕೇಂದ್ರ ಸಚಿವ ಅರುಣ್ ಜೇಟ್ಲಿ ಸಂಸತ್ತಿನಲ್ಲಿ ಸ್ಪಷ್ಟನೆ ನೀಡಿದರು.

ಈ ಐಟಿ ದಾಳಿಯನ್ನು ಖಂಡಿಸಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಕಾಂಗ್ರೆಸ್ ಸಂಸದರು ಪ್ರತಿಭಟನೆ ನಡೆಸಿದರು. ಉಭಯ ಸದನಗಳು ಆರಂಭವಾಗುತ್ತಿದ್ದಂತೆ ಸಂಸದರು ಬಿಜೆಪಿ ಹತಾಶೆಯಿಂದ ಸೇಡಿನ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿ ಸದನದ ಬಾವಿಗೆ ಇಳಿದು ಪ್ರತಿಭಟನೆ ನಡೆಸಿದರು. ಇದರಿಂದ ಸದನದಲ್ಲಿ ಗದ್ದಲ ಉಂಟಾಗಿದ್ದರಿಂದ ಉಭಯ ಸದನಗಳ ಕಲಾಪವನ್ನು ಮುಂದೂಡಬೇಕಾಯಿತು. ಇಂಧನ ಸಚಿವ ಡಿ.ಕೆ.ಶಿವಕುಮಾರ್ ಅವರನ್ನು ಗುರಿಯಾಗಿಸಿಕೊಂಡು ಆದಾಯ ತೆರಿಗೆ ಅಧಿಕಾರಿಗಳು ನಡೆಸಿರುವ ದಾಳಿ ಸಂಪೂರ್ಣ ರಾಜಕೀಯ ಪ್ರೇರಿತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ. ಇದರ ಹಿಂದೆ ಕೇಂದ್ರ ಸರ್ಕಾರದ ಕೈವಾಡ ಇರುವುದು ಜಗಜ್ಜಾಹೀರಾಗಿದೆ. ತನ್ನ ರಾಜಕೀಯ ಷಡ್ಯಂತ್ರಕ್ಕೆ ಆದಾಯ ತೆರಿಗೆ ಇಲಾಖೆಯನ್ನು ಬಳಸಿಕೊಳ್ಳುವುದು ಕೇಂದ್ರ ಸರ್ಕಾರಕ್ಕೆ ಶೋಭೆತರುವುದಿಲ್ಲ, ದಾಳಿ ಸಂದರ್ಭದಲ್ಲಿ ನಿಯಮಾನುಸಾರ ಐಟಿ ಅಧಿಕಾರಿಗಳು ಸ್ಥಳೀಯ ಪೊಲೀಸರ ನೆರವು ಪಡೆದುಕೊಳ್ಳಬೇಕು. ಆದರೆ ನಿಯಮ ಉಲ್ಲಂಘಿಸಿ, ಸಿಆರ್‌ಪಿಎಫ್ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗಿದೆ. ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಐ.ಟಿ. ದಾಳಿ ವೇಳೆ ಕರ್ನಾಟಕ ಪೊಲೀಸ ಪಡೆಯ ಸೇವೆಯನ್ನು ಬಳಸಿಕೊಳ್ಳದೆ ಕೇಂದ್ರ ಸಶಸ್ತ್ರ ಮೀಸಲು ಪೊಲೀಸ ಪಡೆಯ (ಸಿಆರ್‌ಪಿಎಫ್) ಸಿಬ್ಬಂದಿಯನ್ನು ಬಳಸಿಕೊಂಡಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಕರ್ನಾಟಕ ಗೃಹ ಇಲಾಖೆಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಸುಭಾಷ್ ಚಂದ್ರ ಅವರು ಕೇಂದ್ರ ಕಂದಾಯ ಇಲಾಖೆಯ ಕಾರ್ಯದರ್ಶಿ ಹಸ್ಮುಖ್ ಅದಿಯಾ ಅವರಿಗೆ ಪತ್ರ ಬರೆದಿದ್ದಾರೆ. 'ಈ ಹಿಂದೆ ಐಟಿದಾಳಿಗಳು ನಡೆದ ಸಂದರ್ಭದಲ್ಲಿ ಕೇಂದ್ರದ ಯಾವುದೇ ಸಶಸ್ತ್ರ ಪಡೆಯ ಸಿಬ್ಬಂದಿಯನ್ನು ಬಳಸಿಕೊಂಡಿರಲಿಲ್ಲ. ರಾಜ್ಯ ಪೊಲೀಸರನ್ನು ಬಳಸಿಕೊಂಡೇ ಈ ಹಿಂದೆ ಐಟಿ ದಾಳಿಗಳು ನಡೆದಿವೆ. ಆದರೆ, ಈ ಬಾರಿ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡದೆ ಕೇಂದ್ರ ಸಶಸ್ತ್ರ ಪಡೆಯನ್ನು ಬಳಸಿಕೊಂಡಿರುವುದು ಜನತೆಗೆ ತಪ್ಪು ಸಂದೇಶ ರವಾನಿಸಿದಂತಾಗುತ್ತದೆ. ಐಟಿ ಅಧಿಕಾರಿಗಳ ಈ ಕ್ರಮಕ್ಕೆ ಕರ್ನಾಟಕ ಸರ್ಕಾರವು ತೀವ್ರ ಪ್ರತಿಭಟನೆಯನ್ನು ದಾಖಲಿಸುತ್ತದೆ' ಎಂದು ಪತ್ರದಲ್ಲಿ ಹೇಳಲಾಗಿದೆ.

ಆದಾಯ ತೆರಿಗೆ ವಂಚನೆಯ ಬಗ್ಗೆ ತನಿಖೆಯ ಭಾಗವಾಗಿ ದಾಳಿ, ಶೋಧ ನಡೆಸುವುದು ತಪ್ಪಲ್ಲ. ಆದರೆ ಗುಜರಾತ್ ರಾಜ್ಯಸಭೆಯ ಚುನಾವಣೆಯ ಹಿನ್ನೆಲೆಯಲ್ಲಿ 6 ಕಾಂಗ್ರೆಸ್ ಶಾಸಕರ ರಾಜೀನಾಮೆ, ಅವರಲ್ಲಿ ಒಬ್ಬ ಕಾಂಗ್ರೆಸ್ ಶಾಸಕ ಕಾಂಗ್ರೆಸ್ ಅಧಿಕೃತ ಅಭ್ಯರ್ಥಿ ಅಹ್ಮದ್ ಪಟೇಲ್ ವಿರುದ್ಧ ಅಭ್ಯರ್ಥಿಯಾಗಿರುವುದು, ಹಲವು ಗುಜರಾತ್ ಶಾಸಕರು "ಪೋಲಿಸ್ ಆಡಳಿತ ಬಳಸಿ ಪಕ್ಷಾಂತರ ಮಾಡಲು 15 ಕೋಟಿ ರೂ. ಆಮಿಷ ಒಡ್ಡಲಾಗಿದೆ ಮತ್ತು ಶಾಸಕರಿಗೂ ಶಾಸಕರ ಕುಟುಂಬದವರಿಗೂ ಬೆದರಿಕೆ ಒಡ್ಡಲಾಗಿದೆ" ಎಂದು ಆಪಾದಿಸಿರುವುದು? ಇವೆಲ್ಲದರ ಹಿನ್ನೆಲೆಯಲ್ಲಿ ಈ ದಾಳಿ-ಶೋಧಗಳನ್ನು ರಾಜಕೀಯ ಉದ್ದೇಶಗಳಿಗೆ ಬಳಸಲಾಗುತ್ತಿದೆ ಎಂಬುದು ಸ್ಪಷ್ಟ. ದಾಳಿಯ ಸಮಯ, ನಿಯಮ ಬಾಹಿರವಾಗಿ ಕೇಂದ್ರೀಯ ಪಡೆಗಳ ಬಳಕೆ, ಇಂಧನ ಸಚಿವ ಡಿಕೆಶಿವಕುಮಾರ್ ಅವರನ್ನು ಪ್ರಶ್ನಿಸುವ ನೆಪದಲ್ಲಿ ಗುಜರಾತ್ ಶಾಸಕರು ತಂಗಿರುವ ರೆಸಾರ್ಟ್‌ಗೆ ಐಟಿ ಮತ್ತು ಕೇಂದ್ರೀಯ ಪಡೆ ನುಗ್ಗಿರುವುದು ತೀವ್ರ ಸಂಶಯಕ್ಕೆ ಎಡೆಮಾಡಿ ಕೊಡುತ್ತದೆ. ಐಟಿ ತಂಡ ನಿರಾಕರಿಸಿದ್ದರೂ, ಅವರು ಗುಜರಾತ್ ಶಾಸಕರನ್ನೂ ರೆಸಾರ್ಟ್ ಮಾಲಿಕರನ್ನೂ ಪ್ರಶ್ನಿಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಆಪಾದಿಸಿವೆ.

ಮೋದಿ-ಅಮಿತ್ಷಾದ್ವಯರ, "ಕಾಂಗ್ರೆಸ್-ಮುಕ್ತ" ಭಾರತದ ಘೋಷಣೆಯ ಮತ್ತು ಮುಂಬರುವ ಗುಜರಾತ್ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಗುಜರಾತಿನಲ್ಲಿ ಕಾಂಗ್ರೆಸ್‌ನ್ನು ದುರ್ಬಲಗೊಳಿಸುವ ಸಕಲ ಪ್ರಯತ್ನಗಳನ್ನು ಬಿಜೆಪಿ ಅಧ್ಯಕ್ಷ ಅಮಿತ್ ಶಾ ಮಾಡುತ್ತಿದ್ದಾರೆ ಎಂಬುದು ಸ್ಪಷ್ಟ. ಕಾಂಗ್ರೆಸ್ ಅಧಿಕೃತ ಅಭ್ಯರ್ಥಿ ಅಹ್ಮದ್ ಪಟೇಲ್ ಅವರನ್ನು ರಾಜ್ಯಸಭಾ ಚುನಾವಣೆಯಲ್ಲಿ ಸೋಲಿಸುವುದು ಇದಕ್ಕೆ ಸಹಾಯ ಮಾಡುತ್ತದೆ. ಇನ್ನೂ ಕೆಲವೇ ಕಾಂಗ್ರೆಸ್ ಶಾಸಕರನ್ನು "ಖರೀದಿ" ಮಾಡಿದರೆ ಅಹ್ಮದ್ ಪಟೇಲ್ ಅವರನ್ನು ಸೋಲಿಸಬಹುದು ಎಂಬ ಅವರ ಲೆಕ್ಕಾಚಾರಕ್ಕೆ ಅಡ್ಡಿಯಾಗಿರುವುದರಿಂದ, ಗುಜರಾತ್ ಶಾಸಕರನ್ನು ಬೆದರಿಸಲು ಈ ದಾಳಿ-ಶೋಧ ನಡೆಸಲಾಗಿದೆ ಎಂಬ ಕಾಂಗ್ರೆಸ್ ಆಪಾದನೆ ನಂಬಲರ್ಹವಾದದ್ದೇ. "ಸಾಮ-ದಾನ-ಬೇಧ"ಗಳ ರಾಜಕಾರಣ ನಡೆಯದಿದ್ದಾಗ "ದಂಡ"ದ ರಾಜ-ಕಾರಣಕ್ಕೆ ಬಿಜೆಪಿ ಇಳಿದಿರುವುದು ಸ್ಪಷ್ಟವಾಗಿ ಕಾಣಬರುತ್ತಿದೆ. ಹಿಂದೆ ಗೋವಾ, ಮಣಿಪುರಗಳಲ್ಲಿ ಮತ್ತು ಇತ್ತೀಚೆಗೆ ಬಿಹಾರದಲ್ಲೂ "ಸಾಮ-ದಾನ-ಬೇಧ"ಗಳಿಂದಲೇ ರಾಜಕೀಯ ಉದ್ದೇಶ ಈಡೇರಿತ್ತು. ಆದರೆ ಗುಜರಾತಿನಲ್ಲಿ "ದಂಡ" ಅಗತ್ಯವಾಗಿದೆ.

ವಿರೋಧ ಪಕ್ಷಗಳನ್ನು ದಮನ ಮಾಡಲು ಅದರ ನಾಯಕರ ಚಾರಿತ್ರ-ಹರಣದ ರಾಜಕೀಯ ಉದ್ದೇಶಗಳಿಗೆ ಐಟಿ, ಇಡಿ, ಸಿಬಿಐ ಮುಂತಾದ ಕೇಂದ್ರೀಯ ಸಂಸ್ಥೆಗಳನ್ನು ಬಳಸುವುದು ಪ್ರಜಾಪ್ರಭುತ್ವದ ದಮನ. ದಾಳಿ-ಶೋಧಗಳಿಗೆ ಕೇಂದ್ರೀಯ ಭದ್ರತಾ ಪಡೆಗಳ ಬಳಕೆ ಒಕ್ಕೂಟ ತತ್ವದ ಉಲ್ಲಂಘನೆ ಕೂಡಾ. ರಾಜ್ಯಸಭಾ ಚುನಾವಣಾ ಪ್ರಕ್ರಿಯೆ ಆರಂಭವಾದ ನಂತರ ಇವೆಲ್ಲವನ್ನು ಮಾಡುತ್ತಿರುವುದು ಚುನಾವಣಾ ಸಂಹಿತೆಯ ಉಲ್ಲಂಘನೆ ಸಹ. ಈ ಕ್ರಮಗಳು ಭ್ರಷ್ಟಾಚಾರ-ವಿರೋಧಿ ಎನ್ನಲಾಗಿದೆ. ಆದರೆ ಗುಜರಾತಿನ ಶಾಸಕರಿಗೆ ಆಡಳಿತ-ಪೋಲಿಸ್ ಬಳಸಿ ಆಮಿಷ-ಬೆದರಿಕೆ ಒಡ್ಡಿದ್ದು ಚುನಾವಣಾ ಭ್ರಷ್ಟಾಚಾರವಲ್ಲವೇ? ಅದರ ತನಿಖೆ ಬೇಡವೇ? ಈ ಕಾರಣಗಳಿಗೆ ಕೇಂದ್ರ ಸರಕಾರದ ಐಟಿ ದಾಳಿ-ಶೋಧಗಳನ್ನು ಪ್ರಜಾಪ್ರಭುತ್ವದ, ಒಕ್ಕೂಟ ತತ್ವದ ಉಲ್ಲಂಘನೆಗಳು ಮತ್ತು ಚುನಾವಣಾ ಭ್ರಷ್ಟಾಚಾರದ ಕ್ರಮವೆಂದು ಖಂಡಿಸಬೇಕಾಗಿದೆ.

ಭ್ರಷ್ಟಾಚಾರದ ವಿರುದ್ಧ ಬಿಜೆಪಿಯ ಆಕ್ರೋಶ-ವೀರಾವೇಶ ಎಲ್ಲಾ ಬೊಗಳೆ ಎಂದು ಪದೇ ಪದೇ ಸಾಬೀತಾಗಿದೆ. ಕೇಂದ್ರದಲ್ಲಿ ಅದರ ಚುನಾವಣಾ ಭರವಸೆಯಾಗಿದ್ದ ಲೋಕಪಾಲ್ ನೇಮಕದತ್ತ ಕಿರುಬೆರಳನ್ನೂ ಎತ್ತಿಲ್ಲ. ಬಿಜೆಪಿ ರಾಜ್ಯ ಸರಕಾರಗಳು ಇರುವಲ್ಲೂ ಹೆಚ್ಚಿನ ಕಡೆ ಲೋಕಾಯುಕ್ತದಂತಹ ಭ್ರಷ್ಟಾಚಾರ-ತಡೆವ್ಯವಸ್ಥೆ ಜಾರಿಯಾಗಿಲ್ಲ. ಮಧ್ಯಪ್ರದೇಶದ ಕುಖ್ಯಾತ "ವ್ಯಾಪಂಹಗರಣ" ಮುಖ್ಯಮಂತ್ರಿ ಸೇರಿದಂತೆ ಹಲವು ಮಂತ್ರಿಗಳನ್ನು ವ್ಯಾಪಿಸಿದ್ದರೂ ಯಾರೂ ರಾಜಿನಾಮೆ ಕೊಟ್ಟಿಲ್ಲ. ಯಾರಿಗೂ ಶಿಕ್ಷೆಯಾಗಿಲ್ಲ. ನೋಟು ನಿಷೇಧದ ಬಗ್ಗೆ ಪೂರ್ವ-ಮಾಹಿತಿ ಬಳಸಿ ಬಿಜೆಪಿ ನಾಯಕರು ವ್ಯಾಪಕವಾಗಿ ನೋಟು ವಿನಿಮಯದ ದಂಧೆಯಲ್ಲಿ ಕೋಟ್ಯಾಂತರ ರೂ. ಗಳಿಸಿದ್ದರು ಎಂದು ವರದಿಯಾಗಿದೆ. ಹಿಂದೆ ಕರ್ನಾಟಕದಲ್ಲಿ, ಇತ್ತೀಚೆಗೆ ಗೋವಾ, ಮಣಿಪುರ ಮತ್ತು ಈಗ ಗುಜರಾತಿನಲ್ಲೂ ಭ್ರಷ್ಟ "ಆಪರೇಶನ್ ಕಮಲ"ವನ್ನು ರಾಜಾರೋಷಾಗಿ ನಡೆಸಲಾಗಿದೆ.

ಕಾಂಗ್ರೆಸ್ ಇಂತಹುದೇ ಪ್ರಜಾಪ್ರಭುತ್ವದ, ಒಕ್ಕೂಟ ತತ್ವದ ಉಲ್ಲಂಘನೆಗಳು ಮತ್ತು ಚುನಾವಣಾ ಭ್ರಷ್ಟಾಚಾರಗಳಲ್ಲಿ ತೊಡಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳುವುದು ಅಗತ್ಯವಿದೆ. ಬಿಜೆಪಿ ಅಂತಹುದೇ ಕ್ರಮಗಳನ್ನು ಇನ್ನಷ್ಟು ಕೆಳಮಟ್ಟಕ್ಕೆ ಒಯ್ದಿದೆ ಎಂಬುದು ಬಿಟ್ಟರೆ ಬಹಳ ವ್ಯತ್ಯಾಸಗಳಿಲ್ಲ. ಎರಡೂ ಪಕ್ಷಗಳ ಆರ್ಥಿಕ ನೀತಿಗಳು ಭ್ರಷ್ಟ ತೀವ್ರಪ್ರತಿಗಾಮಿ ಬಂಡವಾಳಶಾಹಿ ನೀತಿಗಳ ಮೇಲೆ ಆಧಾರಿತವಾಗಿರುವುದು ಇದಕ್ಕೆ ಮುಖ್ಯ ಕಾರಣವೆಂದು ಮರೆಯುವಂತಿಲ್ಲ. ಆದ್ದರಿಂದಲೇ ಶಾಸಕರು ಬಿಜೆಪಿ-ಕಾಂಗ್ರೆಸ್ಗಳ ನಡುವೆ ಅಷ್ಟು ಸುಲಭವಾಗಿ ಓಡಾಡುತ್ತಾರೆ. ಆದ್ದರಿಂದ ಅವರನ್ನು ಪಕ್ಷದಲ್ಲಿ ಉಳಿಸಿಕೊಳ್ಳಲು ರೆಸಾಟ್ ರಾಜ ಕಾರಣ ಅಗತ್ಯವಾಗುತ್ತದೆ. ರೆಸಾರ್ಟ್ ಮತ್ತು "ದಂಡ" ರಾಜಕಾರಣಗಳನ್ನು ಬಯಲಿಗೆಳೆಯುವ ಜನರ ಸಮಸ್ಯೆಗಳ ರಾಜಕಾರಣವನ್ನು ಮುನ್ನೆಲೆಗೆ ತರುವುದು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಕರ್ತವ್ಯವಾಗಿದೆ.

ಜನಶಕ್ತಿ ಉತ್ಸವ ಮತ್ತು ಪ್ರಸಾರಾಂದೋಲನ 2017

ಕಳೆದ 3 ವರ್ಷಗಳಂತೆ ಈ ವರ್ಷವೂ "ಜನಶಕ್ತಿ ಉತ್ಸವ"ವನ್ನು ಹಮ್ಮಿಕೊಳ್ಳಲಾಗುತ್ತಿದೆ. ಜನಶಕ್ತಿ ಪತ್ರಿಕೆಯನ್ನು ದುಡಿಯುವ ಜನರ ಚಳುವಳಿಯ ಒಳಗೂ/ಹೊರಗೂ ಇನ್ನಷ್ಟು ಹೆಚ್ಚಿನ ಜನವಿಭಾಗಗಳಿಗೆ ಪರಿಚಯಿಸುವುದು, ವ್ಯಾಪಕವಾಗಿ ತೆಗೆದುಕೊಂಡು ಹೋಗುವುದು, ಜನಪ್ರಿಯಗೊಳಿಸುವುದು 'ಜನಶಕ್ತಿ ಉತ್ಸವ'ದ ಪ್ರಮುಖ ಗುರಿ. ಈ ವರ್ಷ ಈ ಕೆಳಗಿನ ಕೆಲವು ಹೊಸ ಅಂಶಗಳನ್ನು ಒಳಗೊಂಡ "ಜನಶಕ್ತಿ ಉತ್ಸವ ಮತ್ತು ಪ್ರಚಾರಾಂದೋಲನ 2017" ಜುಲೈ-ಅಗಸ್ಟ್ ನಲ್ಲಿ ನಡೆಯಲಿದೆ.

ತುಮಕೂರು, ಬಳ್ಳಾರಿ, ಕೋಲಾರ, ಗುಲ್ಬರ್ಗ ಗಳಲ್ಲಿ ಜನಶಕ್ತಿ ಜಿಲ್ಲಾ ಉತ್ಸವಗಳು ಅಗಸ್ಟ್ ಮೊದಲ ವಾರದಲ್ಲಿ ನಡೆಯಲಿವೆ.

- "ಜನಶಕ್ತಿ ಉತ್ಸವ 2017"ರ ಒಟ್ಟಾರೆ ಥೀಮ್ "ಇಂಡಿಯಾ 70 : ಸಾಧನೆಗಳು, ಸವಾಲುಗಳು"
- ಅಗಸ್ಟ್ 19 (ಶನಿವಾರ) ರಂದು ಬೆಂಗಳೂರಲ್ಲಿ "ಜನಶಕ್ತಿ ಉತ್ಸವ 2017" ಉತ್ಸವ ನಡೆಯಲಿದೆ. ಕಾ. ಬೃಂದಾ ಕಾರಟ್ ಅವರು ಉತ್ಸವವನ್ನು ಉದ್ಘಾಟಿಸಲಿದ್ದಾರೆ.
- ಉತ್ಸವದಲ್ಲಿ ಮೊದಲ ಅರ್ಧದಿನ ಜನಶಕ್ತಿ ಬಳಗದ ಸಮಾವೇಶ ಹಾಗೂ ಎರಡನೇ ಅರ್ಧದಿನ ವ್ಯಾಪಕವಾಗಿ ಮಾಧ್ಯಮ/ಜನತೆಯ ಗಮನ ಸೆಳೆಯುವ ವಿಚಾರ ಸಂಕಿರಣ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಳ್ಳಲಿದೆ. ಜನಶಕ್ತಿ ವಿಶೇಷಾಂಕ ಬಿಡುಗಡೆನೂ ಮಾಡಬೇಕು. ಜನಶಕ್ತಿ ವಿಶೇಷಾಂಕದ ಥೀಮ್ ಸಹ "ಇಂಡಿಯಾ 70 : ಸಾಧನೆಗಳು, ಸವಾಲುಗಳು" ಕಾರ್ಯಾಗಾರ ಸಂಘಟಿಸಬೇಕು.
- ಜನಶಕ್ತಿ ಪತ್ರಿಕೆಯ ಪ್ರಸಾರ ಮತ್ತು ಫೇಸ್ ಬುಕ್ ಪುಟದ "ಲೈಕ್"ಗಳನ್ನು ವನ್ನು ಇಮ್ಮಡಿಯಷ್ಟು ಹೆಚ್ಚಿಸುವ ಗುರಿ ಇಟ್ಟುಕೊಳ್ಳಲಾಗಿದೆ
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವಗಳ ಭಾಗವಾಗಿ ಉತ್ಸವ ಥೀಮ್ ನ ಒಂದು ಆಯಾಮದ ಸುತ್ತ ಒಂದು ವಿಶೇಷ ಉಪನ್ಯಾಸ/ಸಂವಾದ, ಓದುಗರ ವೇದಿಕೆ, ಜನಶಕ್ತಿ ಬಳಗದ ಸಮಾವೇಶ, ಪ್ರಸಾರಾಂದೋಲನದ ಉದ್ಘಾಟನೆ ಇರುತ್ತದೆ.
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವ, ಬಳಗದ ಸಮಾವೇಶದಿಂದ ಆರಂಭಿಸಿ ಎರಡು ವಾರಗಳ ಕಾಲ ಜಿಲ್ಲಾ ಮಟ್ಟದ ಪ್ರಸಾರಾಂದೋಲನ ನಡೆಸಲಾಗುತ್ತದೆ
- ಇನ್ನಷ್ಟು ವ್ಯಾಪಕವಾಗಿ ಪಕ್ಷದ ಮತ್ತು ನಮ್ಮ ಚಳುವಳಿಯ ಹೊರಗಿರುವ ಎಡ/ಪ್ರಜಾಸತ್ತಾತ್ಮಕ ಬುದ್ಧಿಜೀವಿಗಳು ಚಳುವಳಿಕಾರರನ್ನು ವಿಶೇಷಾಂಕದ ಲೇಖಕರಾಗಿ ಮತ್ತು ಇತರ ಎಲ್ಲಾ ಚಟುವಟಿಕೆಗಳಲ್ಲಿ ಒಳಗೊಳ್ಳಲು ಪ್ರಯತ್ನಿಸಬೇಕು.
- ಜನಶಕ್ತಿ ಬಳಗದ ರಾಜ್ಯ ಮಟ್ಟದ ಒಂದು ಸಾಮಾಜಿಕ ಮಾಧ್ಯಮ ಕಾರ್ಯಾಗಾರವನ್ನು ಕಾರ್ಯಾಗಾರವನ್ನು ಜುಲೈ ನಲ್ಲಿ ಸಂಘಟಿಸಲಾಗುತ್ತದೆ
- ಜನಶಕ್ತಿಯ ಮುಂದಿನ ಬೆಳವಣಿಗೆಗೆ ನಿಧಿ ಸ್ಥಾಪಿಸಲು ವಿಶೇಷಾಂಕದ ಜಾಹೀರಾತುಗಳ ಮೂಲಕ ರೂ. 25 ಲಕ್ಷದ ನಿಧಿಯ ಗುರಿ ಇಟ್ಟುಕೊಳ್ಳಲಾಗಿದೆ.

ಆಳ್ವಾಸ್ ವಿದ್ಯಾರ್ಥಿನಿ ಕಾವ್ಯಾ ನಿಗೂಢ ಸಾವು : ತನಿಖೆ ಆಗ್ರಹ

ವಾಸುದೇವ ಉಚ್ಚಿಲ್

ಮೂಡಬಿದರೆಯ ಪ್ರತಿಷ್ಠಿತ ಆಳ್ವಾಸ್ ವಿದ್ಯಾಸಂಸ್ಥೆಗಳ ಹೈಸ್ಕೂಲು ವಿಭಾಗದ 15 ವರ್ಷ ಪ್ರಾಯದ ಕಾವ್ಯಾ ಎಂಬ ಬಾಲಕಿ ಸಂಸ್ಥೆಯ ಹಾಸ್ಟೇಲಿನಲ್ಲಿ ಜುಲಾಯಿ 25 ರಂದು ಸೀರೆ ಬಳಸಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂಬ ವರದಿಯಾಗಿದೆ. ಬಾಲಕಿ ಕಾವ್ಯಾ ಬ್ಯಾಡ್ಮಿಂಟನ್ ಆಟಗಾರ್ತಿಯಾಗಿದ್ದು, ಆಟದಲ್ಲಿನ ಪ್ರತಿಭೆಯಿಂದಲಾಗಿ ಆಳ್ವಾಸ್ ಸಂಸ್ಥೆಯಲ್ಲಿ ಆಯ್ಕೆಯಾಗಿದ್ದು ಹಾಸ್ಟೇಲಿನಲ್ಲಿದ್ದು ತರಬೇತಿ ಹಾಗೂ ಶಾಲಾ ವಿದ್ಯಾಭ್ಯಾಸ ಹೊಂದುತ್ತಿದ್ದಳು. ಮೂಡಬಿದರೆ ಸಮೀಪದ ಕಟೀಲು ಎಂಬಲ್ಲಿನ ಲೋಕೇಶ್ ಪೂಜಾರಿ ಹಾಗೂ ಬೇಬಿ ಎಂಬವರ ಮಗಳಾಗಿದ್ದು, ಆಳ್ವಾಸ್ ಸಂಸ್ಥೆಯ ಬಗ್ಗೆ ಗೌರವ ಹೊಂದಿ ಅಲ್ಲಿಗೆ ದಾಖಲು ಮಾಡಿದ್ದ ಕಾವ್ಯಾಳ ಹೆತ್ತವರು ಈಗ ತಮ್ಮ ಮಗಳ ಸಾವು ಅಥವಾ ಆತ್ಮಹತ್ಯೆಯ ಬಗ್ಗೆ ತಾವು ಸಂಶಯ ಹೊಂದಿದ್ದು ಈ ಬಗ್ಗೆ ತನಿಖೆ ನಡೆಯಬೇಕೆಂದು ದ.ಕ. ಜಿಲ್ಲಾ ಪೋಲೀಸ್ ವರಿಷ್ಟರನ್ನು ವಿನಂತಿಸಿರುವುದು ನಾಲ್ಕಾರು ದಿನಗಳ ಬಳಿಕವಷ್ಟೇ ಮಾಧ್ಯಮಗಳಲ್ಲಿ ವರದಿಯಾಗಿದೆ. ಆಳ್ವಾಸ್ ಸಂಸ್ಥೆಯ ಮುಖ್ಯಸ್ಥರಾದ ಡಾ|ಮೋಹನ್ ಆಳ್ವಾರವರು ತಮ್ಮ ಸಂಸ್ಥೆಯ ಪಾತ್ರ ಬಾಲಕಿಯ ಸಾವಿನಲ್ಲಿ ಇಲ್ಲವೆಂದೂ ನಾವೂ ತನಿಖೆಯನ್ನೇ ಅಪೇಕ್ಷಿಸುವುದಾಗಿಯೂ ಹೇಳಿದ್ದಾರೆ.

ಬಾಲಕಿ ಕಾವ್ಯಾಳ ಹೆತ್ತವರು ವ್ಯಕ್ತಪಡಿಸಿದ ಅನುಮಾನಗಳು ಇಂತಿವೆ: ಜುಲಾಯಿ 20 ರಂದು ಕಾವ್ಯಾಳನ್ನು ಮೃತ ಸ್ಥಿತಿಯಲ್ಲಿ ಗುರುತಿಸಿದ ತುಂಬ ಸಮಯದ ಬಳಿಕ ರಾತ್ರಿ 8 ಗಂಟೆಗೆ ಈ ಬಗ್ಗೆ ಹೆತ್ತವರಿಗೆ ತಿಳಿಸಲಾಗಿದೆ. ಅವರು ಓಡೋಡಿ 9 ಗಂಟೆಗೆ ಮೂಡಬಿದರೆ ತಲಪುವ ವೇಳೆಗೆ ಮಗಳ ದೇಹವನ್ನು ಶವಾಗಾರದಲ್ಲಿ ಇರಿಸಲಾಗಿತ್ತು. ಕೊಠಡಿಯೊಳಗೆ ಬಾಗಿಲ ಚಿಲಕ ಹಾಕಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಹೇಳಲಾದ ಬಾಲಕಿಯ ದೇಹವನ್ನು ಹೊರತರಲು ಬೇರೊಬ್ಬ ಬಾಲಕಿಯನ್ನು ವೆಂಟಿಲೇಟರ್ ಮೂಲಕ ಒಳಕಳುಹಿಸಿ ಚಿಲಕ ತೆಗೆಸಲಾಗಿತ್ತು. ಸೀರೆಯಿಂದ ನೇಣು ಹಾಕಿಕೊಳ್ಳಲು ಬಾಲಕಿಗೆ ಸೀರೆ ಎಲ್ಲಿಂದ ಲಭ್ಯವಾಯಿತು? ಬಾಲಕಿ ಬರೆಯುತ್ತಿದ್ದಳೆನ್ನಲಾದ ಡೈರಿ ಎಲ್ಲಿದೆ? ತಂದೆ ತಾಯಿಯವರಿಗೆ ತಿಳಿಸಲು ಆಳ್ವಾಸ್ ಸಂಸ್ಥೆಯವರು ವಿಳಂಬ ಮಾಡಿದ್ದು ಏಕೆ?



ಈ ಘಟನೆಯ ಹಿನ್ನೆಲೆಯಲ್ಲಿ ಆಳ್ವಾಸ್ ಸಂಸ್ಥೆಯು ತಮ್ಮ ಪ್ರತಿಷ್ಠೆಗಾಗಿ ಕ್ರೀಡೆ ಹಾಗೂ ಸಾಂಸ್ಕೃತಿಕ ರಂಗದಲ್ಲಿ ಮಿತಿ ಮೀರಿದ ಒತ್ತಡವನ್ನು ಹಾಕುತ್ತಿದೆ ಎಂಬುದಾಗಿ ಈಗ ಅನೇಕ ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದಾರೆ. ಈ ಒತ್ತಡ ಎಷ್ಟಿರುತ್ತದೆ ಎಂದರೆ ಅನೇಕ ವಿದ್ಯಾರ್ಥಿಗಳು ಪ್ರತೀ ವರ್ಷ ಅರ್ಧದಲ್ಲೇ ಆ ಸಂಸ್ಥೆಯನ್ನು ಬಿಟ್ಟು ಊರಿಗೇನೇ ವಾಪಾಸ್ಸಾಗುವ ವರದಿಗಳಿವೆ. ಕ್ರೀಡಾ ತರಬೇತಿಗಾಗಿ ಮೂಡಬಿದರೆ ಸುತ್ತಮುತ್ತಲಿನ ನಾಲ್ಕೈದು ಶಾಲೆಗಳ ದೈಹಿಕ ಶಿಕ್ಷಕರನ್ನು ಬೆಳಿಗ್ಗೆ ಹಾಗೂ ಸಾಯಂಕಾಲದ ಅವಧಿಯಲ್ಲಿ ಬಳಸುತ್ತಿದ್ದಾರೆಂದೂ, ಈ ಶಿಕ್ಷಕರು ತಾಲೂಕು ಕ್ರೀಡಾಕೂಟಗಳಲ್ಲೋ, ಜಿಲ್ಲಾ ಕ್ರೀಡಾಕೂಟಗಳಲ್ಲೋ ಪ್ರತಿಭಾವಂತ ಕ್ರೀಡಾಪಟುಗಳ ತಲೆಹಿಡಿಯುವ ಕೆಲಸ ಮಾಡುತ್ತಿರುವರೆಂದೂ ಈ ಮಕ್ಕಳನ್ನು ಆಳ್ವಾಸ್ ಸಂಸ್ಥೆಯಲ್ಲಿ ಉಚಿತ ಶಿಕ್ಷಣ ಕೊಡಿಸುವುದಾಗಿ ಹೇಳಿ ಆ ಮಕ್ಕಳ ಹೆತ್ತವರಿಗೆ ಒತ್ತಡ ಹಾಕುತ್ತಿದ್ದಾರೆಂದೂ ತಿಳಿದು ಬರುತ್ತದೆ. ಉಚಿತ ವಿದ್ಯಾಭ್ಯಾಸದ ಲಾಲಸೆಯಿಂದ ಕಳುಹಿಸಲ್ಪಟ್ಟ ಕ್ರೀಡಾಪಟುಗಳಾದ ವಿದ್ಯಾರ್ಥಿಗಳು ದೈಹಿಕ ಶ್ರಮದ ಜೊತೆಗೆ ಅನೇಕ ಮಾನಸಿಕ ಒತ್ತಡಕ್ಕೂ ಒಳಗಾಗುತ್ತಿದ್ದಾರೆಂದೂ ಹೇಳಲಾಗಿದೆ. ಆಳ್ವಾಸ್ ಸಂಸ್ಥೆ ಪ್ರೌಢಶಾಲೆಗೆ ಅನುಮತಿ ಪಡೆದಿದೆಯೇ ಹೊರತು ವಸತಿ ಸಹಿತ ಶಾಲೆಗೆ ಅನುಮತಿ ಪಡೆದಿಲ್ಲವೆಂದು ತಿಳಿದು ಬರುತ್ತದೆ. ಈಗಾಗಲೇ ಬೇರೆ ಬೇರೆ ವಿದ್ಯಾರ್ಥಿ ಸಂಘಟನೆಗಳು ಕಾವ್ಯಾ ಸಾವಿನ ಬಗ್ಗೆ ತನಿಖೆಯಾಗಬೇಕೆಂದು ಜಿಲ್ಲಾ ಪೋಲೀಸ್ ಅಧಿಕಾರಗಳನ್ನು ಆಗ್ರಹಿಸಿವೆ. ಸರ್ವ ಕಾಲೇಜು ವಿದ್ಯಾರ್ಥಿ ಸಂಘದ ವತಿಯಿಂದ ಜುಲಾಯಿ 28 ರಂದು ಮಂಗಳೂರು ನೆಹರೂ ಮೈದಾನಿನಲ್ಲಿ ಪ್ರತಿಭಟನೆ ನಡೆದಿದೆ.

ಮಂಗಳೂರಿನಲ್ಲಿ ಎಸ್‌ಎಫ್‌ಐ, ಡಿವೈಎಫ್‌ಐ ಪ್ರತಿಭಟನೆ:

ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಜುಲಾಯಿ 29 ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಕಾವ್ಯಾ ಸಾವಿನ ತನಿಖೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ನಗರ ದಕ್ಷಿಣ ಸಮಿತಿ ಕಾರ್ಯದಶಿ ಸುನಿಲ್ ಕುಮಾರ್ ಬಜಾಲ್, ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್, ಡಿವೈಎಫ್‌ಐ ಜಿಲ್ಲಾ ಸಮಿತಿಯ ಅಧ್ಯಕ್ಷ ದಯಾನಂದ ಶೆಟ್ಟಿ, ಸದಸ್ಯರಾದ ಸಾದಿಕ್ ಕಣ್ಣೂರು, ನವೀನ್ ಕೊಂಚಾಡಿ, ಎಸ್‌ಎಫ್ ಜಿಲ್ಲಾ ಸಮಿತಿಯ ಚರಣ್ ಪಂಜಿಮೊಗರು, ಮಾಧುರಿ ಬೋಳಾರ್, ಮಯೂರಿ ಬೋಳಾರ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ರಾಜ್ಯದ ಹಲವು ಜಿಲ್ಲೆಗಳಲ್ಲಿ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಘಟಕಗಳು ಪ್ರತಿಭಟನೆ ನಡೆಸಿದ ವರದಿಗಳು ಬಂದಿವೆ.

ಕಾವ್ಯಾ ಮನೆಗೆ ಜಿ.ವಿ.ಶ್ರೀರಾಮರೆಡ್ಡಿ ಭೇಟಿ ಮತ್ತು ತನಿಖೆಗಾಗಿ ಸರಕಾರಕ್ಕೆ ಆಗ್ರಹ:

ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಅವರು ಜುಲಾಯಿ 30 ರಂದು ಕಟೀಲಿನಲ್ಲಿರುವ ಕಾವ್ಯಾಳ ಮನೆಗೆ ಭೇಟಿಯಿತ್ತು ತಂದೆ ತಾಯಿ ಕುಟುಂಬದವರಿಗೆ ಸಾಂತ್ವಾನ ನೀಡಿದರು. ಅವರೊಂದಿಗೆ ಸಿಪಿಐ(ಎಂ)ನ ನಿಯೋಗವೂ ಜೊತೆ–ಗೂಡಿತ್ತು. ಕುಟುಂಬದವರಿಂದ ಮಾಹಿತಿ ಪಡೆದ ಬಗೆ ರಾಜ್ಯ ಸರಕಾರದ ಮುಂದೆ 3 ಮುಖ್ಯ ಬೇಡಿಕೆಗಳನ್ನು ಜಿ.ವಿ,.ಶ್ರೀರಾಮರೆಡ್ಡಿಯವರ ಮುಂದಿಟ್ಟರು. (1) ಕಾವ್ಯಾಳ ನಿಗೂಢ ಸಾವಿನ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ನಡೆಸಬೇಕು. (2) ಆಳ್ವಾಸ್ ಸಂಸ್ಥೆಯ ಬಗ್ಗೆ ಜಿಲ್ಲೆಯ ಪೋಲೀಸ್ ಇಲಾಖೆ ನಿರ್ಬಿಢೆಯಿಂದ ತನಿಖೆ ಮಾಡಲಾರದ್ದರಿಂದ, ಜಿಲ್ಲೆಯ ಹೊರಗಿನ ಪೋಲೀಸ್ ಅಧಿಕಾರಿಗಳಿಂದ ತನಿಖೆ ನಡೆಸಬೇಕು. (3) ಕಾವ್ಯಾಳ ಸಂತ್ರಸ್ತ ಕುಟುಂಬಕ್ಕೆ ರಾಜ್ಯ ಸರಕಾರ ಮತ್ತು ಆಳ್ವಾಸ್ ಸಂಸ್ಥೆ ಎರಡೂ ಪರಿಹಾರ ನೀಡಬೇಕು.

ಜಿ.ವಿ. ಶ್ರೀರಾಮರೆಡ್ಡಿಯವರ ಜೊತೆ ಭೇಟಿಯಿತ್ತ ಸಿಪಿಐ(ಎಂ) ನಿಯೋಗದಲ್ಲಿ ದ.ಕ.ಜಿಲ್ಲಾ ಸಮಿತಿಯ ಯಾದವ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಯೋಗೀಶ್ ಜಪ್ಪಿನಮೊಗರು, ಉಳ್ಳಾಲ ವಲಯದ ಡಿವೈಎಫ್‌ಐ ಮುಖಂಡರಾದ ಮಹಾಬಲ ದೆಪ್ಪೆಲಿಮಾರ್, ಮಿಥುನ್ ಕುತ್ತಾರ್, ರಿಯಾಜ್ ಜೊತೆಗೂಡಿದ್ದರು.

ಉಳ್ಳಾಲದಲ್ಲಿ ಎಸ್‌ಎಫ್‌ಐ ಡಿವೈಎಫ್‌ಐ ಪ್ರತಿಭಟನೆ:

ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಉಳ್ಳಾಲ ವಲಯ ಸಮಿತಿ ನೇತೃತ್ವದಲ್ಲಿ ಕುತ್ತಾರ್ ಜಂಕ್ಷನ್‌ನಲ್ಲಿ ಜುಲಾಯಿ 31 ರಂದು ಮೊಂಬತ್ತಿ ಮೆರವಣಿಗೆ ಮೂಲಕ ಪ್ರತಿಬಟನೆ ನಡೆಸಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ ಎಸ್‌ಎಫ್‌ಐ ದ.ಕ.ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್, ಉಳ್ಳಾಲ ವಲಯ ಸಿಪಿಐ(ಎಂ) ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಮಾತನಾಡಿ, ಕಾವ್ಯಾಳ ನಿಗೂಢ ಸಾವಿನ ಬಗ್ಗೆ ತನಿಖೆ ನಡೆಸಬೇಕೆಂದು ಆಗ್ರಹಿಸಿದರು. ಡಿವೈಎಫ್‌ಐ ಉಳ್ಳಾಲ ವಲಯ ಮುಖಂಡರು ಹಾಗೂ ಎಸ್‌ಎಫ್‌ಐ ಮುಖಂಡರು ನೇತೃತ್ವ ನೀಡಿದ್ದರು.

ಬೀದಿ ಬದಿ ವ್ಯಾಪಾರಸ್ಥರಿಂದ ಪ್ರತಿಭಟನೆ:

ಆಗಸ್ಟ್ 2 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಬೀದಿ ಬದಿ ವ್ಯಾಪಾರಸ್ಥರ ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಸಂಘದ ಗೌರವಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಸಂಘದ ಅಧ್ಯಕ್ಷರಾದ ಮಹಮ್ಮದ್ ಮುಸ್ತಾಫ, ಕಾರ್ಯದರ್ಶಿ ಸಂತೋಷ್ ಆರ್.ಎಸ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಜನವಾದಿ ಮಹಿಳಾ ಸಂಘದಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆ:

ಜನವಾದಿ ಮಹಿಳಾ ಸಂಘಟನೆಯ ದ.ಕ.ಜಿಲ್ಲಾ ಸಮಿತಿಯ ವತಿಯಿಂದ ಆಗಸ್ಟ್ 1 ರಂದು ನಿಯೋಗ ತೆರಳಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಕಾವ್ಯಾ ನಿಗೂಢ ಸಾವಿನ ತನಿಖೆ ಶೀಘ್ರ ನಡೆಸಬೇಕೆಂದು ಆಗ್ರಹಿಸಲಾಯಿತು. ಸಮಿತಿ ಅಧ್ಯಕ್ಷೆ ಜಯಂತಿ ಶೆಟ್ಟಿ, ಕಾರ್ಯದರ್ಶಿ ರಾಧಾ ಮೂಡಬಿದರೆ ನಿಯೋಗದ ನೇತೃತ್ವ ವಹಿಸಿದ್ದರು.

ನಾಳಿನ ಕಾರ್ಯಕ್ರಮಗಳು

ಜಿಲ್ಲಾ ಮಟ್ಟದ ಜನಶಕ್ತಿ ಪ್ರಸಾರಾಂದೋಲನ, ಸಮಾವೇಶಗಳು ಜುಲೈ 23 ರಿಂದ ಅಗಸ್ಟ್ 6

ಜಿಲ್ಲಾ ಜನಶಕ್ತಿ ಉತ್ಸವಗಳು: ಕಲಬುರಗಿ, ತುಮಕೂರು – ಆ. 6, ಕೋಲಾರ – ಆ. 11, ಬಳ್ಳಾರಿ ಅ. 17.

ಕಾರ್ಮಿಕರ ರಾಜ್ಯ ಜಾಥಾ ಜುಲೈ 29– ಅಗಸ್ಟ್ 13, ಸಿಐಟಿಯು, ರಾಜ್ಯಾದ್ಯಂತ

ಕ್ವಿಟ್ ಇಂಡಿಯಾ 75 ಅಗಸ್ಟ್ 9 ರಾಜ್ಯಾದ್ಯಂತ

ಕಾರ್ಮಿಕರ ಅಹೋರಾತ್ರಿ ಧರಣಿ ಅಗಸ್ಟ್ 14 ಸಿಐಟಿಯು, ರಾಜ್ಯಾದ್ಯಂತ

ಜನಶಕ್ತಿ ರಾಜ್ಯ ಮಟ್ಟದ ಉತ್ಸವ 2017 ಅಗಸ್ಟ್ 19 ಬೆಂಗಳೂರು

ಸಮಾಜವಾದಿ ಕ್ರಾಂತಿ ಮತ್ತು ಸಂಸ್ಕೃತಿ ಅಗಸ್ಟ್ 20 ಬೆಂಗಳೂರು

ಜಿಲ್ಲಾ ಮಟ್ಟದಲ್ಲಿ ರೈತರ ಪ್ರತಿಭಟನೆ ಆಗಸ್ಟ್ 21 ರಾಜ್ಯಾದ್ಯಂತ

ಸಾಮ್ರಾಜ್ಯಶಾಹಿ ವಿರೋಧಿ ದಿನ, ಸೆಪ್ಟೆಂಬರ್ 1

ಸೌಹಾರ್ದ ಕರ್ನಾಟಕ ಸಮಾವೇಶ, ಸೆಪ್ಟೆಂಬರ್ 5 ಬೆಂಗಳೂರು

ಸಾರ್ವತ್ರಿಕ ಮಹಾಮುಷ್ಕರ ಸೆಪ್ಟೆಂಬರ್ 14

ಬೀದಿಬದಿ ವ್ಯಾಪಾರಸ್ಥರ ಕಾನೂನುಬದ್ಧ ಹಕ್ಕುಗಳನ್ನು ರಕ್ಷಿಸಿರಿ: ಬಜಾಲ್

ಬೀದಿಬದಿ ವ್ಯಾಪಾರ ನಾಗರಿಕ ಸಮಾಜದ ಅವಿಭಾಜ್ಯ ಅಂಗ. ಅದಕ್ಕೆ ಸರಿಯಾದ ವ್ಯವಸ್ಥೆಗೊಳಿಸಬೇಕಾದದ್ದು ಸ್ಥಳೀಯಾಡಳಿತದ ಮೂಲಭೂತ ಕರ್ತವ್ಯವಾಗಿದೆ. ಬೀದಿಬದಿ ವ್ಯಾಪಾರಸ್ಥರ ಜೀವನೋಪಾಯ ಹಕ್ಕುಗಳ ರಕ್ಷಣಾ ಮಸೂದೆ ದೇಶದ ಸಂಸತ್ತಿನಲ್ಲಿ ಅಂಗೀಕಾರಗೊಂಡು 4 ವರ್ಷಗಳು ಕಳೆದರೂ, ಅದಕ್ಕೆ ಪೂರಕವಾಗಿ ವಿಶೇಷ ನಿಯಾಮಾವಳಿ ರೂಪಿಸಬೇಕಾದ ರಾಜ್ಯ ಸರಕಾರವಂತೂ ತೀರಾ ನಿರ್ಲಕ್ಷ್ಯ ವಹಿಸಿದರ ಪರಿಣಾಮವಾಗಿ ಸ್ಥಳೀಯಾಡಳಿತಗಳು ಗಮನ ಹರಿಸದೆ ಬೀದಿಬದಿ ವ್ಯಾಪಾರಸ್ಥರನ್ನು ಎತ್ತಂಗಡಿ ಮಾಡಲು ಹೊಂಚುಹಾಕುತ್ತಿದೆ. ಬೀದಿಬದಿ ವ್ಯಾಪಾರಸ್ಥರ ಕಾನೂನುಬದ್ಧ ಹಕ್ಕುಗಳನ್ನು ರಕ್ಷಿಸುವ ಬದಲು ಅವರನ್ನು ಸರ್ವನಾಶ ಮಾಡಲು ಮಂಗಳೂರು ಮಹಾನಗರ ಪಾಲಿಕೆ ನಿರಂತರ ದಾಳಿಯನ್ನು ನಡೆಸುವ ಮೂಲಕ ವ್ಯವಸ್ಥಿತ ಪಿತೂರಿ ನಡೆಸುತ್ತಿರುವುದು ಅಕ್ಷಮ್ಯ ಅಪರಾಧವಾಗಿದೆ ಎಂದು ಸಿಐಟಿಯು ಸಂಯೋಜಿತಗೊಂಡಿರುವ ದ.ಕ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘದ ಗೌರವಾಧ್ಯಕ್ಷರಾದ ಸುನೀಲ್ ಕುಮಾರ್ ಬಜಾಲ್‌ರವರು ಆಕ್ರೋಶ ವ್ಯಕ್ತಪಡಿಸಿದರು.



ಬೀದಿಬದಿ ವ್ಯಾಪಾರಸ್ಥರ ಮೇಲಿನ ದಾಳಿ ನಿಲ್ಲಿಸಿ, ಪರ್ಯಾಯ ವ್ಯವಸ್ಥೆ ಕಲ್ಪಿಸಲು ಒತ್ತಾಯಿಸಿ ಬೀದಿಬದಿ ವ್ಯಾಪಾರಸ್ಥರು ನಗರದಲ್ಲಿ ಅಗಸ್ಟ್ 1ರಂದು ಮಂಗಳೂರು ಮಹಾನಗರ ಪಾಲಿಕೆ ಕಛೇರಿಯೆದುರು ನಡೆಸಿದ ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸುತ್ತಾ ಅವರು ಮಾತನಾಡಿದರು.

ಮುಂದುವರಿಸುತ್ತಾ ಅವರು, 2017 ಜನವರಿ 16ರಂದು ಟಿ.ವಿ.ಸಿ. ಸಭೆ ನಡೆದು 2ನೇ ಹಂತದ ಗುರುತು ಚೀಟಿ ನೀಡಲು ತೀರ್ಮಾನಿಸಲಾಗಿತ್ತು. ಜನವರಿ 31ರೊಳಗೆ ಅದರ ಪ್ರಕ್ರಿಯೆ ಮುಗಿಸಬೇಕೆಂದು ಅದಕ್ಕಾಗಿ ಕೋರ್ ಕಮಿಟಿಯನ್ನು ರಚಿಸಲಾಗಿತ್ತು. ಆದರೆ ಈ ಬಗ್ಗೆ ಎಳ್ಳಷ್ಟು ಕಾಳಜಿ ವಹಿಸದ ಮನಪಾ ಜುಲೈ 10ರಂದು ಮತ್ತೆ ಟಿ.ವಿ.ಸಿ. ಸಭೆ ಕರೆದು,

ಪುಟ 13 ಕ್ಕೆ

ಪರಮಶಿವಯ್ಯ ವರದಿ ಮಾತ್ರ ಕೋಲಾರದ ನೀರಿನ ಸಮಸ್ಯೆಗೆ ಪರಿಹಾರ : ಜಿವಿಎಸ್

ಅವಿಭಜಿತ ಕೋಲಾರ ಜಿಲ್ಲೆಗೆ ಪರಮಶಿವಯ್ಯ ವರದಿ ಅನ್ವಯ ಪಶ್ಚಿಮಘಟ್ಟಗಳಲ್ಲಿ ಸುರಿಯುವ ಮಳೆ ನೀರನ್ನು ಹರಿಸುವುದರ ಹೊರತು ಬೇರೆ ಯಾವುದೇ ಯೋಜನೆಗಳಿಂದ ನೀರು ಬರುವುದಿಲ್ಲ. ಎಂದು ಜಿ.ವಿ.ಶ್ರೀರಾಮರೆಡ್ಡಿ, ಸಿಪಿಎಂ ರಾಜ್ಯ ಕಾರ್ಯದರ್ಶಿ ಅವರು ಹೇಳಿದರು. ಅವರು ಶಾಶ್ವತ ನೀರಾವರಿ ಯೋಜನೆ ಬಗ್ಗೆ ಕೋಲಾರದಲ್ಲಿ ಅಗಸ್ಟ್ 1ರಂದು ನಡೆದ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಿದ್ದರು.

ಕೋಲಾರ ಜಿಲ್ಲೆಯಲ್ಲಿ 2980, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1243 ಕೆರೆಗಳಿವೆ. ಇವುಗಳನ್ನು ತುಂಬಿಸಲು 41.50 ಟಿಎಂಸಿ ನೀರು ಬೇಕು.ಕುಡಿಯುವ ನೀರಿಗಾಗಿ ಸುಮಾರು 20 ಟಿಎಂಸಿ ನೀರು ಬೇಕಿದೆ. ಇಷ್ಟು ಪ್ರಮಾಣದ ನೀರು ಈಗ ಸರಕಾರ ಜನರ ದಾರಿ ತಪ್ಪಿಸಲು ಹೇಳುತ್ತಿರುವ ಯಾವ ಯೋಜನೆಗಳಿಂದಲೂ ಬರುವುದಿಲ್ಲ. ರಾಜ್ಯದಲ್ಲಿ ವಾರ್ಷಿಕ 3500 ಟಿಎಂಸಿ ಮಳೆ ನೀರು ಲಭ್ಯವಿದೆ. ಈ ಪೈಕಿ ಕೇವಲ 180 ಟಿಎಂಸಿ ನೀರನ್ನು ಮತ್ತು ಕೃಷ್ಣಾ ಬಿ ಸ್ಕೀಂನಿಂದ 80 ಟಿಎಂಸಿ ನೀರನ್ನು ಕ್ರೋಢೀಕರಿಸಿ ಹರಿಸಿದರೆ ಇಡೀ ಮಧ್ಯ ಕರ್ನಾಟಕದ ಎಲ್ಲಾ ಜಿಲ್ಲೆಗಳು



ನೀರಾವರಿ ಸೌಲಭ್ಯವನ್ನು ಪಡೆದುಕೊಳ್ಳುತ್ತವೆ. ಇದನ್ನೇ ನೀರಾವರಿ ತಜ್ಞ ಪರಮಶಿವಯ್ಯ ತಮ್ಮ ವರದಿಯಲ್ಲಿ ಪ್ರತಿಪಾದಿಸಿದ್ದಾರೆ ಎಂದು ಅವರು ವಿವರಿಸಿದರು.

ಪರಮಶಿವಯ್ಯ ಯೋಜನೆಗೆ ಸಂಬಂಧಿಸಿದಂತೆ ಮಾಲಾ ಕಾಲುವೆ ಸಾಧ್ಯವಿಲ್ಲವೆನ್ನುವ ಅಭಿಪ್ರಾಯವನ್ನು ತಜ್ಞರು ವ್ಯಕ್ತಪಡಿಸಿದ್ದರು. ಮಾಲಾ ಕಾಲುವೆ ಸಾಧ್ಯವಿಲ್ಲವೆನ್ನುವುದಾದರೆ ಸುರಂಗ ಕಾಲುವೆಗಳ ಮೂಲಕ ನೀರು ಹರಿಸಲು ಸಾಧ್ಯವಿದೆ. ಆದ್ದ-ರಿಂದ ಪರಮಶಿವಯ್ಯ ಯೋಜನೆಯನ್ನಷ್ಟೆ ಮಾತ್ರವೇ ಅವಿಭಜಿತ ಕೋಲಾರ ಜಿಲ್ಲೆಗಳಿಗೆ ನೀರು ಹರಿಸಲು ಸಾಧ್ಯ. ಇದಲ್ಲದಿದ್ದರೂ ಸರಕಾರ ಯಾವುದಾದರೂ ಮೂಲದಿಂದ 65 ಟಿಎಂಸಿ ನೀರನ್ನು ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಹರಿಸಲಿ ಎಂದು ಅವರು ಸವಾಲು ಎಸೆದರು.

ರಾಜಕಾರಣಿಗಳು ಅವಿಭಜಿತ ಕೋಲಾರ ಜಿಲ್ಲೆಯ ನೀರಿನ ಸಮಸ್ಯೆಗಳನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು ಮಾತನಾಡುತ್ತಾ ದಾರಿ ತಪ್ಪಿಸಲು ಅನೇಕ ಯೋಜನೆಗಳನ್ನು ಹರಿಯಬಿಡುತ್ತಿದ್ದಾರೆ. ಯರಗೋಳ್ ಯೋಜನೆಯಲ್ಲಿ ನೀರು ಬಾರದಿದ್ದರೂ ಪೈಪುಗಳನ್ನು ಅಳವಡಿಸಲಾಗಿದೆ, ಎತ್ತಿನ ಹೊಳೆ ಯೋಜನೆಯಲ್ಲಿ ಕೋಲಾರ ಜಿಲ್ಲೆಗೆ ನೀರು ಬರುವ ಯಾವುದೇ ಸಾಧ್ಯತೆಗಳಿಲ್ಲ, ಇನ್ನೂ ಕೆ.ಸಿ. ವ್ಯಾಲಿ ಯೋಜನೆಯಡಿ ಎಷ್ಟು ಟಿಎಂಸಿ ನೀರು ಲಭ್ಯವಿದೆ ಎನ್ನುವುದೇ ತಿಳಿಯದೇ ಪೈಪುಗಳನ್ನು ಹಾಕುವ ರಾಜಕೀಯ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಕೃಷ್ಣಾ, ಕಾವೇರಿ ಮತ್ತು ಗೋದಾವರಿ ನದಿ ಪಾತ್ರಗಳಿದ್ದು, ಕೋಲಾರ ಜಿಲ್ಲೆಯು ಕೃಷ್ಣಾ ನದಿ ಪಾತ್ರದ ವ್ಯಾಪ್ತಿಗೆ ಬರುತ್ತದೆ. ಆದರೆ ಈ ಬಗ್ಗೆ ಯಾವುದೇ ರಾಜಕೀಯ ಪಕ್ಷವಾಗಲಿ, ಜನಪ್ರತಿನಿಧಿಗಳಾಗಲಿ ಮಾತನಾಡಿ ಕೃಷ್ಣಾ ನೀರಿನ ಪಾಲನ್ನು ಕೇಳಲು ಸಿದ್ಧವಿಲ್ಲ ಏಕೆಂದರೆ, ರಾಜಕೀಯ ಅಭದ್ರತೆ ಅವರನ್ನು ಕಾಡುತ್ತಿದೆ.

ಕೋಲಾರ ಜಿಲ್ಲೆಯಲ್ಲಿ 17 ವರ್ಷಗಳ ಹಿಂದೆ ಶಾಶ್ವತ ನೀರಾವರಿ ಹೋರಾಟವನ್ನು ಪಕ್ಷಾತೀತವಾಗಿ ಆರಂಭಿಸಲಾಗಿತ್ತು. ಆಗ ಸುಮ್ಮನೆ ಇದ್ದವರೆಲ್ಲಾ ಈಗ ನೀರಾವರಿ ಯೋಜನೆಗಳ ಕುರಿತಂತೆ ಮಾತನಾಡುತ್ತಾ ಪ್ರಚಾರಕ್ಕಾಗಿ ದಿಕ್ಕು ತಪ್ಪಿಸುತ್ತಿದ್ದಾರೆ. ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ವರ್ಷಕ್ಕೂ ಮೀರಿ ನಡೆಸಿದ ನೀರಾವರಿ ಧರಣಿಯ ಸಾಧನೆ ಏನು? ಅಘನಾಶಿನಿ ಯೋಜನೆಯನ್ನು ಹರಿಯಬಿಟ್ಟವರು ಈಗ ಎಲ್ಲಿದ್ದಾರೆ? ವರ್ಷದಲ್ಲಿ ನೀರು ಕೊಡುತ್ತೇನೆಂದ ವೀರಪ್ಪಮೊಯ್ಲಿ ಎರಡು ಅವಧಿ ಪೂರ್ಣ ಗೊಳಿಸಿದರೂ ನೀರು ನೀಡಲು ಸಾಧ್ಯವಾಗಿಲ್ಲ ಯಾಕೆ ಎಂದು ಅವರು ಪ್ರಶ್ನಿಸಿದರು.

ರಾಜ್ಯದ ವಿವಿಧೆಡೆ ಹಮಾಲಿ ಕಾರ್ಮಿಕರ ಪ್ರತಿಭಟನೆ
ಸ್ಮಾರ್ಟ್ ಕಾರ್ಡ್, ಭವಿಷ್ಯನಿಧಿ ಯೋಜನೆ ಜಾರಿಗೆ ಆಗ್ರಹ



ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್, ಸಿಐಟಿಯು ನಿರಂತರ ಹೋರಾಟದ ಫಲವಾಗಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತುತ ಬಜೆಟ್‌ನಲ್ಲಿ ಹಮಾಲಿ ಕಾರ್ಮಿಕರು ಸೇರಿದಂತೆ 6 ವಿಭಾಗದ ಅಸಂಘಟಿತ ಕಾರ್ಮಿಕರಗೆ ಸ್ಮಾರ್ಟ ಕಾರ್ಡ, ಅಪಘಾತ ವಿಮೆ ಮತ್ತು ಭವಿಷ್ಯನಿಧಿ ಯೋಜನೆಯನ್ನು ಘೋಷಿಸಿದ್ದಾರೆ. ಆದರೇ ಹಮಾಲಿ ಕಾರ್ಮಿಕರ ಬದುಕಿನಲ್ಲಿ ಆಸರೆಯಾಗಬಲ್ಲ ಈ ಭವಿಷ್ಯನಿಧಿ ಯೋಜನೆ ಸರಕಾರ ಘೋಷಿಸಿದ್ದರು ಕೈಗೆಬಂದ ತುತ್ತು ಬಾಯಿಗೆ ಬರಲಿಲ್ಲ ಅನ್ನುವಂತಾಗಿದೆ. ಈ ಮಹತ್ವದ ಯೋಜನೆ ಜಾರಿ ಮಾಡಲು ಕೇವಲ 10 ಕೋಟಿ ರೂ. ತೆಗೆದಿರಿಸಿದ್ದು ಆನೆ ಹೊಟ್ಟೆಗೆ ಅರೇ ಕಾಸಿನ ಗಂಜಿ ನೀಡಿದಂತಿದೆ. ಈ ಹಿನ್ನಲೆಯಲ್ಲಿ ಸರಕಾರ ಪ್ರಸ್ತುತ ಬಜೆಟ್‌ನಲ್ಲಿ ಘೋಷಿಸಿದ ಸ್ಮಾರ್ಟ ಕಾರ್ಡ, ಅಪಘಾತ ವಿಮೆ ಮತ್ತು ಭವಿಷ್ಯನಿಧಿ ಯೋಜನೆಯನ್ನು ಪ್ರಸ್ತುತ ವರ್ಷದಲ್ಲಿಯೇ ಜಾರಿಮಾಡಬೇಕು ಮತ್ತು ಈ ಯೋಜನೆಗಳನ್ನು ಜಾರಿಮಾಡಲು ಅಗತ್ಯ ಹಣಕಾಸು ಸಂಪನ್ಮೂಲವನ್ನು ಒದಗಿಸಬೇಕೆಂದು ಒತ್ತಾಯಿಸಿ ರಾಜ್ಯದ ವಿವಿಡಡೆ ಹಮಾಲಿ ಕಾರ್ಮಿಕರು ಪ್ರತಿಭಟನೆ ನಡೆಸಿದರು.

ಇದೇ ಸಂದರ್ಭದಲ್ಲಿ ಎಪಿಎಂಸಿ ಹಮಾಲಿ ಕಾರ್ಮಿಕರಿಗೆ ಜಾರಿಯಾಗಿರುವ "ಕಾಯಕ ನಿಧಿ"ಯಡಿ ವೈದ್ಯಕೀಯ ವೆಚ್ಚದ ಮರುಪಾವತಿ ಸೌಲಭ್ಯವನ್ನು ಸದುಪಯೋಗ ಮಾಡಿಕೊಳ್ಳಲು ಮಾರ್ಗಸೂಚಿಗಳಿಗೆ ಕೆಲ ತಿದ್ದುಪಡಿಗಳನ್ನು ಮಾಡಬೇಕು. 60 ವರ್ಷ ಆದ ನಂತರ ಒಂದು ಬಾರಿ ರೂ. 50 ಸಾವಿರ ನಿವೃತ್ತಿ ಪರಿಹಾರ ನೀಡಬೇಕು ಮತ್ತು ವಸತಿ ಯೋಜನೆಯನ್ನು ಜಾರಿ ಮತ್ತು ಸ್ಥಳಿಯ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಲಾಯಿತು.

ಯಾದಗೀರ: 2017 ಜುಲೈ 12 ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದ ಹಮಾಲಿ ಕಾರ್ಮಿಕರು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ, ರಾಜ್ಯ ಮುಖಂಡರಾದ ಎಚ್. ತಿಪ್ಪಯ್ಯ, ಯೆಂಕಪ್ಪ ಕೆಂಗಲ್ ಸಂಘದ ಮುಖಂಡರಾದ ಶಂಕರ ಗೋಸಿ, ಪೀರಮಹ್ಮದ, ನಾಗಪ್ಪ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬಳ್ಳಾರಿ: 2017 ಜುಲೈ 20 ರಂದು ಗಾಂಧಿ ಭವನದಿಂದ ಮೆರವಣಿಗೆ ಮುಖಾಂತರ ಜಿಲ್ಲಾಧಿಕಾರಿಗಳ ಕಚೇರಿ ವರೆಗೆ ತೆರಳಿ ಪ್ರತಿಭಟನೆ ನಡೆಸಿದ ಹಮಾಲಿ ಕಾರ್ಮಿಕರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ, ಮುಖಂಡರಾದ ಎಚ್. ತಿಪ್ಪಯ್ಯ, ಬಂಡಿ ಬಸವರಾಜ, ಎಚ್.ಬಿ.ಓಬಳೇಶಪ್ಪ, ಬಿ.ಸುರೇಶ ಬಿ.ಎಲ್. ಈರಣ್ಣ, ತಿಪ್ಪೇಸ್ವಾಮಿ, ಸೋಮಪ್ಪ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ರಾಯಚೂರ: 2017 ಜುಲೈ 21 ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದ ಹಮಾಲಿ ಕಾರ್ಮಿಕರು ಹೆಚ್ಚುವರಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಸ್ಥಳೀಯ ವಸತಿ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು. ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ, ರಾಜ್ಯ ಮುಖಂಡರಾದ ಎಚ್. ತಿಪ್ಪಯ್ಯ, ಜಿಲ್ಲಾಧ್ಯಕ್ಷರಾದ ಯೆಂಕಪ್ಪ ಕೆಂಗಲ್

ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಎಚ್. ಪದ್ಮಾ, ಮುಖಂಡರಾದ ಮರಿಸ್ವಾಮಿ, ಡಿ.ಎಸ್.ಶರಣಬಸವ, ದಾವಲಸಾಬ ತಲೆಖಾನ, ಬಂಡಾರೆಪ್ಪ, ಲಕ್ಷ್ಮೀ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಹಾವೇರಿ : 2017 ಜುಲೈ 25 ರಂದು ತಹಶೀಲ್ದಾರ ಕಚೇರಿ ಎದುರು ಪ್ರತಿಭಟನೆ ನಡೆಸಿದ ಹಮಾಲಿ ಕಾರ್ಮಿಕರು ಮನವಿ ಸಲ್ಲಿಸಿದರು. ಸಿಐಟಿಯು ಜಿಲ್ಲಾ ಸಂಚಾಲಕ ವಿನಾಯಕ ಕುರಬರ, ಎಸ್‌ಎಫ್‌ಐ ಮುಖಂಡ ಸುಭಾಸ ಎಂ. ಹನಮಂತಪ್ಪ ಗೊರವರ, ಹಸನಸಾಬ ಮುಲ್ಲಾನವರ, ಅಲ್ಲಾಭಕ್ಷ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಲಕ್ಷ್ಮೇಶ್ವರ: 2017 ಜುಲೈ 31 ರಂದು ಎಪಿಎಂಸಿಯಿಂದ ಮೆರವಣಿಗೆ ಮುಖಾಂತರ ವಿಶೇಷ ತಹಶೀಲ್ದಾರ ಕಚೇರಿಗೆ ತೆರಳಿ ಪ್ರತಿಭಟನೆ ನಡೆಸಿದ ಹಮಾಲಿ ಕಾರ್ಮಿಕರು ಮನವಿ ಸಲ್ಲಿಸಿದರು. ಸಿಐಟಿಯು ಜಿಲ್ಲಾ ಅಧ್ಯಕ್ಷ ಮಹೇಶ ಹಿರೇಮಠ, ವಿನಾಯಕ ಕುರಬರ, ಮುಖಂಡರಾದ ಗೋವಿಂದಪ್ಪ ಸರಸೂರೆ, ಬಸವರಾಜ ಕೆರೂರ, ಹನಮಂತಪ್ಪ ಸರಸೂರೆ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ಬಳ್ಳಾರಿಯ ಕೂರುಗೊಡಿನಲ್ಲಿ ಮನೆ ನಿವೇಶನಕ್ಕಾಗಿ ಸತ್ಯಾಗ್ರಹ

ಬಳ್ಳಾರಿ ಜಿಲ್ಲೆಯ ಕೂರುಗೊಡ ತಾಲುಕಿನಲ್ಲಿ ಮನೆ ನೀವೇಶನಕ್ಕಾಗಿ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದಿಂದ ನಿರಂತರ ಪ್ರತಿಭಟನಾ ಸತ್ಯಾಗ್ರಹಕ್ಕೆ ಚಾಲನೆ ಕೊಡಲಾಯಿತು. ಈ ಸಂದರ್ಭದಲ್ಲಿ ಕೆ.ಪಿ.ಆರ್.ಎಸ್. ರಾಜ್ಯ ಉಪಾಧ್ಯಕ್ಷರಾದ ಜಿ.ವಿ.ಶ್ರೀರಾಮರೆಡ್ಡಿ, ಮತ್ತು ಸಿಐಟಿಯು ಮುಖಂಡರಾದ ಆರ್.ಎಸ್.ಬಸವರಾಜು ಉಪಸ್ಥಿತರಿದ್ದರು. ಸತ್ಯಾಗ್ರಹದ ಹಕ್ಕೊತ್ತಾಯಗಳು ಹೀಗಿವೆ:

* ಓರ್ವಾಯಿ ಮತ್ತು ಯಲ್ಲಾಪುರ ಗ್ರಾಮಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವವರಿಗೆ ಕೂಡಲೇ ನಿವೇಶನ ಹಕ್ಕು ಪತ್ರ ವಿತರಣೆ ಮಾಡಬೇಕು.
* ಕುರುಗೋಡಿನಲ್ಲಿ ಖಾಸಗಿ ಭೂಮಿ ಮತ್ತು ಬೈಲೂರಿನಲ್ಲಿ ಸರ್ಕಾರಿ ಭೂಮಿಗಳನ್ನು ಈಗಾಗಲೇ ನಿವೇಶನಕ್ಕಾಗಿ ಗುರುತು ಮಾಡಿದ್ದು, ಕೂಡಲೇ ಪ್ಲಾಟ್ ಮಾಡಿ, ಹಂಚಿಕೆ ಮಾಡಬೇಕು
* ಬಾದನಹಟ್ಟಿ, ಸಿದ್ದಮ್ಮನಹಳ್ಳಿ, ಏಳುಬೆಂಚಿ, ಗೆಣಿಕೆಹಾಳು, ಲಕ್ಷ್ಮೀಪುರ, ಹೆಚ್.ವೀರಾಪುರ, ಗ್ರಾಮಗಳಲ್ಲು ಕೂಡಲೇ ನಿವೇಶನ ಭೂಮಿ ಗುರುತಿಸಿ, ಸರ್ಕಾರಕ್ಕೆ ಖರೀದಿಗೆ ಶಿಫಾರಸು ಮಾಡಬೇಕು




700 ಕೃಷಿ ಕೂಲಿಕಾರರಿಂದ ತಾಲ್ಲೂಕು ಪಂಚಾಯತಿ ಕಛೇರಿಗೆ ಮುತ್ತಿಗೆ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮಳವಳ್ಳಿ ತಾಲ್ಲೂಕು ಸಮಿತಿಯು ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಬಾಕಿ ಹಣ ಹಾಗೂ ಕೆಲಸಕ್ಕಾಗಿ ಒತ್ತಾಯಿಸಿ 700 ಕ್ಕೂ ಹೆಚ್ಚು ಕೃಷಿ ಕೂಲಿಕಾರರು ಪುರಸಭೆ ಕಛೇರಿಯಿಂದ ಮೆರವಣಿಗೆ ಮೂಲಕ ತಾಲ್ಲೂಕು ಪಂಚಾಯತಿ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಲಿಂಗಾಯತ ಸ್ವತಂತ್ರ ಧರ್ಮ ವಚನಕಾರರ ಮೌಲ್ಯಗಳ ಪರವಿರುತ್ತಾ?

ಮುಖ್ಯವಾದ ಪ್ರಶ್ನೆಯೆಂದರೆ ತನ್ನನ್ನು ಪ್ರತ್ಯೇಕ ಧರ್ಮವೆಂದು ಗುರುತಿಸಿಕೊಳ್ಳುವ ಧರ್ಮವು ವಚನಕಾರರ ಮೌಲ್ಯಗಳ ಪರವಾಗಿರುತ್ತದೆಯೆ? ವಚನಕಾರರ ಚಿಂತನೆಗೆ ಸಂಪೂರ್ಣ ವಿರೋಧಿಯಾಗಿರುವ ಹಿಂದುತ್ವ ಸಿದ್ಧಾಂತವನ್ನು ದೂರವಿಡುತ್ತದೆಯೆ? ಎಲ್ಲಾ ಬಗೆಯ ಸಮಾನತೆಗಳನ್ನು ಒಪ್ಪಿಕೊಂಡ ವಚನಕಾರರ ಜೀವನ ದೃಷ್ಟಿಯನ್ನು ಸಮರ್ಥಿಸುತ್ತದೆಯ? ಏಕೆಂದರೆ ಈಗಿರುವ ಸ್ಥಿತಿಯಲ್ಲಿ ವೀರಶೈವ–ಲಿಂಗಾಯತ ಧರ್ಮವು ಹಲವಾರು ಉಪಜಾತಿಗಳುಳ್ಳ ಜಾತಿ ಮಾತ್ರವಾಗಿದೆ. ಕೇವಲ ಅಲ್ಪಸಂಖ್ಯಾತ ಪ್ರತ್ಯೇಕ ಧರ್ಮದ ಸರಕಾರಿ ಸವಲತ್ತುಗಳಿಗಾಗಿ ಇಂದಿನ ಪ್ರಯತ್ನಗಳು ಸೀಮಿತಗೊಂಡರೆ 12ನೇ ಶತಮಾನದ ಜಗತ್ತೇ ಕಂಡರಿಯದ ಸಾಮಾಜಿಕ ಕ್ರಾಂತಿಯ ಮೌಲ್ಯಗಳು ಈ ಹೊಸಧರ್ಮದ ಪ್ರಜ್ಞೆ ಹಾಗೂ ನಡುವಳಿಕೆಗಳಿಂದ ದೂರವಾಗಿಯೇ ಉಳಿಯುತ್ತವೆ.

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಇತ್ತೀಚೆಗೆ ವೀರಶೈವ–ಲಿಂಗಾಯತ ಧರ್ಮವು ಪ್ರತ್ಯೇಕ ಧರ್ಮವೇ ಎನ್ನುವ ಬಗ್ಗೆ ವ್ಯಾಪಕವಾಗಿ ಚರ್ಚೆ ನಡೆಯುತ್ತಿದೆ. ಇದು ಹೊಸದೇನಲ್ಲ. ಇಪ್ಪತ್ತನೇ ಶತಮಾನದ ಮೊದಲ ಭಾಗದಲ್ಲಿ ಕರ್ನಾಟಕದಲ್ಲಿ ಅನೇಕ ಜಾತಿ ಸಂಸ್ಥೆಗಳು, ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಶಿಕ್ಷಣ ಹಾಗೂ ಆಧುನಿಕತೆಗಳ ಪ್ರವೇಶದಿಂದಾಗಿ ಜಾಗೃತಗೊಂಡ ಈ ಜಾತಿಗಳು ತಮ್ಮ ಸದಸ್ಯರನ್ನು ಒಗ್ಗಟ್ಟಾಗಿಸಿ ಸರಕಾರದಿಂದ ಉದ್ಯೋಗದ ಅವಕಾಶಗಳನ್ನು ಪಡೆಯಲು ಪ್ರಯತ್ನಿಸಿದವು. ಆಯಾ ಜಾತಿಯ ವಿದ್ಯಾರ್ಥಿಗಳಿಗಾಗಿ ಶಿಷ್ಯವೇತನ, ಧನಸಹಾಯ ಹಾಗೂ ಉಚಿತ ವಿದ್ಯಾರ್ಥಿನಿಲಯಗಳನ್ನು ಒದಗಿಸುವ ಪ್ರಯತ್ನಗಳು ನಡೆದವು. ಉದಾಹರಣೆಗೆ ಕನ್ನಡ ಮಾಧ್ಯಮಕ್ಕಾಗಿ, ಕನ್ನಡ ಶಾಲೆಗಳಿಗಾಗಿ ಹೋರಾಡಿದ ಡೆಪ್ಯೂಟಿ ಚೆನ್ನಬಸಪ್ಪನವರು ಲಿಂಗಾಯತ ವಿದ್ಯಾರ್ಥಿಗಳಿಗಾಗಿ ಬೆಳಗಾವಿ, ಧಾರವಾಡಗಳಲ್ಲಿ ಅನುಕೂಲಗಳನ್ನು ಮಾಡಿಸಿಕೊಟ್ಟರು. ಹಲವು ಮಠಗಳು ಕೂಡ ಇಂಥ ಕೆಲಸವನ್ನು ಮಾಡಿದವು. ಇದರಿಂದಾಗಿ ಜಾತಿಯ ಬಗ್ಗೆ ಪ್ರಜ್ಞೆಯು ಬೆಳೆಯಿತು. ಜಾತಿ ಸಂಘಟನೆಗಳು ಕ್ರಿಯಾಶೀಲವಾದವು. ಆಧುನಿಕವಾದ ಮುದ್ರಣ ಮಾಧ್ಯಮದ ಮೂಲಕ ವಚನಗಳು ವ್ಯಾಪಕವಾಗಿ ಲಭ್ಯವಾಗಿ ಲಿಂಗಾಯತ ಪರಂಪರೆಯ ಪರಿಕಲ್ಪನೆಯನ್ನು ಗಟ್ಟಿಗೊಳಿಸಿದವು. ಅದುವರೆಗೆ ಜ್ಞಾನ, ಶಿಕ್ಷಣ ಹಾಗೂ ಉದ್ಯೋಗಗಳಲ್ಲಿ ಮುಂಚೂಣಿಯಲ್ಲಿದ್ದ ಬ್ರಾಹ್ಮಣ ಜಾತಿಯೊಂದಿಗೆ ಪೈಪೋಟಿಗೆ ಬೀಳುವುದು ಅನಿವಾರ್ಯವಾಗಿತ್ತು. ಹೀಗಾಗಿ ಆ ಕಾಲದ ಉತ್ತರ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮತ್ತು ಮುಂದೆ ರಾಜಕೀಯದಲ್ಲಿ ಲಿಂಗಾಯತರು ಬ್ರಾಹ್ಮಣರ ಮಧ್ಯದ ಪೈಪೋಟಿ, ಜಗಳಗಳು ಒಳಪ್ರವಾಹದಂತೆ ಕೆಲಸ ಮಾಡಿವೆ. ಈಗಲೂ ಧಾರವಾಡವೂ ಸೇರಿದಂತೆ ಉತ್ತರ ಕರ್ನಾಟಕವು ಈ ಸಂಘರ್ಷದಿಂದ ಮುಕ್ತವಾಗಿಲ್ಲ. ಈ ಸಂಘರ್ಷದ ಬಗೆಗಿನ ಅನೇಕ ಕತೆಗಳನ್ನು ನನ್ನ ತಂದೆ ಹಾಗೂ ಅಜ್ಜಂದಿರ ತಲೆಮಾರಿನವರಿಂದ ಕೇಳಿದ್ದೇನೆ.

ಅಂದು ಉತ್ತರ ಕರ್ನಾಟಕವು ಬಾಂಬೆ ಪ್ರೆಸಿಡೆನ್ಸಿಯ ಭಾಗವಾಗಿ ಸದರ್ನ್ ಮರಾಠಾ ಕಂಟ್ರಿಯೆಂದು ಅದನ್ನು ಕರೆಯಲಾಗುತ್ತಿತ್ತು. ಆದರೆ ಮಹಾರಾಷ್ಟ್ರದಲ್ಲಿ ನಡೆದ, ಹತ್ತಿರ ತಮಿಳುನಾಡಿನಲ್ಲಿ ನಡೆದ ಬ್ರಾಹ್ಮಣ ವಿರೋಧಿ ಚಳುವಳಿಯು ಇಲ್ಲಿ ನಡೆಯಲಿಲ್ಲ. ಆದರೆ ಸುಪ್ತವಾಗಿದ್ದ ಬ್ರಾಹ್ಮಣ ವಿರೋಧವು ಲಿಂಗಾಯತ ಗುರುತನ್ನು (identity) ಕಟ್ಟಿಕೊಳ್ಳುವುದರಲ್ಲಿ ಪ್ರಮುಖ ಪಾತ್ರ ವಹಿಸಿತು. ಚಿದಾನಂದ ಮೂರ್ತಿಯವರೇ ದಾಖಲಿಸಿದಂತೆ ಪರಸ್ಪರ ಮೂದಲಿಕೆ, ವಾಕ್ ಸಮರಗಳು ಪತ್ರಿಕೆಗಳಲ್ಲಿ ನಡೆದು ಅನೇಕ ವ್ಯಾಜ್ಯಗಳು ಕೋರ್ಟಿಗೆ ತಲುಪಿದವು. ನಾವು ಬ್ರಾಹ್ಮಣರಿಗಿಂತ ಕಡಿಮೆಯಿಲ್ಲ ಎಂದು ಲಿಂಗಾಯತ ಜಾತಿಯ ಪುರೋಹಿತ ವರ್ಗವಾಗಿರುವ ಉಪಜಾತಿಗಳು ವಾದಿಸತೊಡಗಿದವು. ಇದನ್ನು ಸಂಸ್ಕೃತೀಕರಣದ ಉದಾಹರಣೆಯಾಗಿ ನೋಡಬಹುದು. ಅದರಲ್ಲೂ ಒಂದು ಉಪಜಾತಿಯವರು ತಾವು ಶೈವ ಬ್ರಾಹ್ಮಣರೇ ಎಂದು ವಾದಿಸಿದರು. ಇದರ ಭಾಗವಾಗಿಯೇ ಲಿಂಗಾಯತ ಧರ್ಮವು ಪುರಾತನವಾದುದು; ಹನ್ನೆರಡನೆ ಶತಮಾನದಲ್ಲಿ ಬಸವಣ್ಣ ಹಾಗೂ ಇತರ ವಚನಕಾರರು ಪುರಾತನ ಶೈವ ಧರ್ಮದಲ್ಲಿ ಸುಧಾರಣೆಯನ್ನು ಮಾತ್ರ ತಂದರು ಎನ್ನುವ ವ್ಯಾಖ್ಯಾನಗಳು ಹುಟ್ಟಿಕೊಂಡವು. ಇದರ ಹಿಂದೆ ವಿರಕ್ತಮಠಗಳು ಹಾಗೂ ಪಂಚಪೀಠಗಳ ಮಧ್ಯದ ಸುದೀರ್ಘವಾದ ಘರ್ಷಣೆಗಳ ಇತಿಹಾಸವೂ ಇತ್ತು. ಆಧುನಿಕ ಸಮಾಜದಲ್ಲಿ ವಚನಕಾರರ ಸಮಾನತೆಯ ಆಶಯಗಳು, ಜಾತಿವ್ಯವಸ್ಥೆಯ ತಿರಸ್ಕರಣ ಇವುಗಳು ಲಿಂಗಾಯತ ಧರ್ಮಕ್ಕೆ ಒಂದು ಸುಧಾರಕ, ಕ್ರಾಂತಿಕಾರಕ ಧಾರ್ಮಿಕ ಗುರುತನ್ನು ತಂದು ಕೊಟ್ಟವು. ಆದರೆ ವಾಸ್ತವದಲ್ಲಿ ಅನೇಕ ಉಪಜಾತಿಗಳ ಮಧ್ಯ ತೀವ್ರವಾದ ಶ್ರೇಣೀಕರಣವಿದ್ದು, ಪುರೋಹಿತ ಉಪಜಾತಿಗಳು ತಮ್ಮನ್ನು ಬ್ರಾಹ್ಮಣೀಕರಣಗೊಳಿಸಿಕೊಂಡಿದ್ದವು. ಇನ್ನೊಂದು ಕಡೆಗೆ ಪಂಚಪೀಠಗಳು ಬಸವನ ವರ್ಚಸ್ಸನ್ನು ಆಳದಲ್ಲಿ ಎಂದೂ ಸ್ವೀಕರಿಸಲಿಲ್ಲ. ಬದಲಾಗಿ ವಚನಕಾರರು ವಿರೋಧಿಸಿದ್ದ ಅನೇಕ ಆಚರಣೆಗಳನ್ನು ಪಾಲಿಸತೊಡಗಿದವು. ಸಾರ್ವಜನಿಕವಾಗಿ ಈ ಸತ್ಯಗಳನ್ನು ಯಾರೂ ಹೇಳುವುದಿಲ್ಲ. ನಿಜವೇನೆಂದರೆ ಪಂಚಪೀಠಗಳು ಬಸವಣ್ಣನನ್ನು ಒಪ್ಪಿಕೊಂಡೇ ಇಲ್ಲ. ಎಲ್ಲಿಯವರೆಗೆ ಅಂದರೆ ಯಾವುದೇ ಕಾರ್ಯಕ್ರಮದಲ್ಲಿ ಪೀಠಾಚಾರ್ಯದ ಸಿಂಹಾಸನಕ್ಕಿಂತ ಎತ್ತರದಲ್ಲಿ ಬಸವಣ್ಣನ ಭಾವಚಿತ್ರ ಇತ್ಯಾದಿ ಇರುವಂತಿಲ್ಲವೆನ್ನುವ ಅಲಿಖಿತ ಕಟ್ಟಳೆ ಹಿಂದೆ ಇತ್ತಂತೆ. ಹೀಗಾಗಿ ಈ ಘರ್ಷಣೆಯು ಯಾವ ಕಾಲಕ್ಕೂ ಮುಗಿಯುವುದಿಲ್ಲ. ಈ ಎರಡು ಪಂಥಗಳು ಒಟ್ಟಾಗುವುದು ಅಸಾಧ್ಯ. ಏನೇ ಇದ್ದರೂ ಇಂದಿನ ರಾಜಕೀಯ ಅವಶ್ಯಕತೆಗಳಿಂದಾಗಿ ಲಿಂಗಾಯತ ಧುರೀಣರು ಎರಡೂ ಬಣಗಳನ್ನು ವೀರಶೈವ–ಲಿಂಗಾಯತ ಎನ್ನುವ Patch work ಮೂಲಕ ಒಂದಾದಂತೆ ತೋರಿಸಿ ಪ್ರತ್ಯೇಕ ಧರ್ಮದ ಹಣೆಚೀಟಿಗಾಗಿ ಪ್ರಯತ್ನಿಸಬೇಕಾಗಿದೆ. ಅಥವಾ ಪ್ರತ್ಯೇಕ ಧರ್ಮವಾದರೆ ಅಲ್ಪಸಂಖ್ಯಾತವೆನ್ನುವ ಸರಕಾರಿ ಸವಲತ್ತುಗಳು ಸಿಗುವುದಾದರೆ ಆ ಕಾರಣಕ್ಕಾಗಿ ಸಂಘರ್ಷಗಳನ್ನು ಚಾಪೆಯ ಕೆಳಗೆ ತಳ್ಳಿ ಮುಂದುವರೆಯುವ ಸಾಧ್ಯತೆ ಇದೆ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಆದರೆ ಇಲ್ಲಿ ದೊಡ್ಡ ಸಮಸ್ಯೆಯೆಂದರೆ ಲಿಂಗಾಯತ ಧರ್ಮವು ಹಿಂದೂ ಧರ್ಮದ ಭಾಗವಲ್ಲವೆಂದು ವಾದಿಸಲು ವೇದಪ್ರಮಾಣ್ಯದ ತಿರಸ್ಕರಣ, ವರ್ಣಾಶ್ರಮಗಳ, ಪುರೋಹಿತಶಾಹಿಯ ತಿರಸ್ಕರಣ ಇವೆಲ್ಲವುಗಳನ್ನು ವಚನಗಳ ಆಧಾರದ ಮೇಲೆ ವಾದಿಸಬೇಕಾಗುತ್ತದೆ. ಪಂಚಪೀಠಗಳು ತಮ್ಮ ಪುರಾತನತೆಯನ್ನು ಸಮರ್ಥಿಸುವ ವಾದದಲ್ಲಿ ಶೈವವೂ ಹಿಂದೂ ಧರ್ಮದ ಭಾಗವೇ ಆಗಿತ್ತು ಎನ್ನುವ ವಾದದ ಕಡೆಗೆ ಹೋಗಿಬಿಡುವ ಸಾಧ್ಯತೆ ಇದೆ. ಏಕೆಂದರೆ ಪೂರ್ವದ, ಪುರಾತನ ಶೈವವು ವೈದಿಕ ಪರಂಪರೆಗಳಿಂದ ಖಂಡಿತವಾಗಿಯೂ ಭಿನ್ನವಾಗಿತ್ತು. ಆದರೆ ಭಾರತೀಯ ಚರಿತ್ರೆಯ ಅನೇಕ ಸಂಕರಗಳು, ಗೋಜಲುಗಳಿಂದಾಗಿ ಯಾವ ಸಮರ್ಪಕವಾದ ವಾದವೂ ಅಸಾಧ್ಯವಾಗುತ್ತದೆ. ಅಲ್ಲದೆ ಇಂದಿನ ಲಿಂಗಾಯತ ಸಮಾಜವು ವಚನಕಾರರ ಚಿಂತನೆಗಳಿಂದ ಬಹುದೂರ ಹೋಗಿಬಿಟ್ಟಿದೆ. ಅದು ಜಾತಿವ್ಯವಸ್ಥೆಯ ವಿರೋಧಿಯೂ ಅಲ್ಲ, ಸಮಾನತೆಯ ಪರವಾಗಿಯೂ ಇಲ್ಲ.

ಬಲಿಷ್ಠ ಉಪಜಾತಿಗಳು ತಮ್ಮ ಸಂಘಟನೆಗಳ ಮೂಲಕ ಉಪಜಾತೀಯತೆಯನ್ನು ಪ್ರಬಲಗೊಳಿಸಿವೆ. ಅತ್ಯಂತ ಆಧುನಿಕ, ಶಿಕ್ಷಿತ ಹಾಗೂ ಅಮೇರಿಕವಾಸಿ ಲಿಂಗಾಯತ ವರ/ವಧುಗಳ ಬಗೆಗಿನ Matrimonial ಗಳನ್ನು ಇಂಗ್ಲಿಷ್ ಪತ್ರಿಕೆಗಳಲ್ಲಿ ನೋಡಿದರೂ ಅವು only 'B P S' ಹೀಗೆ ಎನ್ನುವ ಅಕ್ಷರಗಳ ಮೂಲಕ ಉಪಜಾತಿಗಳನ್ನು ಸೂಚಿಸುತ್ತವೆ. ಲಿಂಗಾಯತ ಉಪಜಾತಿಗಳ ಮಧ್ಯ ವಿವಾಹ ಸಂಬಂಧಗಳು ತುಂಬಾ ಕಷ್ಟಕರವಾಗುತ್ತಿವೆ. ಮುಖ್ಯವೆಂದರೆ ಶ್ರೇಣಿಯಲ್ಲಿ ತುಂಬಾ ಕೆಳಗಿರುವ ಉಪಜಾತಿಗಳಂತೂ ಲಿಂಗಾಯತವೆನ್ನುವ ಹೆಸರು ಮಾತ್ರ ಹೊಂದಿವೆ. ಉದಾಹರಣೆಗೆ ನಾನು ಹುಟ್ಟಿದ್ದು ಶಿವನಿಂಪಿಗ ಅಥವಾ ಜವಳಿ ಎನ್ನುವ ಹಿಂದುಳಿದ ಉಪಜಾತಿಯಲ್ಲಿ. ಉಪಜಾತಿಯ ಹೆಸರೇ ಹೇಳುವಂತೆ ಈ ಉಪಜಾತಿಯ ಸಮುದಾಯ ಬಟ್ಟೆ ತಯಾರಿಸುವ ಅಥವಾ ಅದನ್ನು ಮಾರುವ ಕಸುಬಿನವರು. ನನಗೆ ಗೊತ್ತಿರುವ ಮಟ್ಟಿಗೆ ಈ ಉಪಜಾತಿಯು ಶಿಕ್ಷಣ, ಶ್ರೀಮಂತಿಕೆ, ರಾಜಕೀಯ ಶಕ್ತಿ ಇದಾವುದು ಹೆಚ್ಚಾಗಿ ಇಲ್ಲದ ಸಮುದಾಯವನ್ನು ಹೊಂದಿದೆ. ಹೀಗಾಗಿ ಬಲಿಷ್ಠ ಲಿಂಗಾಯತ ಉಪಜಾತಿಗಳು ಅದನ್ನು ಕನಿಷ್ಠವಾಗಿಯೇ ನೋಡುತ್ತವೆ. ತುಂಬಾ ಚಿಕ್ಕ ವಯಸ್ಸಿನಲ್ಲಿಯೇ ನಾನು ನಾಸ್ತಿಕನಾಗಿ, ಜಾತಿ ಧರ್ಮಗಳ ಬಗ್ಗೆ ಕುತೂಹಲವನ್ನೇ ತೋರಿಸದೇ ಬೆಳೆದು ಬಂದೆ. ಅಲ್ಲದೆ ಪುಸ್ತಕಗಳ ಪ್ರಪಂಚದಲ್ಲಿಯೇ ಮುಳುಗಿದ್ದೆ. ಹೀಗಾಗಿ ಕೆಲವು ವರ್ಷಗಳ ಹಿಂದೆ ಈ ಉಪಜಾತಿಯ ಬಗ್ಗೆ ಕುತೂಹಲದಿಂದ ಕೇಳಿದಾಗ "ಸರಳವಾಗಿ ಹೇಳುವುದಾದರೆ ನಾವು ಲಿಂಗಾಯತರಲ್ಲಿಯೇ ದಲಿತರ ಹಾಗೆ" ಎಂದು ಉತ್ತರ ಬಂದಿತು. ಆದರೆ ನನ್ನ ಬಾಲ್ಯದ ನೆನಪುಗಳನ್ನು ಆಧರಿಸಿ ಹೇಳುವುದಾದರೆ ಶ್ರೀಮಂತ ಹಾಗೂ ಶಿಕ್ಷಿತ ಕುಟುಂಬದಿಂದ ಬಂದ ನನ್ನ ತಾಯಿ ಯಾವ ಕರ್ಮಠ ಸಂಪ್ರದಾಯಗಳೇ ಇಲ್ಲದ 'ಲಿಬರಲ್' ರೀತಿಯಲ್ಲಿ ನಮ್ಮನ್ನು ಬೆಳೆಸಿದರು. ನನ್ನ ತಾಯಿಯ ಸೋದರ ಮಾವನವರು ಬರಹಗಾರರು, ಕ್ರಿಯಾಶೀಲರು ಆಗಿದ್ದರಿಂದ ಅನೇಕ ಅಂತರ್‌ಧರ್ಮೀಯ ವಿವಾಹಗಳು ನಮ್ಮ ಹತ್ತಿರದ ಸಂಬಂಧಗಳಲ್ಲಿ ನಡೆದವು. ಆಗ ವರದಕ್ಷಿಣೆ, ವೈಭವದ ಮದುವೆಗಳು ನಿಷಿದ್ಧವಾಗಿದ್ದವು. ನಾನು ಕೇಳಿದ ಕನ್ನಡದ ಮೊದಲ ಕಾವ್ಯದ ಸಾಲುಗಳೆಂದರೆ ಅವ್ವ ಹೇಳುತ್ತಿದ್ದ ವಚನಗಳು. ಅವು ನಮ್ಮ ಮನಸ್ಸನ್ನು ತಟ್ಟಿದವು. ಆದರೆ ಅಲ್ಲಿಂದಾಚೆಗೆ ಈ 50 ವರ್ಷಗಳಲ್ಲಿ ಈ ಲಿಬರಲ್ ಆದ ಅಂಶಗಳೆಲ್ಲ ಮರೆಯಾಗಿ ಪ್ರತಿಯೊಂದು ಲಿಂಗಾಯತ ಉಪಜಾತಿಯು ಒಂದು ದ್ವೀಪವಾಗಿದೆ. ಪರಧರ್ಮ ದ್ವೇಷವೇ ಆಧಾರವಾಗಿರುವ ಆರ್.ಎಸ್.ಎಸ್ ನ ರಾಜಕೀಯ ಪಕ್ಷವಾದ ಬಿ.ಜೆ.ಪಿ ಗೆ ಲಿಂಗಾಯತರಿಂದ ಬೆಂಬಲ ದೊರೆತಿರುವುದು ಚರಿತ್ರೆಯ ಮಹಾನ್ ದುರಂತವಾಗಿದೆ. ಇದು ಬಸವ ದ್ರೋಹವಲ್ಲದೆ ಮತ್ತೇನು?

ಮುಖ್ಯವಾದ ಪ್ರಶ್ನೆಯೆಂದರೆ ತನ್ನನ್ನು ಪ್ರತ್ಯೇಕ ಧರ್ಮವೆಂದು ಗುರುತಿಸಿಕೊಳ್ಳುವ ಧರ್ಮವು ವಚನಕಾರರ ಮೌಲ್ಯಗಳ ಪರವಾಗಿರುತ್ತದೆಯೆ? ಜಾತಿ ವಿನಾಶವಂತೂ ಇಂದಿನ ಭಾರತದಲ್ಲಿ ಕಲ್ಪಿಸಲೂ ಆಗದ ಸಂಗತಿಯಾಗಿದೆ. ಆದರೆ ಜಾತಿಯಾಗಿ ಉಳಿದುಕೊಂಡರೂ ಉಳಿದ ಜಾತಿಗಳ ಬಗ್ಗೆ ಸೆಕ್ಯೂಲರ್ ಅಥವಾ ಉದಾರ ಮನೋಭಾವವನ್ನು ತೋರಿಸುತ್ತದೆಯೆ? ವಚನಕಾರರ ಚಿಂತನೆಗೆ ಸಂಪೂರ್ಣ ವಿರೋಧಿಯಾಗಿರುವ ಹಿಂದುತ್ವ ಸಿದ್ಧಾಂತವನ್ನು ದೂರವಿಡುತ್ತದೆಯೆ? ಎಲ್ಲಾ ಬಗೆಯ ಸಮಾನತೆಗಳನ್ನು ಒಪ್ಪಿಕೊಂಡ ವಚನಕಾರರ ಜೀವನ ದೃಷ್ಟಿಯನ್ನು ಸಮರ್ಥಿಸುತ್ತದೆಯ? ಏಕೆಂದರೆ ಈಗಿರುವ ಸ್ಥಿತಿಯಲ್ಲಿ ವೀರಶೈವ–ಲಿಂಗಾಯತ ಧರ್ಮವು ಹಲವಾರು ಉಪಜಾತಿಗಳುಳ್ಳ ಜಾತಿ ಮಾತ್ರವಾಗಿದೆ. ಮತ್ತು ಈ ಜಾತಿಯ ಮಧ್ಯಮ ಹಾಗೂ ಮೇಲ್‌ವರ್ಗಗಳು ಸಂಸ್ಕೃತೀಕರಣಗೊಳ್ಳುವ ಭರಾಟೆಯಲ್ಲಿ ಅನೇಕ ವೈದಿಕ ಆಚರಣೆಗಳನ್ನು ಅನುಕರಿಸುತ್ತಿವೆ. ಕೇವಲ ಅಲ್ಪಸಂಖ್ಯಾತ ಪ್ರತ್ಯೇಕ ಧರ್ಮದ ಸರಕಾರಿ ಸವಲತ್ತುಗಳಿಗಾಗಿ ಇಂದಿನ ಪ್ರಯತ್ನಗಳು ಸೀಮಿತಗೊಂಡರೆ 12ನೇ ಶತಮಾನದ ಜಗತ್ತೇ ಕಂಡರಿಯದ ಸಾಮಾಜಿಕ ಕ್ರಾಂತಿಯ ಮೌಲ್ಯಗಳು ಈ ಹೊಸಧರ್ಮದ ಪ್ರಜ್ಞೆ ಹಾಗೂ ನಡುವಳಿಕೆಗಳಿಂದ ದೂರವಾಗಿಯೇ ಉಳಿಯುತ್ತವೆ.

ಲಿಂಗಾಯತ ಧರ್ಮ ಒತ್ತಾಯದ ಸಂವಿಧಾನಾತ್ಮಕತೆ, ಕಾನೂನು ಮಾನ್ಯತೆ

ನಮ್ಮ ಸಂವಿಧಾನ ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ನೀಡಿದೆ. ಅದರಂತೆ ತಂತಮ್ಮ ಇಚ್ಛೆಯಂತೆ ಯಾವ ಧರ್ಮವನ್ನು ಬೇಕಾದರೂ ಅನುಸರಿಸುವ, ಬದಲಾಯಿಸುವ ಸ್ವಾತಂತ್ರ್ಯ ಇದೆ. ಹಾಗೆ ತಾವು ಹಿಂದೂ ಎಂದು ಕರೆದುಕೊಳ್ಳುವ ಅಥವಾ ಕರೆದುಕೊಳ್ಳದಿರುವ ಸ್ವಾತಂತ್ರ್ಯ ಇದೆ.

ಲಿಂಗಾಯತರು ತಮ್ಮದು ಒಂದು ಜಾತಿ ಮಾತ್ರವೋ ಅಥವಾ ಒಂದು ಧರ್ಮವೋ ಎಂದು ತೀರ್ಮಾನಿಸುವುದು ಅವರ ಹಕ್ಕು. ಅದನ್ನು ಅವರು ಚಲಾಯಿಸಲು ಬಾಧ್ಯರು. ಅವರು ಇಷ್ಟಪಟ್ಟರೆ ಚಲಾಯಿಸಲಿ. ಅದರಲ್ಲಿ ಬೇರೆ ಯಾರ ಮಧ್ಯ ಪ್ರವೇಶಕ್ಕೂ ಅವಕಾಶವೇ ಇಲ್ಲ, ಯಾವುದೇ ಸರ್ಕಾರಕ್ಕೂ.

ಸರ್ಕಾರದ ಪಾತ್ರ ದಾಖಲು ಮಾಡಿಕೊಳ್ಳುವುದಕ್ಕಷ್ಟೇ ಸೀಮಿತ

– ಜಿ.ಎನ್.ನಾಗರಾಜ್

****

ಲಿಂಗಾಯತದ ಬಗ್ಗೆ ವೈಚಾರಿಕ ಮಂಥನ

ಲಿಂಗಾಯತದ ಬಗ್ಗೆ ವೈಚಾರಿಕ ಮಂಥನ ನಡೆಯುತ್ತಿದೆಯೇ? ಹೇಗೆ ನಡೆಯಬಹುದು? ಕೆಲ ಸಲಹೆಗಳು. ಲಿಂಗಾಯತ ಸಾಗರದಲ್ಲಿ ಮಂಥನ ಬಿರುಸಾಗಿ ನಡೆಯಲಿ. ವಚನಗಳ ವೈಚಾರಿಕತೆ ಅವರ ಹೃದಯ, ತಲೆಗಳನ್ನು ಹೊಗಲಿ. ಅನುಭವ ಮಂಟಪ ಮತ್ತೆ ಜೀವಂತಗೊಳ್ಳಲಿ. ಸಾಮಾಜಿಕ ಮುನ್ನಡೆಗೆ ಸಾಧನವಾಗಲಿ.

ಆದರೆ ಹಾಗೆ ವಚನ ವೈಚಾರಿಕತೆಯ ಬಗ್ಗೆ ಮಂಥನ ನಡೆಯುತ್ತಿದೆಯೇ? ನಮ್ಮ ಟಿವಿಗಳಲ್ಲಿ ಹಲವು ದಿನಗಳಿಂದ ಕೂಗಾಟಗಳೇನೋ ನಡೆಯುತ್ತಿದೆ. ಅದರಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಕೆಲವು ವಿಚಾರಗಳು ಕೇಳಬರುತ್ತವೆ. ಉಳಿದಂತೆ ಕೇಳುಗರಿಗೆ ಒಂದು ನಿಲುವಿಗೆ ಬರಲು ಸಹಾಯಕವಾಗುವಂತಹ ಮಾಹಿತಿ, ವಚನಗಳನ್ನೇ ಆಧಾರವಾಗಿಟ್ಟುಕೊಂಡ ಚರ್ಚೆ ಕಾಣಬರುತ್ತಿಲ್ಲ. ಏಕೆಂದರೆ ಟಿವಿ ಗಳಿಗೆ ಬೇಕಾಗಿರುವುದು ವಿಷಯ ಸ್ಪಷ್ಟತೆಯಲ್ಲ ಬದಲಾಗಿ ಟಿ.ಅರ್.ಪಿ. ಹೆಚ್ಚಿಸುವ ಗದ್ದಲ.

– ಜಿ.ಎನ್.ನಾಗರಾಜ್



ಬಿಹಾರದ ಮೈತ್ರಿ ಕುಸಿದಿರುವುದು ಮತ್ತು ನಿತಿಶ್ ಕುಮಾರ್ ಅವರ ಪಕ್ಷಾಂತರ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ವಲಯಗಳಲ್ಲಿ ವ್ಯಾಪಕ ಗಾಬರಿ ಉಂಟು ಮಾಡಿದೆ. ಕಾಂಗ್ರೆಸ್ ನೇತೃತ್ವದ ಪಾತ್ರ ವಹಿಸುವ ಎಲ್ಲ ಜಾತ್ಯತೀತ ಪಕ್ಷಗಳ ರಂಗ ರಚಿಸುವಲ್ಲಿ ನಿತಿಶ್ ಕುಮಾರ್ ಮುಂದಾಳಾಗಿರುತ್ತಾರೆ ಎಂದು ಹಲವರು ನಿರೀಕ್ಷಿಸಿದ್ದರು. ಈಗ ಮಹಾಮೈತ್ರಿಯ ಶಿಲ್ಪಿಯೇ ಬಿಜೆಪಿ ಪಾಳೆಯಕ್ಕೆ ದಾಟಿರುವುದರಿಂದಾಗಿ ಈ ಮಹಾಮೈತ್ರಿಯ ಪರಿಕಲ್ಪನೆ ನುಚ್ಚು ನೂರಾಗಿದೆ. ಆದರೆ ಈಗ ಬೇಕಾಗಿರುವುದು ಎಲ್ಲ ಪ್ರತಿಪಕ್ಷಗಳನ್ನು ಒಳಗೊಂಡಿರುವ ಒಂದು ಸಮಯಸಾಧಕ ಮೈತ್ರಿಕೂಟವಲ್ಲ, ಬದಲಿಗೆ,

ಒಂದು ವಿಶ್ವಾಸಾರ್ಹ ಪರ್ಯಾಯಕ್ಕಾಗಿ ಐಕ್ಯ ಹೋರಾಟಗಳನ್ನು ಕಟ್ಟಬೇಕಾಗಿದೆ

ಪ್ರಕಾಶ ಕಾರಟ್

ಭಾರತದ ರಾಜಕೀಯ ಚರಿತ್ರೆ ಬೂರ್ಜ್ವಾ ರಾಜಕಾರಣಿಗಳ ಸಮಯಸಾಧಕ ವರ್ತನೆಗಳಿಂದ ಸಾಕಷ್ಟು ತುಂಬಿಕೊಂಡಿದ್ದು, ನಿತಿಶ್ ಕುಮಾರ್ ಅವರ ರಾಜಕೀಯ ತಿಪ್ಪರಲಾಗ ಇವುಗಳಲ್ಲಿ ಅತ್ಯಂತ ದೊಡ್ಡ ಸ್ಥಾನ ಪಡೆಯುವಂತದ್ದು.

2015ರಲ್ಲಿ ಬಿಹಾರದ ವಿಧಾನಸಭಾ ಚುನಾವಣೆಗಳಲ್ಲಿ 'ಮಹಾಗಟಬಂಧನ್'ನ ಯಶಸ್ಸಿನ ನಂತರ ನಿತಿಶ್ ಕುಮಾರ್ ರಾಷ್ಟ್ರೀಯ ಮಟ್ಟದಲ್ಲಿ ಬಿಜೆಪಿ-ವಿರೋಧಿ ಮಹಾಮೈತ್ರಿಯ ಅತ್ಯಂತ ಮುಖ್ಯ ಪ್ರತಿಪಾದಕರಾಗಿದ್ದರು. ಇತ್ತೀಚೆಗಷ್ಟೇ, ಅಂದರೆ ಈ ವರ್ಷದ ಏಪ್ರಿಲ್‌ನಲ್ಲಿ ಬಿಜೆಪಿಯನ್ನು ಎದುರಿಸಲು ಪ್ರತಿಪಕ್ಷಗಳ ಐಕ್ಯತೆಯನ್ನು ಪ್ರತಿಪಾದಿಸಿದ್ದರು. ಕಾಂಗ್ರೆಸ್ ಪಕ್ಷ ಇದಕ್ಕೆ ನೇತೃತ್ವ ನೀಡಬೇಕು ಎಂದೂ ಹೇಳಿದ್ದರು.

ಈಗ ಇದ್ದಕ್ಕಿದ್ದಂತೆ ನಿತಿಶ್ ಕುಮಾರ್ ಮತ್ತು ಜೆಡಿ(ಯು) ಬಿಹಾರದಲ್ಲಿ ಆರ್‌ಜೆಡಿ ಮತ್ತು ಕಾಂಗ್ರೆಸ್‌ನೊಂದಿಗೆ ಮೈತ್ರಿಯನ್ನು ಮುರಿದು ಕೆಲವೇ ಗಂಟೆಗಳೊಳಗೆ ಬಿಜೆಪಿಯೊಂದಿಗೆ ಸಮ್ಮಿಶ್ರ ಸರಕಾರವನ್ನು ರಚಿಸಿದ್ದಾರೆ. ಅವರು ತಮ್ಮ ಈ ವಿಶದವಾದ ವೇಷಾಂತರದ ಪ್ರದರ್ಶನಕ್ಕೆ ಲಾಲು ಪ್ರಸಾದ್ ಯಾದವ್ ರವರ ಮಗ ಮತ್ತು ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಮೇಲೆ ಸಿಬಿಐ ಭ್ರಷ್ಟಾಚಾರದ ಆಪರೋಪಗಳ ಮೇಲೆ ಎಫ್‌ಐಆರ್ ಸಲ್ಲಿಸುವುದನ್ನು ಬಳಸಿಕೊಂಡಿದ್ದಾರೆ ಎಂಬುದು ಈಗ ಸುಸ್ಪಷ್ಟ.

ಬಿಹಾರದ ಮೈತ್ರಿ ಕುಸಿದಿರುವುದು ಮತ್ತು ನಿತಿಶ್ ಕುಮಾರ್ ಅವರ ಪಕ್ಷಾಂತರ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ವಲಯಗಳಲ್ಲಿ ವ್ಯಾಪಕ ಗಾಬರಿ ಉಂಟು ಮಾಡಿದೆ. ಕಾಂಗ್ರೆಸ್ ನೇತೃತ್ವದ ಪಾತ್ರ ವಹಿಸುವ ಎಲ್ಲ ಜಾತ್ಯತೀತ ಪಕ್ಷಗಳ ರಂಗ ರಚಿಸುವಲ್ಲಿ ನಿತಿಶ್ ಕುಮಾರ್ ಮುಂದಾಳಾಗಿರುತ್ತಾರೆ ಎಂದು ಹಲವರು ನಿರೀಕ್ಷಿಸಿದ್ದರು. ಈಗ ಮಹಾಮೈತ್ರಿಯ ಶಿಲ್ಪಿಯೇ ಬಿಜೆಪಿ ಪಾಳೆಯಕ್ಕೆ ದಾಟಿರುವುದರಿಂದಾಗಿ ಈ ಮಹಾಮೈತ್ರಿಯ ಪರಿಕಲ್ಪನೆ ನುಚ್ಚು ನೂರಾಗಿದೆ.

ಸಿಪಿಐ(ಎಂ) ಕೂಡ ಮೋದಿ ಸರಕಾರ ಮತ್ತು ಬಿಜೆಪಿ ವಿರುದ್ಧ ಹೋರಾಟದಲ್ಲಿ ವ್ಯಾಪಕ ಐಕ್ಯತೆಯನ್ನು ಕಟ್ಟುವ ಬಗ್ಗೆ ಇಂತಹುದೇ ಕಾಳಜಿಯನ್ನು ಹೊಂದಿದೆ. ಆದರೆ ಇದು ಒಂದಿಷ್ಟು ಜಾತ್ಯತೀತ ಪಕ್ಷಗಳನ್ನು ಒಟ್ಟು ಸೇರಿಸುದರಿಂದಷ್ಟೇ ಈಡೇರಲಾರದು ಎಂದು ಅದು ಸದಾ ಹೇಳುತ್ತಲೇ ಬಂದಿದೆ.

ಏಕೆ ಇಂತಹ ಒಂದು ಮಹಾಮೈತ್ರಿ ಕೆಲಸ ಮಾಡದು ಎಂದು ಹೇಳಲು ಕಾರಣವೆಂದರೆ ಹಲವು ಪ್ರಾದೇಶಿಕ ಪಕ್ಷಗಳ ಅವಿಶ್ವಸನೀಯ ಸ್ವರೂಪ. ಹೆಚ್ಚಿನ ಪ್ರಾದೇಶಿಕ ಪಕ್ಷಗಳು ನವ-ಉದಾರವಾದಿ ಧೋರಣೆಗಳನ್ನು ಅಪ್ಪಿಕೊಂಡಿವೆ, ಆದ್ದರಿಂದ ಸಮಯಸಾಧಕ ಮೈತ್ರಿಗಳಿಗೆ ಪಕ್ಕಾಗುತ್ತವೆ. ಒಂದೆ-ರಡು ಅಪವಾದಗಳನ್ನು ಬಿಟ್ಟರೆ ಈ ಪ್ರಾದೇಶಿಕ ಪಕ್ಷಗಳು ತಮ್ಮ ರಾಜಕೀಯ ಹಿತಗಳಿಗೆ ಅನುಕೂಲವೆನಿಸಿದಾಗ ಬಿಜೆಪಿಯೊಂದಿಗೆ ಕೈ ಜೋಡಿಸಲೂ ಸಿದ್ಧ ಎಂಬುದನ್ನು ತೋರಿಸಿಕೊಟ್ಟಿವೆ. ನಿತಿಶ್ ಕುಮಾರ್ ಪಕ್ಷಾಂತರದ ಪ್ರಸಕ್ತ ಘಟನೆ ಪ್ರಾದೇಶಿಕ ಪಕ್ಷಗಳ ಈ ಸ್ವರೂಪವನ್ನು ಎತ್ತಿ ತೋರಿದೆ.

ಸಿಪಿಐ(ಎಂ) ತನ್ನ 21ನೇ ಮಹಾಧಿವೇಶನದಲ್ಲಿ ಪ್ರಾದೇಶಿಕ ಪಕ್ಷಗಳೊಡನೆ ಕೆಲಸದ ತನ್ನ ದೀರ್ಘ ಅನುಭವದ ಪರಾಮರ್ಶೆ ನಡೆಸಿ ಪ್ರಾದೇಶಿಕ ಪಕ್ಷಗಳು ಪ್ರಧಾನ ಅಂಗಗಳಾಗಿರುವ ಒಂದು ವಿಶ್ವಾಸಾರ್ಹ ಅಖಿಲ ಭಾರತ ಮೈತ್ರಿಕೂಟ ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದಿದೆ. ಆದರೆ ಜನಗಳ ಪ್ರಶ್ನೆಗಳ ಮೇಲೆ ಮತ್ತು ಕೋಮುವಾದದ ವಿರುದ್ಧ ಹೋರಾಟಗಳಲ್ಲಿ ವ್ಯಾಪಕ ಐಕ್ಯತೆ ಬೆಸೆಯುವ ಅಗತ್ಯದಿಂದಾಗಿ ಕೆಲವು ಪ್ರಾದೇಶಿಕ ಪಕ್ಷಗಳೊಂದಿಗೆ ಸಂಬಂಧಪಟ್ಟ ರಾಜ್ಯಗಳಲ್ಲಿನ ಪ್ರಶ್ನೆಗಳ ಮೇಲೆ ಜಂಟಿ ಕಾರ್ಯಾಚರಣೆಗಳು ಮತ್ತು ಐಕ್ಯ ವೇದಿಕೆಗಳನ್ನು ರಚಿಸಿಕೊಳ್ಳಲು ಸಿಪಿಐ(ಎಂ) ಶ್ರಮಿಸುತ್ತದೆ.

ಒಂದು ಎಲ್ಲರನ್ನೂ ಒಳಗೊಳ್ಳುವ ಐಕ್ಯತೆ ಕಾರ್ಯಸಾಧ್ಯವಲ್ಲ ಎಂಬುದಕ್ಕೆ ಮತ್ತೊಂದು ಕಾರಣವೆಂದರೆ ಇದರಲ್ಲಿ ಕಾಂಗ್ರೆಸನ್ನೂ ಸೇರಿಸಿಕೊಳ್ಳಬೇಕಾಗುತ್ತದೆ, ಮತ್ತು ಅದು ಅತಿ ದೊಡ್ಡ ಪ್ರತಿಪಕ್ಷವಾದ್ದರಿಂದ ಅದರದ್ದೇ ನೇತೃತ್ವವಿರುತ್ತದೆ ಎಂಬುದು.

ಮೋದಿ ಸರಕಾರ ಮತ್ತು ಬಿಜೆಪಿ ನವ-ಉದಾರವಾದಿ ಧೋರಣೆಗಳನ್ನು ಮತ್ತು ಹಿಂದುತ್ವ ಕೋಮುವಾದಿ ಅಜೆಂಡಾವನ್ನು ಆಕ್ರಾಮಕ ರೀತಿಯಲ್ಲಿ ಅನುಸರಿಸುತ್ತಿವೆ. ಅದರಿಂದಾಗಿ ಮೋದಿ ಸರಕಾರದ ವಿರುದ್ಧ ಹೋರಾಟವನ್ನು ಮುಂದೊಯ್ಯಲು ಈ ಹೋರಾಟ ನವ-ಉದಾರವಾದಿ ಧೋರಣೆಗಳು ಮತ್ತು ಕೋಮುವಾದಿ ಪ್ರಹಾರಗಳು ಇವೆರಡರ ವಿರುದ್ಧವೂ ನಡೆಯಬೇಕು. ಮೋದಿ ಸರಕಾರದ ಆರ್ಥಿಕ ಧೋರಣೆಗಳು ಜನಗಳ ಜೀವನಾಧಾರಗಳು ಮತ್ತು ಜೀವನ ಪರಿಸ್ಥಿತಿಗಳ ಮೇಲೆ ಪ್ರಹಾರ ಮಾಡುತ್ತಿವೆ. ಆದ್ದರಿಂದ ನವ-ಉದಾರವಾದಿ ಧೋರಣೆಗಳ ವಿರುದ್ಧ ಮತ್ತು ಜನಗಳ ಬದುಕಿನ ರಕ್ಷಣೆಗಾಗಿ ಒಂದು ದೃಢನಿರ್ಧಾರದ ಹೋರಾಟ, ಅದರೊಂದಿಗೇ ಹಿಂದುತ್ವ ಕೋಮುವಾದಿ ಆಕ್ರಮಣದ ವಿರುದ್ಧ ಹೋರಾಟ ನಡೆಯಬೇಕಾಗಿದೆ. ಈ ಎರಡು ಹೋರಾಟಗಳನ್ನು ಒಟ್ಟು ಸೇರಿಸುವ ಮೂಲಕವೇ ಜನಗಳನ್ನು ಬಿಜೆಪಿ-ಆರೆಸ್ಸೆಸ್ ಕೂಟದ ವಿರುದ್ಧ ಹೋರಾಣಕ್ಕೆ ಅಣಿನೆರೆಸಲು ಸಾಧ್ಯ.

ಈ ಮಹತ್ವಪೂರ್ಣ ಕಾರ್ಯಭಾರವನ್ನು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಳ್ಳುವ ಮೂಲಕ ನಿರ್ವಹಿಸಲು ಸಾಧ್ಯವಿಲ್ಲ. ನವ-ಉದಾರವಾದಿ ಧೋರಣೆಗಳನ್ನು ದೇಶದ ಮೇಲೆ ಹೇರಲು ಕಾಂಗ್ರೆಸ್ ಪಕ್ಷವೇ ಆದ್ಯ ಹೊಣೆ., ಮತ್ತು ಈಗಲೂ ಅದು ಆ ಧೋರಣೆಗಳನ್ನೇ ಪ್ರತಿಪಾದಿಸುತ್ತಿದೆ. ಹಲವು ವರ್ಷಗಳ ದುರಾಡಳಿತ ಮತ್ತು ಭ್ರಷ್ಟಾಚಾರದಿಂದ ಅದು ತನ್ನ ಹೆಸರುಗೆಡಿಸಿಕೊಂಡಿದೆ. ಮೂಲ ಧೋರಣೆಗಳನ್ನು ಕುರಿತಂತೆ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಯಾವುದೇ ವ್ಯತ್ಯಾಸಗಳಿಲ್ಲ ಎಂಬುದನ್ನು ಕಾಂಗ್ರೆಸ್‌ನಿಂದ ಬಿಜೆಪಿಯತ್ತ ಮುಖಂಡರು ಮತ್ತು ಕಾರ್ಯಕರ್ತರು ನಿರಂತರವಾಗಿ ಹೋಗುತ್ತಿರುವುದೇ ಬಿಂಬಿಸುತ್ತಿದೆ.

ಆದ್ದರಿಂದ ಈಗ ಬೇಕಾಗಿರುವುದು ಎಲ್ಲ ಪ್ರತಿಪಕ್ಷಗಳನ್ನು ಒಳಗೊಂಡಿರುವ ಒಂದು ಸಮಯಸಾಧಕ ಮೈತ್ರಿಕೂಟವಲ್ಲ, ಬದಲಿಗೆ, ಕಾರ್ಮಿಕ ವರ್ಗ, ರೈತಾಪಿಗಳು, ಮತ್ತು ಇತರ ದುಡಿಯುವ ಜನವಿಭಾಗಗಳ ಪ್ರಶ್ನೆಗಳನ್ನು ಎತ್ತಿ-ಕೊಂಡು ಸಾಧ್ಯವಾದಷ್ಟು ವ್ಯಾಪಕವಾದ ಐಕ್ಯ ಕಾರ್ಯಾಚರಣೆಗಳು ಮತ್ತು ವೇದಿಕೆಗಳನ್ನು ಬೆಳೆಸುವುದು. ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಒಂದು ವಿಶಾಲ ಐಕ್ಯತೆಯನ್ನು ಕಟ್ಟುವುದು. ಇತ್ತೀಚಿನ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ ರೈತಾಪಿ ಜನಗಳ ಒಂದು ಮಹತ್ವದ ಐಕ್ಯ ಹೋರಾಟ ಕಾಣ ಬಂದಿದೆ. ಕಾರ್ಮಿಕ ವರ್ಗದಿಂದ ಇನ್ನೊಂದು ಸುತ್ತಿನ ಹೋರಾಟ ನಡೆಯಲಿದೆ. ಇದು ಎಲ್ಲ ಸಾಮೂಹಿಕ ಸಂಘಟನೆಗಳು, ಪ್ರಜಾಪ್ರಭುತ್ವವಾದಿ ಗುಂಪುಗಳು ಮತ್ತು ಸಾಮಾಜಿಕ ಆಂದೋಲನಗಳ ಒಂದು ಐಕ್ಯ ವೇದಿಕೆಯಿಂದ ಐಕ್ಯ ಮತ್ತು ಅವಿರತ ಕಾರ್ಯಾಚರಣೆ ನಡೆಸಬೇಕಾಗಿರುವ ಸನ್ನಿವೇಶ. ಇದು ವಿದ್ಯಾರ್ಥಿಗಳು, ಯುವಜನರು ಮತ್ತು ಮಹಿಳೆಯರನ್ನು ದೊಡ್ಡ ಪ್ರಮಾಣದಲ್ಲಿ ಸೆಳೆಯಬೇಕಾಗಿದೆ. ಇಂತಹ ಆಂದೋಲನಗಳೊಂದಿಗೆ, ಹಿಂದುತ್ವ ಕೋಮುವಾದಿ ಶಕ್ತಿಗಳ ವಿರುದ್ಧ ರಾಜಕೀಯ ಮತ್ತು ಸೈದ್ಧಾಂತಿಕ ಮಟ್ಟದಲ್ಲಿ ಒಂದು ಅವಿಶ್ರಾಂತ ಹೋರಾಟ ನಡೆಯಬೇಕಾಗಿದೆ.

ಬಿಜೆಪಿ ಮತ್ತು ಮೋದಿ ಸರಕಾರದ ಧೋರಣೆಗಳಿಗೆ ಪರ್ಯಾಯವಾದ ಒಂದು ಕಾರ್ಯಕ್ರಮವನ್ನು ಮುಂದೊತ್ತಬೇಕು. ಇಂತಹ ಒಂದು ಎಡ ಮತ್ತು ಪ್ರಜಾಪ್ರಭುತ್ವವಾದಿ ಕಾರ್ಯಕ್ರಮದ ಆಧಾರದ ಮೇಲಷ್ಟೇ ಒಂದು ನಂಬಲರ್ಹ ರಾಜಕೀಯ ಪರ್ಯಾಯವನ್ನು ಕಟ್ಟುವತ್ತ ಮುಂದೆ ಸಾಗಲು ಸಾಧ್ಯ. ○



ಅಲ್ಲಿ 'ಮಹಾಗಟಬಂಧನ' ಕುಸಿಯುತ್ತಿದ್ದರೂ ಇಲ್ಲಿ ಜನಗಳ ಮಹಾಮೈತ್ರಿಗಳು ಬೆಸೆಯುತ್ತಿವೆ



ದೇಶಾದ್ಯಂತ ನಡೆಯುತ್ತಿರುವ ಅಸಂಖ್ಯಾತ ಸಣ್ಣ-ದೊಡ್ಡ ಹೋರಾಟಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೈತ್ರಿಗಳು ಬೆಸೆದು ಕೊಳ್ಳುತ್ತಿವೆ. ಲೂಟಿಕೋರರ ಆರ್ಥಿಕ ಧೋರಣೆಗಳಿಗೆ ಎದುರಾಗಿ ಜೀವನಾಧಾರದ ಪ್ರಶ್ನೆಗಳ ಮೇಲೆ ಹೋರಾಟಗಳೊಂದಿಗೆ ಜಾತ್ಯತೀತ ಮೌಲ್ಯಗಳಿಗಾಗಿ ಹೋರಾಟ ಬೆಸೆದುಕೊಂಡಾಗ ಅದು ಭಾರತವನ್ನು ಬದಲಿಸಲು ಮತ್ತು ಉಳಿಸಲು ನೆರವಾಗಬಲ್ಲದು. ಭಾರತವನ್ನು ಬದಲಿಸಿ, ಭಾರತವನ್ನು ಉಳಿಸಿ. ಇದೇ ಹೊಸ ನಿರೀಕ್ಷೆಗಳನ್ನು ಮೂಡಿಸುವ ರಾಜಕೀಯ.

ಬೃಂದಾ ಕಾರಟ್

....ಈಗಿನ ಸನ್ನಿವೇಶದಲ್ಲಿ ಈ ಮುಖಂಡ ಅಥವ ಆ ಮುಖಂಡನ ದೌರ್ಬಲ್ಯಗಳ ಮೇಲೆ ಗಮನ ಕೇಂದ್ರೀಕರಿಸುವುದು ಸೂಕ್ತವೆನಿಸಬಹುದು, ಸರಿಯಾಗಿಯೇ ಇರಬಹುದು. ಆದರೆ ಈ ರೀತಿ ನೋಡುವಾಗ ಮೂಲ ಸತ್ಯ ತಪ್ಪಿ ಹೋಗುತ್ತದೆ. ಅದೆ-ಂದರೆ, ಆರ್ಥಿಕ ಧೋರಣೆಗಳ ಬಗ್ಗೆ ಸಮಾನ ನಿಲುವು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಪಕ್ಷಾಂತರಗಳನ್ನು ಅಷ್ಟರ ಮಟ್ಟಿಗೆ ಸುಲಭಗೊಳಿಸುತ್ತದೆ. ಇದು ಎರಡು ದಿಕ್ಕಿನಲ್ಲೂ ಕೆಲಸ ಮಾಡಬಹುದು.

ಮೇಲುಮೇಲಿನ ರಾಜಕೀಯ ಲೆಕ್ಕಾಚಾರದ ಆಧಾರದಲ್ಲಿ ಸಮಯಸಾಧಕ ಮೈತ್ರಿಗಳು ವಿವಿಧ ಮಟ್ಟಗಳಲ್ಲಿ, ರೈತರು ಮತ್ತು ಕಾರ್ಮಿಕರ ಮೇಲೂ ಸೇರಿದಂತೆ ಸಂಘ ಪರಿವಾರ ನಡೆಸುತ್ತಿರುವ ಪ್ರಹಾರಗಳ ಆಕ್ರಮಣಕಾರೀ ಸ್ವರೂಪಕ್ಕೆ ಸವಾಲು ಹಾಕಲಾರವು. ಜನರ ಬದುಕು ಮತ್ತು ಆರ್ಥಿಕ ಪ್ರಶ್ನೆಗಳ ಮೇಲೆ ಪರ್ಯಾಯ ಧೋರಣೆಗಳು ಮತ್ತು ಜೀವಂತ ಜಾತ್ಯತೀತ ಮಧ್ಯಪ್ರವೇಶಗಳ ಮೂಲಕ ಮಾತ್ರವೇ ಒಂದು ಪ್ರತಿ-ಆಖ್ಯಾನವನ್ನು ಕಟ್ಟಲು ಸಾಧ್ಯ. ಎಡಪಕ್ಷಗಳು ಕೇರಳ ಮತ್ತು ತ್ರಿಪುರದಲ್ಲಿ ತಮ್ಮ ರಾಜ್ಯ ಸರಕಾರಗಳ ಮೇಲೆ ಭೀಷಣ ದಾಳಿಗಳನ್ನು ಎದುರಿಸುತ್ತಲೇ ಇದನ್ನು ಕಟ್ಟಲು ಶ್ರಮಿಸುತ್ತಿವೆ. ಇದರ ಜತೆಗೇ ಕೋಮುವಾದದ ವಿರುದ್ಧ ಒಂದು ವಿಶಾಲ ವ್ಯಾಪ್ತಿಯ ವೇದಿಕೆಯ ಮೇಲೆ ಎಲ್ಲ ಜಾತ್ಯತೀತ ವಿಚಾರಗಳ ವ್ಯಕ್ತಿಗಳು ಮತ್ತು ಸಂಘಟನೆಗಳೊಂದಿಗೆ ಅವಿರತ ಸಾರ್ವಜನಿಕ ಪ್ರಚಾರಾಂದೋಲನದಲ್ಲಿ ಜತೆಗೂಡಿವೆ.

ಅಲ್ಲಿ 'ಮಾಹಗಟಬಂಧನ' ಅಸ್ತವ್ಯಸ್ತಗೊಂಡು ಕರಗಿ ಹೋಗುತ್ತಿದ್ದರೂ, ನಾವು ಜನಗಳು ತಮ್ಮ ಮೂಲಭೂತ ಆಗ್ರಹಗಳೊಂದಿಗೆ ಅಣಿನೆರೆಯುತ್ತಿರುವ ಒಂದು ಭಿನ್ನ ಚಿತ್ರವನ್ನೂ ಕಾಣುತ್ತಿದ್ದೇವೆ.

ದೇಶಾದ್ಯಂತ ರೈತರು ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಆಧಾರದಲ್ಲಿ ಒಂದು ನ್ಯಾಯಯುತ ಕನಿಷ್ಟ ಬೆಂಬಲ ಬೆಲೆಗಾಗಿ ಚಳುವಳಿಗಳನ್ನು ನಡೆಸುತ್ತಿದ್ದಾರೆ. ಕಾರ್ಮಿಕರು ಕನಿಷ್ಠ ಕೂಲಿಗಳಿಗಾಗಿ, ಮನಬಂದಂತೆ ದುಡಿಸಿಕೊಳ್ಳುವ ಅಥವ ಕಿತ್ತೆಸೆಯುವ ಅತ್ಯಂತ ಶೋಷಣಕಾರಿ ಕಾಂಟ್ರಾಕ್ಟರ್ ವ್ಯವಸ್ಥೆಯ ವಿರುದ್ಧ ಒಟ್ಟುಗೂಡುತ್ತಿದ್ದಾರೆ. ಒಂದು ಗೌರವಪೂರ್ಣ ಉದ್ಯೋಗದ ನಿರೀಕ್ಷೆ ಮಸುಕಾಗುತ್ತಿರುವ ಸನ್ನಿವೇಶದಲ್ಲಿ ಸಾವಿರಾರು ಯುವಜನರು ದಿಲ್ಲಿಯಲ್ಲಿ ಸಭೆ ಸೇರಿ ಉದ್ಯೋಗಕ್ಕಾಗಿ ಹೋರಾಡಲು ನಿರ್ಧರಿಸಿದ್ದಾರೆ. ಮಹಿಳೆಯರು ಹೋರಾಡಿ ಗೆದ್ದಿರುವ ಹಕ್ಕುಗಳನ್ನು ಮೊಟಕುಮಾಡುತ್ತಿರುವ ಸಂದರ್ಭದಲ್ಲಿ ಮತ್ತೊಮ್ಮೆ ಮೂರನೇ ಒಂದು ಮೀಸಲಾತಿಯ ಹೋರಾಟಕ್ಕೆ ಅಣಿನೆರೆಯುತ್ತಿದ್ದಾರೆ. ಸಂಕುಚಿತ ಅಜೆಂಡಾಗಳಿಂದ ಹೌಹಾರಿರುವ ನಾಗರಿಕರು ದೊಡ್ಡಪ್ರಮಾಣದಲ್ಲಿ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಮೌಲ್ಯಗಳ ಪರವಾಗಿ ಕೈಗಳನ್ನೆತ್ತುತ್ತಿದ್ದಾರೆ. ಸಾಮಾಜಿಕ ಆಂದೋಲನಗಳು, ಜನಪರತೆಗೆ ಬದ್ಧವಾಗಿರುವ ಸರ್ಕಾರೇತರ ಸಂಸ್ಥೆಗಳು, ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಸಂಘಟನೆಗಳು ಮತ್ತು ಆಂದೋಲನಗಳು ತಮ್ಮ ಹಕ್ಕುಗಳ ಮೇಲಿನ ಪ್ರಹಾರಗಳಿಗೆ ಪ್ರತಿರೋಧ ಒಡ್ಡುತ್ತಿದ್ದಾರೆ.

ದೇಶಾದ್ಯಂತ ನಡೆಯುತ್ತಿರುವ ಅಸಂಖ್ಯಾತ ಸಣ್ಣ-ದೊಡ್ಡ ಹೋರಾಟಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೈತ್ರಿಗಳು ಬೆಸೆದು ಕೊಳ್ಳುತ್ತಿವೆ. ಮುಖ್ಯಧಾರೆಯ ಮಾಧ್ಯಮಗಳ ಪ್ರಸಾರಗಳಲ್ಲಿ ಈ ಹೋರಾಟಗಳಿಗೆ ಸ್ಥಾನ ಕೊಡದಿರಬಹುದು, ಆದರೆ ಅದರಿಂದ ಇಂತಹ ಹೋರಾಟಗಳ ಅಸ್ತಿತ್ವವೇನೂ ಅಳಿಸಿ ಹೋಗುವುದಿಲ್ಲ.

ಜನಗಳು ತಮ್ಮ ಸ್ವಂತ ಹೋರಾಟಗಳ ಮೂಲಕ ಕಟ್ಟುವ ಮೈತ್ರಿಕೂಟಗಳ ಶಕ್ತಿ ಸಂಘಪರಿವಾರದ ವಿಭಜನಕಾರಿ ಮತ್ತು ಅಪಾಯಕಾರಿ ಧೋರಣೆಗಳ ವಿರುದ್ಧ ಅತ್ಯುತ್ತಮ ಮತ್ತು ಅತ್ಯಂತ ಬಲಿಷ್ಠ ಕೊತ್ತಳವಾಗಬಲ್ಲದು. ಮುಸ್ಲಿಂ ಮತ್ತು ಹಿಂದೂ ರೈತರು ಮಹಾರಾಷ್ಟ್ರ, ರಾಜಸ್ತಾನ, ಮಧ್ಯಪ್ರದೇಶ, ಝಾರ್ಖಂಡ್‌ಗಳಲ್ಲಿ ತಮ್ಮ ಎಲ್ಲರ ಸಾಮಾನ್ಯ ಬೇಡಿಕೆಗಳ ಮೇಲೆ ಹೆಗಲಿಗೆ ಹೆಗಲು ಕೊಟ್ಟು ನಿಂತಾಗ, ಅವರು ನಾವು ನೆಚ್ಚಿಕೊಂಡಿರುವ ಭಾರತದ ವಿಚಾರವನ್ನು ಪ್ರತಿನಿಧಿಸುತ್ತಾರೆ. ವಿಭಿನ್ನ ಮತೀಯ ಛಾಯೆಗಳ ಕಾರ್ಮಿಕರು ಮತ್ತು ಇತರ ಶ್ರಮಜೀವಿಗಳು ತಮ್ಮ ಐಕ್ಯತೆಯನ್ನು ಕಟ್ಟಲು ಮುಂದಾದಾಗ ಒಂದು ಪರ್ಯಾಯದ ಸಾಧ್ಯತೆ ತೆರೆದುಕೊಳ್ಳುತ್ತದೆ.

ಭಾರತವನ್ನು ಲೂಟಿ ಮಾಡಿರುವ , ಮಾಡುತ್ತಿರುವ ಆರ್ಥಿಕ ಧೋರಣೆಗಳಿಗೆ ಎದುರಾಗಿ ಜೀವನಾಧಾರದ ಪ್ರಶ್ನೆಗಳ ಮೇಲೆ ಹೋರಾಟಗಳೊಂದಿಗೆ ಜಾತ್ಯತೀತ ಮೌಲ್ಯಗಳಿಗಾಗಿ ಹೋರಾಟ ಬೆಸೆದುಕೊಂಡಾಗ ಅದು ಭಾರತವನ್ನು ಬದಲಿಸಲು ಮತ್ತು ಉಳಿಸಲು ನೆರವಾಗಬಲ್ಲದು. ಭಾರತವನ್ನು ಬದಲಿಸಿ, ಭಾರತವನ್ನು ಉಳಿಸಿ. ಇದೇ ಹೊಸ ನಿರೀಕ್ಷೆಗಳನ್ನು ಮೂಡಿಸುವ ರಾಜಕೀಯ.

ಎಡಪಂಥೀಯರು ತಮ್ಮ ಹಳಸಲಾಗಿರುವ ತತ್ವಗಳಿಗೆ ಅಂಟಿಕೊಂಡಿದ್ದಾರೆ ಎಂದು ಹೀಗಳೆಯುವವರು ಪ್ರಸಕ್ತ ಪರಿಸ್ಥಿತಿಯ ಈ ಆಯಾಮಗಳನ್ನು ಪರಿಗಣಿಸ ಬಯಸಬಹುದು.

(.ndtv.com ನಲ್ಲಿ ಪ್ರಕಟವಾದ ಲೇಖನದಿಂದ) ○



ದುಡಿಯುವ ಜನರ ಹಕ್ಕುಗಳ ಸಂರಕ್ಷಣೆಗಾಗಿ

ಸಮೃದ್ಧ- ಸಮಗ್ರ- ಸೌಹಾರ್ದ ಕರ್ನಾಟಕ ಜಾಗೃತಿ ಜಾತಾ

ಉತ್ಸಾಹದಿಂದ ಸಂಘರ್ಷದೆಡೆಗೆ

ಸ್ವಾತಂತ್ರ್ಯೋತ್ಸವ 70ರ ಅಂಗವಾಗಿ, ದುಡಿಯುವ ಜನರ ಹಕ್ಕುಗಳ ಸಂರಕ್ಷಣೆಗಾಗಿ ಕರ್ನಾಟಕವು ಸಮೃದ್ಧವಾಗಿ, ಸಮಗ್ರವಾಗಿ ಹಾಗೂ ಸೌಹಾರ್ದಯುತವಾಗಿರಬೇಕೆಂಬ ಘೋಷಣೆಯೊಂದಿಗೆ 2017ರ ಜುಲೈ 29 ರಿಂಧ ಆಗಸ್ಟ್ 13 ರವರೆಗೆ ಜಾಗೃತಿ ಜಾತಾ ಹಮ್ಮಿಕೊಂಡಿದೆ. 1938 ಏಪ್ರೀಲ್ 23 ರಂದು ಕರ್ನಾಟಕದ ಜಾಲಿಯಾನ್‌ವಾಲಾ ಬಾಗ್ ಎಂದೇ ಖ್ಯಾತಿ ಪಡೆದಿರುವ ವಿದುರಾಶ್ವಥದ ಹುತಾತ್ಮ ಸ್ಥಳ ವೀರ ಸೌಧದಿಂದ ಪ್ರಾರಂಭವಾದ ಜಾಥಾ, ರಾಜ್ಯ ಕಾರ್ಮಿಕ ಚಳುವಳಿಗೆ ನಾಂದಿ ಹಾಡಿ KGF ಮೂಲಕ ಸ್ವತಂತ್ರ ಹೋರಾಟದ ವೇಳೆ ಮಹಾತ್ಮ ಗಾಂಧಿ ಸಭೆ ನಡೆಸಿದ್ದ ಬೆಂಗಳೂರಿನ ಬನ್ನಪ್ಪ ಪಾರ್ಕ್ ಹುತಾತ್ಮ ಚೌಕದ ಮೂಲಕ, ಮಂಡ್ಯಾದ ಸತ್ಯಾಗ್ರಹ ಸೌಧದ ಮೂಲಕ ಹಾದು ರಾಜ್ಯದ ಉದ್ದಗಲ ಎಲ್ಲಾ ಜಿಲ್ಲೆಗಳಿಗೂ ಸಂಚರಿಸಿ, ಕುಂದಾಪುರದಲ್ಲಿ ಆಗಸ್ಟ್ 13 ರಂದು ಸಮಾರೋಪಗೊಳ್ಳಲಿದೆ. ಜಾತಾ ಆಗಸ್ಟ್ 4ರ ವರೆಗೆ 13 ಜಿಲ್ಲೆಗಳಲ್ಲಿ 20 ಸ್ಥಳಗಳನ್ನು ತಲುಪಿದೆ.

ಅದರ ಬೆನ್ನಲ್ಲೇ ಆಗಸ್ಟ್ 14 ರಂದು ರಾಜ್ಯಾದ್ಯಾಂತ ಎಲ್ಲಾ ತಾಲೂಕುಗಳಲ್ಲಿ ಸಂಜೆ 6 ರಿಂದ ಮುಂಜಾನೆ 6ರವರೆಗೆ "ಸ್ವಾತಂತ್ರ್ಯೋತ್ಸವ-ಸತ್ಯಾಗ್ರಹ" ವನ್ನು ನಡೆಸಿ ಸೆಪ್ಟಂಬರ್ ಮೊದಲ ವಾರದಲ್ಲಿ ಸ್ಥಳೀಯ ಜಾಥಾಗಳ ಮೂಲಕ ಸೆಪ್ಟಂಬರ್ 14 ರಂದು ಲಕ್ಷಾಂತರ ಕಾರ್ಮಿಕರ "ನಮ್ಮ ನಡೆ ಬೆಂಗಳೂರಿನೆಡೆ ಮಹಾನಡೆ" ಯೊಂದಿಗೆ ಮಾರ್ಧನಿಸಲಿದೆ.

ಕೆ.ಎನ್. ಉಮೇಶ್

ರಾಜ್ಯದ ಕಾರ್ಮಿಕ ವರ್ಗ ಹಾಗೂ ದುಡಿಯುವ ಜನತೆಯ ಬೇಡಿಕೆಗಳನ್ನು ರಾಜ್ಯ ಸರ್ಕಾರದ ಮುಂದೆ ಇರಿಸಿದ್ದರೂ ಸಹಾ ದಶಕಗಳಿಂದ ಅವುಗಳ ಈಡೇರಿಕೆಗೆ ಸಮರ್ಪಕ ಕ್ರಮಗಳನ್ನು ಸರ್ಕಾರಗಳು ವಹಿಸಿಲ್ಲ. ಪ್ರಸಕ್ತ ರಾಜ್ಯ ಸರ್ಕಾರವು ತನ್ನ ನಾಲ್ಕು ವರ್ಷಗಳನ್ನು ಪೂರೈಸಿ 5ನೇ ವರ್ಷದೆಡೆಗೆ "ಸಾರ್ಥಕ ನಾಲ್ಕು ವರ್ಷಗಳು – ನುಡಿದಂತೆ ನಡೆದಿದ್ದೇವೆ" ಎಂಬ ಘೋಷವಾಕ್ಯದೊಂದಿಗೆ ಮುನ್ನಡೆದಿದೆ.

1. ಈ ಸರ್ಕಾರ ಅಧಿಕಾರಕ್ಕೆ ಬಂದ 9 ನೇ ತಿಂಗಳಲ್ಲಿ ಸಿಐಟಿಯು ನಡೆಸಿದ ಬೃಹತ್ ವಿಧಾನ ಸೌಧ ಚಲೋ ನಂತರ 2014 ಜನವರಿಯಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಂದಿನ ಕಾರ್ಮಿಕ ಸಚಿವರು ಹಾಗೂ ಸಿಐಟಿಯು ರಾಜ್ಯ ನಿಯೋಗದೊಂದಿಗೆ ನಡೆದಿಂದ್ದ ಸಭೆಯಲ್ಲಿ ಮುಖ್ಯಮಂತ್ರಿಗಳೇ ನೀಡಿದ್ದ ನಿರ್ದೇಶನದಂತೆ "ಗುತ್ತಿಗೆ ಹಾಗೂ ಇತರೆ ಕಾಯಮೇತರರನ್ನು ಕಾಯಂಗೊಳಿಸಲು" ತಮಿಳುನಾಡು ಹಾಗೂ ಅಸ್ಸಾಂ ಮಾದರಿಯ ಶಾಸನಕ್ಕೆ ಕರಡು ತಯಾರಾಗಿ ಕಾರ್ಮಿಕ ಭವನದಲ್ಲಿದೆ. ಆದರೆ ಮೂರೂವರೆ ವರ್ಷಗಳಾದರೂ ಸಹಾ ಆ ಕರಡು ಮಸೂದೆಯು ವಿಕಾಸ ಸೌಧ-ವಿಧಾನ ಸೌಧ ತಲುಪುವ ಭಾಗ್ಯ ಪಡೆಯಲಿಲ್ಲ.
2. ಕಾರ್ಮಿಕ ಸಂಘ ಮಾನ್ಯ ಮಾಡುವ ಶಾಸನಕ್ಕೆ ಕರಡು ತಯಾರಾಗಿ, ಕಾನೂನು, ಹಣಕಾಸು ಇಲಾಖೆ ಅನುಮೋದನೆ ಪಡೆದು ಕ್ಯಾಬಿನೆಟ್ ವಿಭಾಗದಲ್ಲಿದೆ. ಆದರೆ ಮಾಲಿಕರ ಒತ್ತಡಕ್ಕೆ ಮಣಿದು ಸರ್ಕಾರ, ಸಿಐಟಿಯು ನಿಯೋಗದೊಂದಿಗೆ ಚೌಕಾಸಿ ಮಾಡುತ್ತಾ, ಹೊರಗಿನವರು ಯಾರು ಇರಬಾರದು ಎಂಬ ಷರತ್ತಿಗೆ ಒಪ್ಪಿಕೊಂಡರೆ, ಮಸೂದೆ ಅಂಗೀಕರಿಸುವ ಪ್ರಸ್ತಾಪವನ್ನು 2017 ಜನವರಿಯಲ್ಲಿ ಸಿಐಟಿಯು ನಡೆಸಿದ ಅಹೋರಾತ್ರಿ ಧರಣಿಯ ನಂತರ ಹಾಲಿ ಕಾರ್ಮಿಕ ಸಚಿವರು ಪ್ರಸ್ತಾಪಿಸುತ್ತಾರೆ. ಮಹಾರಾಷ್ಟ್ರ ಮಾದರಿಯ ಕಾರ್ಮಿಕ ಸಂಘ ಮಾನ್ಯತೆ ಹಾಗೂ ಅಕ್ರಮ ಕಾರ್ಮಿಕ ನಡಾವಳಿಕೆ ತಡೆ ಕಾಯ್ದೆಗೆ ಸಿಐಟಿಯು ಒತ್ತಾಯಿಸಿದರೆ ರಾಜ್ಯದ ಕರಡು ಕೇವಲ ಕಾರ್ಮಿಕ ಸಂಘ ಮಾನ್ಯತೆಗೆ ಮಾತ್ರ ಕರಡು ಮಸೂದೆ ಸಿದ್ಧಪಡಿಸಿದೆ.
3. ಪಶ್ಚಿಮ ಬಂಗಾಳ ಮಾದರಿಯಲ್ಲಿ "ಅಸಂಘಟಿತ ಕಾರ್ಮಿಕರಿಗೆ ಭವಿಷ್ಯ ನಿಧಿ ಯೋಜನೆಯ ಶಾಸನಕ್ಕೆ" ಕರಡು ಸಹಾ ಸಿದ್ಧವಾಗಿದೆ. ಆದರೆ ಅದಕ್ಕೆ ಅನುಮೋದನೆ ನೀಡಿ ಸಮಗ್ರ ಭವಿಷ್ಯದ ನಿಧಿ ಯೋಜನೆ ರೂಪಿಸುವ ಬದಲು, ಅದನ್ನು ಶಾಸನಬದ್ಧಗೊಳಿಸುವ ಬದಲು ಆಂಶಿಕವಾಗಿ ಕೆಲವು ಅಸಂಘಟಿತ ಕಾರ್ಮಿಕರಾದ ಮನೆಕೆಲಸಗಾರರು, ಕಟ್ಟಡಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಟೈಲರ್‌ಗಳಿಗೆ ಮಾತ್ರ ಅಲ್ಪ ಪ್ರಮಾಣದ ಭವಿಷ್ಯನಿಧಿ ಭಾಗ್ಯ ನೀಡಿದೆ.
4. ಸಮಾನ ಕನಿಷ್ಟ ವೇತನ ರೂಪಿಸಲು ರಾಜ್ಯದ ಕಾರ್ಮಿಕರು 2008ರಿಂದಲೂ CITU ನೇತೃತ್ವದಲ್ಲಿ ನಿರಂತರ ಹೋರಾಟ ನಡೆಸುತ್ತಾ ಬಂದಿದ್ದಾರೆ. ಅಂದಿನ ಮುಖ್ಯಮಂತ್ರಿಗಳು ಹೋರಾಟದ ತೀವ್ರತೆಗೆ ಮಣಿದು ರಚಿಸಿದ್ದ ಕನಿಷ್ಟ ವೇತನ ಕಾಯ್ದೆ-1936 ರಡಿಯ ಕಲಂ 5(1)(a) ಸಭೆಯನ್ನೇ ಸೇರಿಲ್ಲ. ಆ ಸಮಿತಿಯನ್ನು ಸೇರಿಸಿ ವರದಿ ಪಡೆದು ರಾಜ್ಯವ್ಯಾಪಿ ಸಮಾನ ಕನಿಷ್ಟ ವೇತನ ರೂಪಿಸಿ, ರೂ.18,000/- ಕನಿಷ್ಟ ವೇತನ ನಿಗದಿ ಮಾಡುವ ಬದಲು, ಒಂದೊಂದೆ ಅಧಿಸೂಚಿತ ಉದ್ಯೋಗಗಳಿಗೆ ಪ್ರತ್ಯೇಕವಾಗಿ ಕನಿಷ್ಟ ವೇತನವನ್ನು ಹತ್ತು ಸಾವಿರದಿಂದ 14,000/- ರೂಗಳವರೆಗೆ ನಿಗದಿಗೊಳಿಸಲು ಮುಂದಾಗಿದೆ. ಮೊದಲು ಪರಿಷ್ಕರಣೆಗೆ ಒಳಪಟ್ಟ ಉದ್ಯೋಗದ ಕನಿಷ್ಟ ವೇತನ 1-4-2015 ರಿಂದ ಜಾರಿಯಾಗಬೇಕಿತ್ತು. ಆದರೆ ಅದನ್ನು ಮಾಲಿಕರ ಸಂಘವು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿ ತಡೆ ಆಜ್ಞೆ ಪಡೆದುಕೊಂಡಿತು. ಆದರೆ ನ್ಯಾಯಾಲಯದ ಆದೇಶದಂತೆ ಕೇವಲ 75 ಶೇಕಡಾ ನಿಗಧಿತ ಕನಿಷ್ಟ ವೇತನವನ್ನು ತಡೆ ಆಜ್ಞೆ ಸಮಯದಲ್ಲಿ ನೀಡಲು ಆದೇಶಿಸಿತು. ಪರಿಣಾಮವಾಗಿ ಕನಿಷ್ಟ ವೇತನ ರೂ.10,000/- ವಾದರೂ ಸಹಾ ಕೈಗೆ ಬಂದಿದ್ದು ಮಾತ್ರ ರೂ.7,500/-, ವಿಚಾರಣೆ ಮುಕ್ತಾಯ ಹಂತಕ್ಕೆ ಬಂದಾಗ ಮಾಲಿಕರು ತಾಂತ್ರಿಕ ಲೋಪವೆತ್ತಿ ಅಧಿಸೂಚನೆಗೂ ಮನ್ನ ಸಂಬಂಧಿತ ಸಚಿವರ ಅಂಕಿತ ಪಡೆದಿಲ್ಲ ಎಂಬ ಕ್ರಮಾಲೋಪವನ್ನು ನ್ಯಾಯಾಲಯ ಪರಿಶೀಲಿಸಿದಾಗ ರಾಜ್ಯ ಸರ್ಕಾರದ ಸಂಬಂಧಿತ ಕಡತಗಳಲ್ಲಿ ಅಂದಿನ ಕಾರ್ಮಿಕ ಸಚಿವರ ಅಂಕಿತ ಇರುವ ಪುಟವೇ ನಾಪತ್ತೆ ಆಗಿರುವುದು ಕಂಡು ಬಂದ ಕಾರಣ, ಕ್ರಮಾನುಸಾರ ಅಧಿಸೂಚನೆ ಹೊರಡಿಸಲು ನಿಗದಿತ ಕನಿಷ್ಟ ವೇತನವನ್ನು ಕುರಿತು ಮಾಲಿಕರ ತಕರಾರನ್ನು ತಿರಸ್ಕರಿಸಿತು. 2016ರ ನವಂಬರ್ ಒಳಗೆ ಪುನರ್ ಅಧಿಸೂಚನೆ ಹೊರಡಿಸಲು ಹಾಗೂ ಪುಟ ನಾಪತ್ತೆ ಕಾರಣರಾದವರ ಮೇಲೆ ವಹಿಸಲಾದ ಕ್ರಮವನ್ನು ಡಿಸೆಂಬರ್ 2016 ರೊಳಗೆ ನ್ಯಾಯಾಲಯಕ್ಕೆ ಸಲ್ಲಿಸಲು ಆದೇಶಿಸಿತು.

ರಾಜ್ಯ ಸರ್ಕಾರವು ಜನವರಿ 2017ರಿಂದ ಜಾರಿಗೆ ಬರುವಂತೆ ಸಂಬಂಧಿತ ಉದ್ದಿಮೆಗಳ ಅಧಿಸೂಚನೆ ಹೊರಡಿಸಿದೆ. ಮೊದಲಿಗೆ 1-4-2016 ರಿಂದ ಹೆಚ್ಚಳವಾಗಿರುವ ತುಟ್ಟಿ ಭತ್ಯ ನೀಡಬೇಕೆಂದು ಆದೇಶಿಸಿದ್ದ ಸರ್ಕಾರ ಅನಂತರ ಮತ್ತೊಂದು ಅಧಿಸೂಚನೆ ಹೊರಡಿಸಿ ಅದನ್ನು ಹೊರತು ಪಡಿಸಿದೆ.

ಈ ಎಲ್ಲಾ ಪ್ರಕ್ರಿಯೆಗಳಲ್ಲಿ ಒಂದೆಡೆ ಸರ್ಕಾರದ ಆಡಳಿತ ವೈಫಲ್ಯ ಕಂಡುಬಂದರೆ, ತನ್ನದೇ ಆದೇಶವನ್ನು ಪ್ರತಿಪಾದಿಸಿಕೊಳ್ಳುವಲ್ಲಿ ಜಾಣ ವೈಫಲ್ಯವನ್ನು ತೋರಿ 1-4-2015 ರಿಂದ 1-1-2017ರವರೆಗೆ 20 ತಿಂಗಳುಗಳ ಕಾಲ ರಾಜ್ಯದ ಸಂಬಂಧಿತ ಕಾರ್ಮಿಕರಿಗೆ ಮಾಸಿಕ 3000/- ರೂ ಕನಿಷ್ಟ ವೇತನ ಸಿಗದಂತಾಗಿದೆ, ಮಾತ್ರವಲ್ಲ 1-4-2016 ರಿಂದ 31-3-2017ರ ವರೆಗೆ 12 ತಿಂಗಳು ಸಿಗಬೇಕಿದ್ದ ತುಟ್ಟಿ ಭತ್ಯೆ ಬಾಬ್ತು ಪ್ರತಿ ತಿಂಗಳಿಗೆ ಸುಮಾರು ರೂ.350 ಸಿಗದಂತಾಗಿದೆ. ಒಟ್ಟಾರೆ ಪ್ರತಿ ಕಾರ್ಮಿಕನಿಗೆ ಸುಮಾರು 75,987 ರೂ.ಗಳು ಸಿಗದಂತಾಗಿದೆ. ಅದನ್ನು ಒಟ್ಟು ಕಾರ್ಮಿಕರಲ್ಲಿ ಗುಣಿಸಿದಲ್ಲಿ ಎಂತಹ ದೊಡ್ಡ ಮೊತ್ತದ ಹಣವನ್ನು, ಕಾರ್ಮಿಕರ ವೇತನದ ಪಾಲನ್ನು ರಾಜ್ಯದಲ್ಲಿನ ಮಾಲಿಕರಿಗೆ- ಬಂಡವಾಳಗಾರರಿಗೆ ಈ ರಾಜ್ಯ ಸರ್ಕಾರ ಉಳಿಸಿದೆ? ಕನಿಷ್ಟ 10 ಲಕ್ಷ ಕಾರ್ಮಿಕರು ಸಂಬಂಧಿತ ಉದ್ದಿಮೆಗಳಲ್ಲಿದ್ದಾರೆ. ಎಂದು ಅಂದಾಜಿಸಿದರೂ ಸಹಾ 7500/- ಕೋಟಿ ರೂಗಳ ಹಗರಣವಿದು, ಇದರ ಕುರಿತು ಮಾತ್ರ ವಿಧಾನ ಸಭೆಯಲ್ಲಿ ಯಾವುದೇ ಪಕ್ಷವು ಚಕಾರವೆತ್ತುತ್ತಿಲ್ಲ. !!

ಆನಂತರ ಉಳಿದ 380 ಉದ್ದಿಮೆಗಳಿಗೆ ಇತ್ತೀಚೆಗೆ ಹೊರಡಿಸಿರುವ ಕರಡು ಅಧಿಸೂಚನೆಗಳಲ್ಲಿ ವೇತನ ಪರಿಷ್ಕರಣೆಯನ್ನು ಮಾರುಕಟ್ಟೆಯಿಂದ ಸಂಗ್ರಹಿಸಲಾಗಿರುವ ಬೆಲೆಗಳ ಧಾರಣೆ ಆಧರಿಸಿ ನಡೆಸುವ ಬದಲು ಆಯಾಯ ಉದ್ಯೋಗಳಿಗೆ ಹಾಲಿಯಿರುವ ತುಟ್ಟಿ ಭತ್ಯೆಯನ್ನು ಮೂಲ ವೇತನದಲ್ಲಿ ವಿಲೀನಗೊಳಿಸಿ ರೂ.10,000/- ಕ್ಕೆ ಸಮದೂಗಿಸಿ ಕನಿಷ್ಟವೇತನ ನಿಗದಿಗೆ ಅನುಸರಿಸಲಾಗುವ ಶಾಂತಪ್ಪ ಸಮಿತಿಯ ಶಿಪಾರಸ್ಸುಗಳ ಪುನರ್ ಪರಿಶೀಲನೆಗೆ ಒಂದು ಸಮಿತಿ ರಚಿಸಿದೆ. ಅಸಂಘಟಿತ ಕಾರ್ಮಿಕ ಕಲ್ಯಾಣ ಮಂಡಳಿಗೆ ಅಗತ್ಯ ಅನುದಾನ ನೀಡಿ, ರಾಜ್ಯ ಅಸಂಘಟಿತ ಕಾರ್ಮಿಕರ ಕಲ್ಯಾಣ ನಿಧಿ ಸ್ಥಾಪಿಸಲಿಲ್ಲ, ಕೇಂದ್ರ ಸರ್ಕಾರವಂತೂ ಅದರ ಬಗ್ಗೆ ಚಿಂತಿಸುತ್ತಲೂ ಇಲ್ಲ!

7. ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯ ತೆರೆಯಲು ಕ್ರಮವಹಿಸುತ್ತಿಲ್ಲ. "ಮನೆ ಬಾಗಿಲಿಗೆ ನ್ಯಾಯ"ದ ಹೆಸರಿನಲ್ಲಿ ಕೈಗಾರಿಕಾ ವಿವಾದಗಳನ್ನು ಸ್ಥಳೀಯ ಸಿವಿಲ್ ನ್ಯಾಯಾಲಯಗಳಿಗೆ



ಪ್ರ. ಕಾ. ಎ.ಕೆ. ಪದ್ಮನಾಭನ ಮಾತನಾಡುತ್ತಿರುವುದು



ಬಾಗೇಪಲ್ಲಿ ಬೈಕ್ ಜಾಥಾ



ಬೆಂಗಳೂರು



ವಹಿಸಲಾಗುತ್ತಿರುವ ಕಾರಣ ಕೈಗಾರಿಕಾ ವಿವಾದಗಳ ಕಾಯ್ದೆ–1947 ರ ಉದ್ದೇಶಕ್ಕೆ ಗಂಡಾಂತರ ಒದಗಿ ಬಂದಿದೆ. ಕಾಯ್ದೆಯಂತೆ ಪ್ರತಿ ವಿವಾದವು 6 ತಿಂಗಳ ಒಳಗಾಗಿ ಇತ್ಯರ್ಥವಾಗಬೇಕಿದೆ. ಕೈಗಾರಿಕಾ ವಿವಾದಗಳನ್ನು ಇತ್ಯರ್ಥ ಪಡಿಸಲೆಂದೇ ಇರುವ ನ್ಯಾಯಾಲಯಗಳಲ್ಲಿ ಕನಿಷ್ಠ ಮೂರು ವರ್ಷ ನಡೆಯುತ್ತಿರುವಾಗ, ಸಿವಿಲ್ ನ್ಯಾಯಾಲಯಗಳಲ್ಲಿ ಎಷ್ಟು ವರ್ಷ ಹಿಡಿಯಬಹುದು ಎಂಬುದನ್ನು ಅರಿತು, ಕಾರ್ಮಿಕ ನ್ಯಾಯಾಲಯಗಳನ್ನು ಎಲ್ಲಾ ಜಿಲ್ಲೆಗಳಲ್ಲೂ ತೆರೆಯಬೇಕಿತ್ತು.

8. ಕಾರ್ಮಿಕ ಸಂಘವನ್ನು ಕಟ್ಟಿಕೊಂಡು ಹೋರಾಟಗಳ ಮೂಲಕ ವೇತನಗಳನ್ನು ಕನಿಷ್ಟ ವೇತನಕ್ಕಿಂತ ಹೆಚ್ಚು ಪಡೆದುಕೊಂಡಿರುವ ಕಾರ್ಮಿಕರಿಗೆ ನ್ಯಾಯೋಚಿತ ವೇತನವನ್ನು ಸಂವಿಧಾನದ 42 ಮತ್ತು 43 ನೇ ವಿಧಿ ಅನುಸಾರ "ಸುಖ ಜೀವನ ವೇತನ–ಬದುಕುವ ವೇತನ" ನೀಡಲು ಕ್ರಮವಹಿಸಬೇಕಿದೆ. ಆದರೆ ಕೇಂದ್ರ ಸರ್ಕಾರವಾಗಲೀ ರಾಜ್ಯ ಸರ್ಕಾರವಾಗಲೀ ಆ ನಿಟ್ಟಿನಲ್ಲಿ ಚಿಂತಿಸುತ್ತಲೂ ಇಲ್ಲ.

9. ಕಾರ್ಮಿಕ ಕಾನೂನುಗಳನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸುತ್ತಿಲ್ಲ. ಬದಲಾಗಿ "ಸುಲಲಿತ ವ್ಯವಹಾರ" (Ease of doing Business) ಹೆಸರಿನಲ್ಲಿ ಇರುವ ಕಾನೂನುಗಳನ್ನೆ ಸಡಿಲಗೊಳಿಸಲು ಮುಂದಾಗಿದೆ. ನೂತನ ಕೈಗಾರಿಕಾ ನೀತಿಯಲ್ಲಿ 30 ಶೇಕಡಾ ಗುತ್ತಿಗೆ ಕಾರ್ಮಿಕರನ್ನು ನಿರಂತರ ಉತ್ಪಾದನಾ ಕೆಲಸಗಳಲ್ಲಿ ತೊಡಗಿಸಲು ಅನುವುಗೊಳಿಸಿದೆ. ಗುತ್ತಿಗೆ ಕಾರ್ಮಿಕರ (ಕ್ರಮೀಕರಣ ಮತ್ತು ನಿಷೇಧ) ಕಾಯ್ದೆ–1970 ರ ಅನುಸಾರ ನಿರಂತರ ಹಾಗೂ ಕಾಯಂ ಕೆಲಸಗಳಲ್ಲಿ ಗುತ್ತಿಗೆ ಕಾರ್ಮಿಕರನ್ನು ನಿಯೋಜಿಸುವಂತಿಲ್ಲ. ಕೇಂದ್ರ ಸರ್ಕಾರದ "ಸ್ಕಿಲ್ ಇಂಡಿಯಾ" ಭಾಗವಾಗಿ ಕೌಶಲ್ಯ ಅಭಿವೃದ್ಧಿ ಹೆಸರಲ್ಲಿ "ಸ್ಕಿಲ್ ಕರ್ನಾಟಕ" ಯೋಜನೆ ರೂಪಿಸಿದೆ. ನೂತನ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಮಾಡಿದ ಮೊಟ್ಟ ಮೊದಲ ಕಾರ್ಮಿಕ ಕಾನೂನು ತಿದ್ದುಪಡಿಯಾದ "ಅಪ್ರೆಂಟಿಶಿಪ್ ಕಾಯ್ದೆ–1961" ಮಾಡಿದ ತಿದ್ದುಪಡಿಯಂತೆ ಕಾರ್ಖಾನೆಯ ಒಟ್ಟು ಉದ್ಯೋಗಿಗಳ 30 ಶೇಕಡ ಟ್ರೈನಿಗಳ ನೇಮಕಕ್ಕೆ ಅವಕಾಶವಿದೆ. ಅದರಂತೆ NETAP–ಅಪ್ರೆಂಟಿಸ್ ಕಾರ್ಯಕ್ರಮದ ಮೂಲಕ ರಾಷ್ಟ್ರೀಯ ಉದ್ಯೋಗ ಎಂಬ ಟ್ರೈನಿಂಗ ಕಾರ್ಯಕ್ರಮವನ್ನು ಉದ್ಯೋಗ ಮತ್ತು ತರಬೇತಿ ಇಲಾಖೆ ಅಡಿ ಮತ್ತು NEEM–"ರಾಷ್ಟ್ರೀಯ ಉದ್ಯೋಗ ವರ್ಧನೆಯ ಧ್ಯೇಯ" ಎಂಬ ಟ್ರೈನಿಂಗ ಕಾರ್ಯಕ್ರಮವನ್ನು ಮಾನವ ಸಂಪನ್ಮೂಲ ಇಲಾಖೆಯ ಮೂಲಕ ಕೇಂದ್ರ ಸರ್ಕಾರ ರೂಪಿಸಿ ಜಾರಿಗೊಳಿಸುತ್ತಿದೆ. ಪರಿಣಾಮವಾಗಿ ಕಾಯಂ ಕಾರ್ಮಿಕರ ಜಾಗದಲ್ಲಿ ಈ ಟ್ರೈನಿಗಳ ಮೂಲಕ ಕೆಲಸ ಮಾಡಿಕೊಳ್ಳಲು ಮಾಲೀಕರು ಮುಂದಾಗಿದ್ದಾರೆ. ಆ ಮೂಲಕ ಗುತ್ತಿಗೆ ಕಾರ್ಮಿಕರನ್ನು, ಕಾರ್ಯ ಕಾರ್ಮಿಕರನ್ನು ನೆಪ ಮಾತ್ರಕ್ಕೆ ಇರಿಸಿಕೊಂಡು ಉಳಿದಂತೆ ಅವರ ಮೂಲಕ ಕೆಲಸ ಮಾಡಿಸಿಕೊಳ್ಳಲು ಮುಂದಾಗಿದ್ದಾರೆ. ಅವರಿಗೆ ಕನಿಷ್ಠ ವೇತನದ ಶೇಕಡ 70 ರಷ್ಟು ಭತ್ಯೆ ನೀಡಿದರೆ ಸಾಕು. ಅದರಲ್ಲಿ 50 ಶೇಕಡ ಅಂದರೆ 3,500/– ಸ್ಕಿಲ್ ಇಂಡಿಯಾ ಅನುದಾನವಾಗಿರಲಿದೆ. ಅಂದರೆ ಕೌಶಲ್ಯ ಅಭಿವೃದ್ಧಿ ಹೆಸರಲ್ಲಿ ಮಾಲಿಕರ ಉತ್ಪಾದನಾ ವೆಚ್ಚವನ್ನು ಜನತೆಯ ತೆರಿಗೆ ಹಣದಿಂದ ಸಬ್ಸಿಡೈಸ್ ಮಾಡುವ ಕ್ರಮವಾಗಿದೆ.

ರಾಜ್ಯದ ಇಂತಹ ಕ್ರಮಗಳ ನಡುವೆ ಕೇಂದ್ರ ಸರ್ಕಾರವು ರಾಷ್ಟ್ರದಲ್ಲಿನ 44 ಕೇಂದ್ರ 4 ಸಂಹಿತೆಗಳನ್ನಾಗಿ ನೋಟಿಫಿಕೇಷನ್‌ಗೆ ಮುಂದಾಗಿದೆ. ಆ ಮೂಲಕ 1). ಕೈಗಾರಿಕಾ ಸಂಬಂಧಗಳ ಸಂಹಿತೆ. 2) ವೇತನ ಸಂಹಿತೆ 3) ಸಾಮಾಜಿಕ ಭದ್ರತಾ ಸಂಹಿತೆ 4) ಕೈಗಾರಿಕಾ ಸುರಕ್ಷತಾ ಸಂಹಿತೆ ಎಂಬ 4 ಸಂಹಿತೆಗಳಲ್ಲಿ ಇಡೀ ಕಾರ್ಮಿಕ ಕಾನೂನುಗಳನ್ನು ಸಂಹಿತೆಗೊಳಿಸಲು ಮುಂದಾಗಿದೆ. ಆ ಮೂಲಕ ಇದುವರೆಗೆ ಲಭ್ಯವಿದ್ದ ಹಲವಾರು ಹಕ್ಕುಗಳನ್ನು ಕಾರ್ಮಿಕರಿಂದ ಕಸಿದುಕೊಳ್ಳಲು ಮುಂದಾಗಿದೆ. ಸಂಘ ನೋಂದಾವಣೆಯನ್ನು ಕಠಿಣಗೊಳಿಸುವ, ಮುಷ್ಕರಗಳನ್ನು ಇಲ್ಲವಾಗಿಸುವ, ಮುಷ್ಕರ ನಡೆಸಿದಲ್ಲಿ ಜೈಲು ಹಾಗೂ ದಂಡದ ಶಿಕ್ಷೆ ಹೆಚ್ಚಿಸುವ, ಹೊರಗಿನವರು ಸಂಘಗಳಿಗೆ ನೇತೃತ್ವ ನೀಡುವುದನ್ನು ನಿಯಂತ್ರಿಸುವ ಅಂಶಗಳನ್ನು ಈ ಸಂಹಿತೆಗಳಲ್ಲಿ ಒಳಗೊಳಿಸಲು ಯತ್ನಿಸಲಾಗಿದೆ. ಅಂತೆಯೇ ವೇತನ ಪಾವತಿ ದಿನಾಂಕ ಇಲ್ಲವಾಗಿಸುವ,



ಗುತ್ತಿಗೆ ಕಾರ್ಮಿಕರ ವೇತನ ಮುಂತಾದ ವಿಷಯಗಳಲ್ಲಿ ಪ್ರಧಾನ ಮಾಲಿಕರ ಪಾತ್ರ ಇಲ್ಲವಾಗಿಸುವ, ಗುತ್ತಿಗೆ ಕಾರ್ಮಿಕ ಪರವಾನಿಗೆಗೆ ಕಾರ್ಮಿಕರ ಸಂಖ್ಯೆಯ ಮಿತಿಯನ್ನು ಹೆಚ್ಚಿಸುವ ಅಂಶಗಳನ್ನು ಒಳಪಡಿಸಲಾಗುತ್ತಿದೆ.

ಪ್ರತಿ ಕಾರ್ಖಾನೆಯೊಳಗಿನ, ಪ್ರತಿ ಉತ್ಪಾದನ ಲೈನ್ ನ್ನು ಪ್ರತ್ಯೇಕ ಕಾರ್ಖಾನೆ ಎಂದು ಪರಿಗಣಿಸುವ, ದಿನದ ಕೆಲಸದ ಅವಧಿ ಹೆಚ್ಚಿಸುವ, ಕಾರ್ಖಾನೆ ನಿರೀಕ್ಷಣೆಯನ್ನು ಇಲ್ಲವಾಗಿಸುವ ಪ್ರಸ್ತಾಪಗಳು ಇವೆ.

ಭವಿಷ್ಯನಿಧಿ ಕಲ್ಯಾಣ ಮಂಡಳಿಗಳ ನಿಧಿ ಮುಂತಾದ ಸಾಮಾಜಿಕ ಭದ್ರತಾ ಯೋಜನೆಗಳನ್ನೆಲ್ಲ ಒಂದು ಗೂಡಿಸಿ ರಾಷ್ಟ್ರೀಯ ಸಾಮಾಜಿಕ ಭದ್ರತಾ ಮಂಡಳಿ ರಚಿಸಿ ಅದಕ್ಕೆ ಪ್ರಧಾನಿಗಳನ್ನು ಅಧ್ಯಕ್ಷರನ್ನಾಗಿಸಿ ಅದರಲ್ಲಿ ಕಾರ್ಮಿಕ ಪ್ರತಿನಿಧಿಗಳ ಸಂಖ್ಯೆ ಕಡಿತಗೊಳಿಸುವ ಯತ್ನ ನಡೆದಿದೆ.

ಅದೇ ವೇಳೆ ಯೋಜನಾ ಆಯೋಗವನ್ನು ರದ್ದುಪಡಿಸಿ ನೀತಿ ಆಯೋಗ ರಚಿಸಿರುವ ಕೇಂದ್ರ ಸರ್ಕಾರವು, ಅದರ ಶಿಫಾರಸ್ಸಿನಂತೆ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣಕ್ಕೆ ಮುಂದಾಗಿದೆ. 1.25 ಲಕ್ಷ ಕೋಟಿ ರೂಗಳ ಆಸ್ತಿ ಹೊಂದಿರುವ BEML ಕೈಗಾರಿಕೆಯನ್ನು 125 ಕೋಟಿ ರೂ.ಗಳಿಗೆ ಮಾರಲು ಹೊರಟಿದೆ.

ರಾಜ್ಯದ ಹೆಮ್ಮೆಯ ಸಂಕೇತವಾಗಿದ್ದ SBM ಅನ್ನು SBI ನಲ್ಲಿ ವಿಲೀನಗೊಳಿಸಿ ಅದನ್ನು ಇಲ್ಲದಾಗಿಸಿದೆ. ಲಾಭದಾಯಕ HAL ಅನ್ನು ಖಾಸಗೀಕರಣಗೊಳಿಸಲು, AIR INDIA, BSNL ಮುಂತಾದ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸಲು ಮುಂದಾಗಿದೆ.

ಜೊತೆಗಿದ್ದೇವೆ, ವಿಶ್ವಾಸವಿದೆ, ಅಭಿವೃದ್ಧಿಯೂ ಆಗುತ್ತಿದೆ. ಎಂಬ ಘೋಷವಾಕ್ಯದೊಂದಿಗೆ ತನ್ನ ಮೂರು ವರ್ಷಗಳ ಆಡಳಿತವನ್ನು ಆಚರಿಸುತ್ತಿರುವ ಕೇಂದ್ರ ಸರ್ಕಾರವು ಅಂಗನವಾಡಿ ಹೋರಾಟದ ಸಮಯದಲ್ಲಿ ತಾನು ICDS ಯೋಜನೆಗೆ ಹಣ ಕೊಡುವುದಿಲ್ಲ ರಾಜ್ಯ ಸರ್ಕಾರಗಳು ಕೊಡಬಹುದು ಎಂದಿದೆ. ರೈತರ ಸಾಲ ಮನ್ನಾಕ್ಕೆ ಇಲ್ಲಾ ಎಂದಿದೆ. 18,000/– ರೂ ಕನಿಷ್ಠ ವೇತನ ನಿಗದಿಗೆ ಮುಂದಾಗಿಲ್ಲ. ಗೃಹ ಬಳಕೆ LPG ಸಬ್ಸಿಡಿ ಕಡಿತಕ್ಕೆ ಮುಂದಾಗಿದೆ. ಪಡಿತರ ವ್ಯವಸ್ಥೆಯ ಬದಲು ನೇರ ನಗದು ವರ್ಗಾವಣೆ ಮಾಡುವ ಮಾತನಾಡುತ್ತಿದೆ. ಅಂದರೆ ಈ ದೇಶ ದುಡಿಯುವ ಜನತೆಯ ಜೊತೆಯಲ್ಲಿ ಇಲ್ಲ, ಅವರ ವಿಶ್ವಾಸವು ಇಲ್ಲ ಅವರ ಅಭಿವೃದ್ಧಿಯೂ ಆಗುತ್ತಿಲ್ಲ. ಬದಲಾಗಿ ಈ ಸರ್ಕಾರ ಅದಾನಿ, ಅಂಬಾನಿ ಮುಂತಾದ ಗುತ್ತೇದಾರಿ ಬಂಡವಾಳಗಾರರು, ಬಹುರಾಷ್ಟ್ರೀಯ ಬಂಡವಾಳಗಾರರು, ಅಂತರಾಷ್ಟ್ರೀಯ ಹಣಕಾಸು ಬಂಡವಾಳಗಾರರ ಜೊತೆಯಲ್ಲಿದೆ. ಅವರ ವಿಶ್ವಾಸವೂ ಇದೆ. ಅವರ ಅಭಿವೃದ್ಧಿಯೂ ಆಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಸಿಐಟಿಯು ರಾಜ್ಯ ಸಮಿತಿಯು ಸ್ವಾತಂತ್ರ್ಯೋತ್ಸವ 70ರ ಅಂಗವಾಗಿ, ದುಡಿಯುವ ಜನರ ಹಕ್ಕುಗಳ ಸಂರಕ್ಷಣೆಗಾಗಿ ಕರ್ನಾಟಕವು ಸಮೃದ್ಧವಾಗಿ, ಸಮಗ್ರವಾಗಿ ಹಾಗೂ ಸೌಹಾರ್ದಯುತವಾಗಿರಬೇಕೆಂಬ ಘೋಷಣೆಯೊಂದಿಗೆ 2017ರ ಜುಲೈ29 ರಿಂದ ಆಗಸ್ಟ್ 13 ರವರೆಗೆ ಜಾಗೃತಿ ಜಾಥಾ ಹಮ್ಮಿಕೊಂಡಿದೆ.

1938 ಏಪ್ರಿಲ್ 23ರಂದು ಕರ್ನಾಟಕದ ಜಾಲಿಯಾನ್‌ವಾಲಾ ಬಾಗ್ ಎಂದೇ ಖ್ಯಾತಿ ಪಡೆದಿರುವ ವಿದುರಾಶ್ವಥದ ಹುತಾತ್ಮ ಸ್ಥಳ ವೀರ ಸೌಧದಿಂದ ಪ್ರಾರಂಭವಾದ ಜಾಥಾ, ರಾಜ್ಯ ಕಾರ್ಮಿಕ ಚಳುವಳಿಗೆ ನಾಂದಿ ಹಾಡಿ KGF ಮೂಲಕ ಸ್ವತಂತ್ರ ಹೋರಾಟದ ವೇಳೆ ಮಹಾತ್ಮ ಗಾಂಧಿ ಸಭೆ ನಡೆಸಿದ್ದ ಬೆಂಗಳೂರಿನ ಬನ್ನಪ್ಪ ಪಾರ್ಕ್ ಹುತಾತ್ಮ ಚೌಕದ ಮೂಲಕ, ಮಂಡ್ಯಾದ ಸತ್ಯಾಗ್ರಹ ಸೌಧದ ಮೂಲಕ ಹಾದು ರಾಜ್ಯದ ಉದ್ದಗಲ ಎಲ್ಲಾ ಜಿಲ್ಲೆಗಳಿಗೂ ಸಂಚರಿಸಿ, ಕುಂದಾಪುರದಲ್ಲಿ ಆಗಸ್ಟ್ 13 ರಂದು ಸಮಾರೋಪಗೊಳ್ಳಲಿದೆ.

ಅದರ ಬೆನ್ನಲ್ಲೇ ಆಗಸ್ಟ್ 14 ರಂದು ರಾಜ್ಯಾದ್ಯಾಂತ ಎಲ್ಲಾ ತಾಲೂಕುಗಳಲ್ಲಿ ಸಂಜೆ 6 ರಿಂದ ಮುಂಜಾನೆ 6ರವರೆಗೆ "ಸ್ವಾತಂತ್ರ್ಯೋತ್ಸವ–ಸತ್ಯಾಗ್ರಹ" ವನ್ನು ನಡೆಸಿ ಸೆಪ್ಟಂಬರ್ ಮೊದಲ ವಾರದಲ್ಲಿ ಸ್ಥಳೀಯ ಜಾಥಾಗಳ ಮೂಲಕ ಸೆಪ್ಟಂಬರ್ 14 ರಂದು ಲಕ್ಷಾಂತರ ಕಾರ್ಮಿಕರ "ನಮ್ಮ ನಡೆ ಬೆಂಗಳೂರಿನೆಡೆ ಮಹಾನಡೆ" ಯೊಂದಿಗೆ ಮಾರ್ಧನಿಸಲಿದೆ.

ಸಮೃದ್ಧ ಕರ್ನಾಟಕ

ರಾಜ್ಯದಲ್ಲಿನ ತಲಾ ವಾರ್ಷಿಕ ಆದಾಯ ರೂ. 1,45,791/– ಅಂದರೆ ತಲಾ ಮಾಸಿಕ ಆದಾಯ ರೂ.12,149/– ಕನಿಷ್ಠ ವೇತನ ನಿಗಧಿಗೆ ಗಂಡ, ಹೆಂಡತಿ, ಮತ್ತು 2 ಮಕ್ಕಳನ್ನು ಒಳಗೊಂಡ ಒಂದು ಕುಟುಂಬವನ್ನು ಒಟ್ಟಾರೆಯಾಗಿ 3 ಯುನಿಟ್ಟಾಗಿ ಪರಿಗಣಿಸಲಾಗುತ್ತದೆ. ಅಂದರೆ ಒಂದು ಕುಟುಂಬದ ನಾಲ್ವರಿಗೆ ತಲಾ ಮಾಸಿಕ ಆದಾಯವನ್ನು ರಾಜ್ಯ ವಾರ್ಷಿಕ ತಲಾ ಆದಾಯ ಆಧಾರದಲ್ಲಿ ಲೆಕ್ಕ ಹಾಕಿದಲ್ಲಿ ಒಂದು ಕುಟುಂಬದ ಮಾಸಿಕ ಆದಾಯವು ರೂ 48,597/– ಆಗುತ್ತದೆ. ಆದರೆ ರಾಜ್ಯ ಸರ್ಕಾರವು ಕನಿಷ್ಠ ವೇತನವನ್ನು ಮಾಸಿಕ ರೂ 10,400/– ರಿಂದ ರೂ 14,000/– ಕ್ಕೆ ನಿಗಧಿಗೊಳಿಸಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳ ಬೇಡಿಕೆಯಾದ ಮಾಸಿಕ ರೂ 18,000/– ಕನಿಷ್ಠ ವೇತನ ನಿಗಧಿಗೆ ತಯಾರಿಲ್ಲ.

ಕನಿಷ್ಠ ವೇತನವನ್ನು ಹೆಚ್ಚಾಗಿ ನಿಗಧಿಮಾಡಿದಲ್ಲಿ ಕಾರ್ಖಾನೆಗಳು ಮುಚ್ಚಿ ಹೋಗಲಿವೆ. ಇಲ್ಲ ವಲಸೆ ಹೋಗಲಿವೆ ಎಂಬ ವಾದ. ಅದೇ ವೇಳೆ ರಾಜ್ಯದ ವಾರ್ಷಿಕ ಅಭಿವೃದ್ಧಿ ದರ ಶೇ.7.9ರಷ್ಟಿದೆ. ರಾಷ್ಟ್ರದಲ್ಲಿ ವಿದೇಶಿ ನೇರ ಬಂಡವಾಳವನ್ನು ಆಕರ್ಷಿಸುವುದರಲ್ಲಿ 3ನೇ ಸ್ಥಾನದಲ್ಲಿದೆ, ಎಂದೆಲ್ಲಾ ಬಣ್ಣಿಸಲಾಗುತ್ತಿದೆ. ಅದರ ಜೊತೆಯಲ್ಲಿಯೇ ರಾಜದಲ್ಲಿನ ಕಾರ್ಖಾನೆಗಳಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿನ ಒಟ್ಟು ಮೌಲ್ಯ ವರ್ಧನೆ ರೂ 2,34,204/– ಅದರಲ್ಲಿನ ವೇತನದ ಪಾಲು ರೂ 38,604/– ಅಂದರೆ 16.45 ಶೇಕಡವಾದರೆ, ನಿವ್ವಳ ಲಾಭವು ರೂ 1,41,463/– ಅಂದರೆ 60.40 ಶೇಕಡವಾಗಿದೆ.

ಸಮಗ್ರ ಕರ್ನಾಟಕ

ಹರಿದು ಹಂಚಿ ಹೋಗಿದ್ದ ಕರ್ನಾಟಕ ಭೂ ಪ್ರದೇಶ ದೀರ್ಘ ಹೋರಾಟದ ಪರಿಣಾಮವಾಗಿ ಒಂದುಗೂಡಿ ರಾಜ್ಯವಾಗಿ ರೂಪಿತವಾಗಿದೆ. ಆದರೆ ಇಲ್ಲಿನ ಸರ್ಕಾರಗಳ ನೀತಿಗಳ ಪರಿಣಾಮವಾಗಿ ಸಮಗ್ರ ಭೂ ಸುಧಾರಣೆಯ ಕೊರತೆಯಿಂದಾಗಿ, ಬಂಡವಾಳಸಾಹಿ ಅಭಿವೃದ್ಧಿ ಪಥದ ಫಲವಾಗಿ ರಾಜ್ಯದ ಉತ್ತರ ಭಾಗ ಹಾಗೂ ಇತರೆ ಭಾಗಗಳು ದಕ್ಷಿಣ ಭಾಗದಷ್ಟು ಅಭಿವೃದ್ಧಿ ಹೊಂದದೆ ಹಿಂದುಳಿದಿದೆ. ಇದನ್ನೇ ಬಂಡವಾಳವಾಗಿಸಿಕೊಂಡು, ವಿಚ್ಛಿದ್ರಕಾರಿ ಶಕ್ತಿಗಳು ಪ್ರತ್ಯೇಕ ರಾಜ್ಯದ ಕೂಗುಗಳನ್ನು ಆಗಿಂದಾಗ್ಗೆ ಎತ್ತುತ್ತಿವೆ. ಇಂತಹ ಸಂದರ್ಭದಲ್ಲಿ ಕೆಲವು ಬಹುರಾಷ್ಟ್ರೀಯ ಕಂಪನಿಗಳಲ್ಲಿನ ಕಾರ್ಮಿಕ ಸಂಘಗಳ ಅವಿರತ ಹೋರಾಟಗಳ ಪರಿಣಾಮವಾಗಿ ಅವರ ವೇತನ ಹೆಚ್ಚಳವಾಗಿ, ಕಂಪನಿಗಳ ತಲಾ ಕಾರ್ಮಿಕ ವೆಚ್ಚ ಕಡಿತ ಮಾಡುವ ನಿಟ್ಟಿನಲ್ಲಿ ತಮ್ಮ ಕಾರ್ಖಾನೆಗಳಲ್ಲಿನ ಉತ್ಪಾದನೆಯನ್ನು ವಿಸ್ತೃತ ಉತ್ಪಾದನ ಸ್ಥಳಗಳನ್ನು ಇತರೆ ಪ್ರದೇಶಗಳಲ್ಲಿ ತೆರೆದು, ಕನಿಷ್ಟ ವೇತನ ನೀಡಿ ದುಡಿಸಿಕೊಳ್ಳುವ ಮೂಲಕ ತಮ್ಮ ಉತ್ಪಾದನ ವೆಚ್ಚ ಕಡಿತ ಮಾಡುತ್ತಾ, ಹಂತ–ಹಂತವಾಗಿ ಹೆಚ್ಚು ವೇತನ ಪಡೆಯುವ ಕಾರ್ಮಿಕರನ್ನು ಒಳಗೊಂಡ ಘಟಕಗಳನ್ನು ಮುಚ್ಚಿ ಕಾರ್ಮಿಕರನ್ನು ಸ್ವಯಂ ನಿವೃತ್ತಿ ತೆಗೆದುಕೊಳ್ಳುವಂತೆ ಒತ್ತಾಯಿಸುತ್ತಿವೆ. ಈ ಹಿನ್ನಲೆಯಲ್ಲಿ ಬಂಡವಾಳಗಾರರ ಈ ಕ್ರಮಗಳನ್ನು ಪ್ರತಿರೋಧಿಸಿದರೆ, ಅದನ್ನೇ ಉತ್ತರ ಕರ್ನಾಟಕದ ವಿರೋಧಿ ಎಂದು ಭಾವಿಸುವ ಸಾಧ್ಯತೆಯ ಹಿನ್ನಲೆಯಲ್ಲಿ ಸಮಗ್ರ ಕರ್ನಾಟಕ ಒಂದಾಗಿ ಒಟ್ಟಾಗಿರುವ ಅಗತ್ಯ ಅನಿವಾರ್ಯವಾಗಿದೆ.

ಸೌಹಾರ್ದ ಕರ್ನಾಟಕ

ದುಡಿಯುವ ಜನರ ಹಕ್ಕುಗಳಿಗಾಗಿ, ಸಂಕಷ್ಟಕ್ಕೀಡಾಗಿರುವ ವಾರ್ಷಿಕ ಪರಿಸ್ಥಿತಿಯಲ್ಲಿ ರೈತರ– ಕೂಲಿಕಾರರ ಹಿತರಕ್ಷಣೆಗೆ ಜನತೆಯ ಹೋರಾಟವು ಹೆಚ್ಚುತ್ತಿರುವ ತೀವ್ರವಾಗುತ್ತಿರುವ ಸಂದರ್ಭದಲ್ಲಿ ಜನತೆಯ ಒಗ್ಗಟ್ಟನ್ನು ಮುರಿಯಲು ಹಲವಾರು ಕಡೆ ಕೋಮುವಾದಿ, ಮೂಲಭೂತವಾದಿ ಶಕ್ತಿಗಳು ಜನತೆಯನ್ನು ವಿಭಜಿಸಲು ಯತ್ನಿಸಿವೆ.

ಇದು ಬಸವಣ್ಣ, ಕನಕದಾಸರು, ಕುವೆಂಪು ಆದಿಯಾಗಿ ಹಲವು ಚಿಂತಕರು, ಸುಧಾರಕರು, ಪ್ರತಿಪಾದಿಸಿದ ಸೌಹಾರ್ದ ಪರಂಪರೆಗೆ ಅಡ್ಡಿಯಾಗಿ ತೊಡಕಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕವನ್ನು ಸೌಹಾರ್ದ ಕರ್ನಾಟಕವನ್ನಾಗಿ ಉಳಿಸಬೇಕಿದೆ.

ಈ ಎಲ್ಲಾ ಕಾರಣಗಳಿಂದಾಗಿ "ದುಡಿಯುವ ಜನರ ಹಕ್ಕುಗಳ ಸಂರಕ್ಷಣೆಗಾಗಿ ಸಮೃದ್ಧ ಸಮಗ್ರ ಸೌಹಾರ್ದ ಕರ್ನಾಟಕ" ಘೋಷವಾಕ್ಯವನ್ನು ಸಿಐಟಿಯು ಜಾಗೃತಿ ಜಾಥಾ ಹೊಂದಿದೆ. ಈ ನಿಟ್ಟಿನಲ್ಲಿ ಕಾರ್ಮಿಕ ಹಕ್ಕುಗಳನ್ನು ಇಲ್ಲದಾಗಿಸಲು ಕೇಂದ್ರ ಸರ್ಕಾರ ಮುಂದಾಗಿರುವಾಗ ಕಾರ್ಮಿಕ ಹಕ್ಕುಗಳನ್ನು ಬಲ ಪಡಿಸಲು ಕಾರ್ಮಿಕ ಹಕ್ಕುಗಳನ್ನು ಉಳಿಸಬೇಕೆಂಬ ಘೋಷಣೆಯನ್ನು ಸಿಐಟಿಯು ಜಾಥಾದಲ್ಲಿ ಒಳಗೊಳ್ಳಲಾಗಿದೆ.




ಪ್ರೊ. ಪಿ.ಎಂ.ಭಾರ್ಗವ : ಕೋಮುವಾದಿ ಅಸಹಿಷ್ಣುತೆಯಿಂದ ರೇಗಿ ಪದ್ಮಭೂಷಣ ಪ್ರಶಸ್ತಿಯನ್ನು ಹಿಂದಿರುಗಿಸಿದ, ಜೀವರಾಸಾಯನಿಕ ಪಾಟ ಮಾಡಿ ಆರೆಸ್ಸೆಸ್ 'ಗುರೂಜಿ'ಯನ್ನು ರೇಗಿಸಿದ್ದ ವಿಜ್ಞಾನಿ

ಕೆಲವೇ ದಿನಗಳ ಅಂತರದಲ್ಲಿ ಭಾರತ ಮೂವರು ಹಿರಿಯ ವಿಜ್ಞಾನಿಗಳನ್ನು ಕಳಕೊಂಡಿದೆ. ಆಗಸ್ಟ್ 1 ರಂದು ಹೈದರಾಬಾದಿನಲ್ಲಿ ನಿಧನರಾದ ಪ್ರೊ. ಪಿ.ಎಂ.ಭಾರ್ಗವ ಸ್ವತಂತ್ರ ಭಾರತದ ಆರಂಭದ ವರ್ಷಗಳಲ್ಲಿ ದೇಶದ ವೈಜ್ಞಾನಿಕ ಸಾರ್ವಭೌಮತೆಯ ರಕ್ಷಣೆಯಲ್ಲಿ ಸಕ್ರಿಯ ಪಾತ್ರ ವಹಿಸಿದವರಲ್ಲಿ ಪ್ರಮುಖರು. ಅವರಿಗೆ 89 ವರ್ಷವಾಗಿತ್ತು. ದೇಶದ ಒಂದು ಪ್ರಮುಖ ಜೀವಶಾಸ್ತ್ರ ಸಂಶೋಧನಾ ಸಂಸ್ಥೆ ಹೈದರಾಬಾದಿನಲ್ಲಿರುವ ಸಿಸಿಎಂಬಿ(ಸೆಂಟರ್ ಫಾರ್ ಸೆಲ್ಯುಲರ್ ಅಂಡ್ ಮೊಲೆಕ್ಯುಲರ್ ಬಯಾಲಜಿ)ಯ ಸ್ಥಾಪಕ–ನಿರ್ದೇಶಕರಾಗಿದ್ದ **ಇವರು ಕೊನೆಯ ವರೆಗೂ ವಿಜ್ಞಾನ ಮತ್ತು ನಾಗರಿಕರಲ್ಲಿ ವೈಜ್ಞಾನಿಕ ಮನೋಭಾವಕ್ಕೆ ಉತ್ತೇಜನೆ ನೀಡಲು ಶ್ರಮಿಸಿದವರು. ಪ್ರೊ. ಎಂ. ಎಂ. ಕಲಬುರ್ಗಿ ಹತ್ಯೆ ಮತ್ತು ದಾದ್ರಿಯಲ್ಲಿ ಮಹಮ್ಮದ್ ಅಖ್ಲಾಕ್‌ರನ್ನು ಹೊಡೆದು ಸಾಯಿಸಿದ್ದನ್ನು ಪ್ರತಿಭಟಿಸಿ ತಮ್ಮ ಪದ್ಮಭೂಷಣ ಪ್ರಶಸ್ತಿಯನ್ನು ಹಿಂದಿರುಗಿಸಿದ ಮೊದಲ ವಿಜ್ಞಾನಿ ಕೂಡ.**

ಇವರು, ಇಂದಿಗೆ ಸರಿಯಾಗಿ 50ವರ್ಷಗಳ ಹಿಂದೆ–ಯೂ ಆರೆಸ್ಸೆಸ್ ಗುರೂಜಿ ಗೋಲ್ವಾಲ್ಕರ್ ಸಿಟ್ಟಿನಿಂದ ಕೂಗಾಡುವಂತೆ ಮಾಡಿದ್ದರಂತೆ. ಜೀವಶಾಸ್ತ್ರಜ್ಞ ಚಂದನ ಚಕ್ರವರ್ತಿ ಸಿದ್ಧಪಡಿಸುತ್ತಿರುವ ಇವರ ಜೀವನ ಚರಿತ್ರೆಯಲ್ಲಿ ಈ ಘಟನೆಯನ್ನು ನಿರೂಪಿಸಲಾಗಿದೆ (ವೆಬ್‌ಪತ್ರಿಕೆ ದಿವೈರ್, ಆಗಸ್ಟ್ 2)

ಅದು ಆರೆಸ್ಸೆಸ್ ಸಂಪೂರ್ಣ ಗೋಹತ್ಯೆ ನಿಷೇಧ ಆಗ್ರಹಿಸಿ ನಡೆದ ದೊಡ್ಡ ಚಳುವಳಿಯಲ್ಲಿ ಸಾಧುಗಳ ಗುಂಪೊಂದು ಸಂಸದ್ ಭವನದೊಳಕ್ಕೆ ನುಗ್ಗಲು ಪ್ರಯತ್ನಿಸಿ ದೊಡ್ಡ ಸುದ್ದಿ ಮಾಡಿದ್ದ ಸಂದರ್ಭ. "ವೈಜ್ಞಾನಿಕ ಮನೋಭಾವ ಉತ್ತೇಜನೆಯ ಸಮಾಜ" ಎಂಬ ಸಂಘಟನೆ ಹೈದರಾಬಾದಿನ ಪ್ರಾದೇಶಿಕ ಸಂಶೋಧನಾ ಪ್ರಯೋಗಾಲಯದಲ್ಲಿ ಗೋಹತ್ಯೆ ನಿಷೇಧದ ಪ್ರಸ್ತುತೆಯ ಕುರಿತು ಒಂದು ಸಾರ್ವಜನಿಕ ಚರ್ಚೆಯನ್ನು ಏರ್ಪಡಿಸಿತು. ಪ್ರೊ. ಭಾರ್ಗವ ಅದರ ಅಧ್ಯಕ್ಷತೆ ವಹಿಸಿದ್ದರು. ಅದರಲ್ಲಿ ಮಾತನಾಡುತ್ತ ಪ್ರಸಿದ್ಧ ವೈದ್ಯರಾಗಿದ್ದ ಪಿ. ರಾಮಚಂದರ್ "ನಾವು ದನ ತಿನ್ನದಿದ್ದರೆ ದನ ನಮ್ಮನ್ನು ತಿನ್ನುತ್ತದೆ" ಎಂದು ಹೇಳಿದ್ದು ದೊಡ್ಡ ಸುದ್ದಿಯಾಯ್ತು. ಭಾರ್ಗವ ಅವರಿಗೆ ಬೆದರಿಕೆಗಳು ಬರಲಾರಂಬಿಸಿದವು,

ಸರಕಾರೀ ಪ್ರಯೋಗಾಲಯದಲ್ಲಿ ಇಂತಹ ಚರ್ಚೆ ನಡೆಸಿದರೆಂದು ಟೀಕೆಗಳೂ ಬಂದವು. ಸರಕಾರ ನಿವೃತ್ತ ಸುಪ್ರಿಂ ಕೋರ್ಟ್ ಮುಖ್ಯ ನ್ಯಾಯಾಧೀಶ ಜಸ್ಟಿಸ್ ಸರ್ಕಾರ್ ಅಧ್ಯಕ್ಷತೆಯಲ್ಲಿ ಒಂದು ಉನ್ನತ ತನಿಖೆಗೆ ಸಮಿತಿ ನೇಮಿಸಿತು. ಅದರಲ್ಲಿ ಆರೆಸ್ಸೆಸ್ 'ಗುರೂಜಿ' ಗೋಲ್ವಾಲ್ಕರ್ ಮತ್ತು ಗೋವಧೆ ನಿಷೇಧಕ್ಕಾಗಿ ಉಪವಾಸ ಕುಳಿತಿದ್ದ ಪುರಿಯ ಶಂಕರಾಚಾರ್ಯ ಕೂಡ ಇದ್ದರು. ಭಾರತದ 'ಹಾಲು ಮನುಷ್ಯ' ಎಂದು ಖ್ಯಾತರಾದ ಡಾ.ವರ್ಗಿಸ್ ಕುರಿಯನ್ ಕೂಡ



ಸಮಿತಿಯ ಸದಸ್ಯರಾಗಿದ್ದರು. ವಿಚಾರಣೆಗೆ ಪ್ರೊ. ಭಾರ್ಗವ. ಅವರನ್ನು ಕರೆಸಲಾಗಿತ್ತು.

ವಿಚಾರಣೆಗೆ ಹಾಜರಾಗಲು ಬರುತ್ತಿದ್ದಂತೆ, ಹೊರಗೆ ಕಾಯುತ್ತಿದ್ದವನೊಬ್ಬ ಭಾರ್ಗವ ಎಂದರೆ ಬ್ರಾಹ್ಮಣರಿರಬೇಕು, ಮಾಂಸ ತಿನ್ನುತ್ತೀರಾ, ತಿಂದರೂ ಗೋಮಾಂಸ ತಿನ್ನಲಿಕ್ಕಿಲ್ಲ ಅಲ್ಲವೇ ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿದ. ಪ್ರೊ. ಭಾರ್ಗವ ಆತನಿಗೆ ಆಹಾರದ ಜೀವರಾಸಾಯನಿಕ ಪಾಟವನ್ನೇ ಮಾಡಿದರಂತೆ. ನಾವು ಆಹಾರ ಸೇವಿಸುವುದು ಎಂದರೆ ಪ್ರೊಟೀನ್‌ಗಳನ್ನು ಪಡೆಯುವುದು, ಅವನ್ನು ನಮ್ಮ ಪಚನಾಂಗಗಳು ಒಡೆದು ಅಮಿನೊ ಆಸಿಡ್‌ಗಳನ್ನಾಗಿ ಮಾಡುತ್ತವೆ, ಇವು ರಕ್ತಗತವಾಗಿ ವಿವಿಧ ಅಂಗಗಳಿಗೆ ಹೋಗುತ್ತವೆ, ಮತ್ತೆ ಪ್ರೊಟೀನ್‌ಗಳಾಗಿ ಪರಿವರ್ತನೆಗೊಳ್ಳುತ್ತವೆ. ಆ ವ್ಯಕ್ತಿ ನಂತರ ಇನ್ನೊಂದು ಪ್ರಶ್ನೆ ಕೇಳಿದ– ಹಾಲು ಹೇಗೆ ಆಗುತ್ತದೆ? ಮಾಂಸ ಆದಂತೆಯೇ ಎಂದರು ಭಾರ್ಗವ. ಹಾಗಿದ್ದರೆ ನೀವು ಮಾಂಸದ ಬದಲು ಹಾಲು ಏಕೆ ಸೇವಿಸಬಾರದು ಎಂದು ಕೇಳಿದಾಗ ಹಾಲು ಮತ್ತು ಮಾಂಸ ಒಂದೇ ರೀತಿಯಲ್ಲಿ ಅಗುವುದರಿಂದ ಹಾಲಿನ ಬದಲು ಮಾಂಸ ಏಕೆ ತಿನ್ನಬಾರದು ಎಂದೂ ಕೇಳಬಹುದಲ್ಲವೇ ಎಂದು ಭಾರ್ಗವ ಮರು ಪ್ರಶ್ನೆ ಹಾಕಿದರಂತೆ.

ಪ್ರೊ. ಭಾರ್ಗವ ಒಳಗೆ ವಿಚಾರಣೆಗೆ ಹೋದಾಗ ಅವರಿಗೆ ಆಶ್ಚರ್ಯ ಕಾದಿತ್ತಂತೆ. ಏಕೆಂದರೆ ಆರೆಸ್ಸೆಸ್ ಗುರೂಜಿ ಹೊರಗಿದ್ದ ಆ ವ್ಯಕ್ತಿ ಕೇಳಿದ ಪ್ರಶ್ನೆಗಳನ್ನೇ ಕೇಳಿದರು. ಮಾಂಸದ ಬದಲು ಹಾಲು ಏಕೆ ಸೇವಿಸಬಾರದು ಎಂಬ ಪ್ರಶ್ನೆಯನ್ನೂ ಕೇಳಿದರು. ಅದಕ್ಕೆ ಉತ್ತರವಾಗಿ ಭಾರ್ಗವ ಅವರಿಗೂ ಆ ವ್ಯಕ್ತಿಗೆ ಕೇಳಿದಂತೆ ಪ್ರತಿಯಾಗಿ ಪ್ರಶ್ನೆ ಕೇಳಿದಾಗ 'ಗುರೂಜಿ' ರೇಗಾಡಿದರಂತೆ. ಹೀಗೆ ಕೂಗಾಡಿದರೆ ನಮಗೇ ತೊಂದರೆ ಎಂದು ಶಂಕರಾಚಾರ್ಯರು ಅವರನ್ನು ಸುಮ್ಮನಾಗಿಸ ಬೇಕಾಯಿತಂತೆ.

ಈ ನಿರೂಪಣೆಯ ಮುಂದಿನ ಭಾಗ ಇನ್ನೂ ಸ್ವಾರಸ್ಯಕರವಾಗಿದೆ. ಮೂರು ದಶಕಗಳ ನಂತರ ಪ್ರೊ. ಭಾರ್ಗವ ಗುಜರಾತಿನ ಆಣಂದದಲ್ಲಿ ಡಾ.ವರ್ಗಿಸ್ ಕುರಿಯನ್ ಅವರನ್ನು ಭೇಟಿ ಮಾಡಿದಾಗ ಈ ಘಟನೆಯನ್ನು ನೆನಪಿಸಿದರಂತೆ. ಆಗ ಕುರಿಯನ್, ಗೋರಕ್ಷಣೆ ಕೇವಲ ಒಂದು ರಾಜಕೀಯ ಚಳುವಳಿ, ವಾಸ್ತವವಾಗಿ ಆಗಿನ (ಕಾಂಗ್ರೆಸ್) ಸರಕಾರವನ್ನು ಮುಜುಗರಕ್ಕೊಳಪಡಿಲೆಂದೇ ಮಾಡಿದ್ದು ಎಂದು 'ಗುರೂಜಿ' ತಮ್ಮ ಜತೆ ಮಾತಾಡುವಾಗ ಒಪ್ಪಿಕೊಂಡಿದ್ದರು ಎಂದು ಹೇಳಿದರಂತೆ !

"ನರಕಕ್ಕೆ ಸ್ವಾಗತ" ಎಂದ ಭೂತಗಳ ಮೆರವಣಿಗೆ...... ಪುಟ 16 ರಿಂದ

ಹೊರಬೇಕು. ಮಾತ್ರವಲ್ಲದೆ ಜಗತ್ತಿನಾದ್ಯಂತ ನಿರಾಶ್ರಿತರ ಸೃಷ್ಟಿಗೆ, ಯುದ್ಧ ಉನ್ಮಾದಗಳ ವಾತಾವರಣಕ್ಕೆ ಈ ನೀತಿ ರೂಪಕರೇ ಜವಾಬ್ದಾರರು, ಜಿ–20 ರ ಸಭೆಗಳಲ್ಲಿ ಕುಳಿತು ಒಬ್ಬರಿಗೊಬ್ಬರು ಚಾಟ್ ಮಾಡಿಕೊಂಡು ಇಂತಹ ತೀರ್ಮಾನಕ್ಕೆ ಬರುತ್ತಾರೆ. ಎಂಬ ಗಂಭೀರವಾದ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇದಲ್ಲದೇ ಜಾಗತಿಕ ತಾಪಮಾನ ಏರಿಕೆಯ ಬಗ್ಗೆ, ನೈಸರ್ಗಿಕ ಸಂಪನ್ಮೂಲಗಳ ಲೂಟಿಯ ಬಗ್ಗೆ, ಮತ್ತು ಮಾನವ ನಾಗರಿಕತೆಯ ಭವಿಷ್ಯದ ಬಗ್ಗೆಯೂ ಅಪಾರ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ತಮ್ಮ ಕೋಪ ಅಸಮಾಧಾನವನ್ನು ತೆರೆದಿಟ್ಟ ಇವರುಗಳು "ನರಕಕ್ಕೆ ಸ್ವಾಗತ" (Wel come to Hell) ಎಂಬ ದೊಡ್ಡ ನಾಮಫಲಕದೊಂದಿಗೆ ಭೂತಗಳ (ಝೋಂಭಿ-Zombie) ಮೆರವಣಿಗೆಯ ಮೂಲಕ ಜಿ–20 ರ ಶೃಂಗ ಸಭೆಗೆ "ಶುಭ" ಕೋರಿದ್ದಾರೆ.

ಶೃಂಗ ಸಭೆಯ ತೀರ್ಮಾನಗಳು

ಶೃಂಗ ಸಭೆಯಲ್ಲಿ ಚಾಟ್ ಮಾಡಿ, ಹೊರಡಿಸಿದ ಅಂತಿಮ ಹೇಳಿಕೆ ಹಾಗೂ ಅದರ ನಾಯಕರ ಹೇಳಿಕೆಗಳು ಪ್ರತಿಭಟನೆಕಾರರ ಅಸಮಾಧಾನವನ್ನು ಮತ್ತಷ್ಟು ಹೆಚ್ಚಿಸಿದೆ. ನವ–ಉದಾರವಾದದ ಅನುಷ್ಠಾನದಿಂದ ದೇಶಗಳು ಅಭಿವೃದ್ಧಿ ಪಥದತ್ತ ದಾಪುಗಾಲು ಹಾಕುತ್ತಿದೆ. ಇದು ನಮ್ಮೆಲ್ಲರಿಗೂ ಸಮಾಧಾನ ತಂದಿದೆ. ಮತ್ತಷ್ಟು ಬೆಳವಣಿಗೆಯನ್ನು ತ್ವರಿತಗೊಳಿಸಲು ನವಉದಾರವಾದವನ್ನು ಮುಂದುವರಿಸಬೇಕು, ಎಂಬ ಹೇಳಿಕೆಗಳು, ಬಂಡವಾಳಶಾಹಿಯ ದಿವಾಳಿಕೋರತನವನ್ನು ಮರೆಮಾಚುತ್ತಿದೆ. ದೇಶಗಳು 'ನೇರ ವಿದೇಶಿ ಹೂಡಿಕೆ' (ಎಫ್.ಡಿ.ಐ.) ಗೆ ನಿಯಂತ್ರಣಗಳನ್ನು ಮತ್ತಷ್ಟು ಸಡಿಲಗೊಳಿಸಬೇಕು. ಸರಕಾರಗಳು ಮತ್ತು ಸಂಬಂದಿತ ಘಟಕಗಳಿಂದ ಮಾರುಕಟ್ಟೆಯನ್ನು ವಿರೂಪಗೊಳಿಸುವ ಸಬ್ಸಿಡಿಗಳನ್ನು ಮತ್ತು ಇತರೆ ರೀತಿಯ ಸಹಾಯಧನವನ್ನು ತೆಗೆದು ಹಾಕುವಂತಹ ಅಂಶಗಳನ್ನು ತುರ್ತಾಗಿ ಅನುಷ್ಠಾನಗೊಳಿಸಬೇಕು' – ಮುಂತಾದ ತೀರ್ಮಾನಗಳು ಹೊರಬಿದ್ದಿವೆ. ಈಗಾಗಲೇ ಜಾಗತಿಕ ದಕ್ಷಿಣದ ಅನೇಕ ದೇಶಗಳಲ್ಲಿ ಕೃಷಿ ಮತ್ತು ಉದ್ಯಮಗಳು ನಾಶ ಹೊಂದಿ ಜನರನ್ನು ನಿರಾಶ್ರಿತರನ್ನಾಗಿಸಿದೆ.

ಇವರ ನಿರ್ಧಾರಗಳಲ್ಲಿ ಮತ್ತೊಂದು ಪ್ರಮುಖವಾದ ಅಂಶವೆಂದರೆ, "ಬಂಡವಾಳವನ್ನು ಬೆಳೆಸಲು" ಡಿಜಿಟಲ್ ಅರ್ಥವ್ಯವಸ್ಥೆಯ ಅಭಿವೃದ್ಧಿಗೆ ಅನುಕೂಲಕರ ಸ್ಥಿತಿ ರೂಪಿಸುವುದು. ಈ ನಿಟ್ಟಿನಲ್ಲಿ ಭಾರತ ಸರ್ಕಾರ ಡಿಜಿಟಲ್ ಆರ್ಥಿಕತೆ ಮತ್ತು ನೋಟಿನ ಅನಾಣ್ಯೀಕರಣ ಮಾಡಿದ್ದನ್ನು ನೆನಪು ಮಾಡಿಕೊಳ್ಳಬಹುದು.

11ನೇ ಡಬ್ಲ್ಯೂ.ಟಿ.ಒ. ಮಂತ್ರಿಗಳ ಸಭೆ

ವಿಶ್ವ ವಾಣಿಜ್ಯ ಸಂಸ್ಥೆ (ಡಬ್ಲ್ಯೂ.ಟಿ.ಒ) ಯ ಮಂತ್ರಿಗಳ ಸಭೆಯನ್ನು ಮುಂಬರುವ ಡಿಸೆಂಬರ್‌ನಲ್ಲಿ, ಅರ್ಜೆಂಟಿನಾದ ರಾಜಧಾನಿಯಾದ ಬ್ಯೂನಸ್–ಏರಿಸ್‌ನಲ್ಲಿ ನಡೆಸಲು ನಿಗಧಿಪಡಿಸಲಾಗಿದೆ. ಇದು ಅತ್ಯಂತ ಪ್ರಮುಖ ವಾಣಿಜ್ಯ ವಿಷಯಗಳ ಬಗ್ಗೆ ಚರ್ಚಿಸುವ ಸಭೆಯಾಗಿರುತ್ತದೆ. ಇಡೀ ವಿಶ್ವದ ಎಲ್ಲಾ ದೇಶಗಳು ಈ ಸಭೆಯ ಬಗ್ಗೆ ತಳಮಳ ಹೊಂದುತ್ತವೆ.

ದೊಡ್ಡ ಬಂಡವಾಳಗಾರರು ಹಾಗೂ ಹಣಕಾಸು ಬಂಡವಾಳವು ಸ್ಥಗಿತಗೊಂಡಿರುವ ತಮ್ಮ ಲಾಭದಾಯಕ ವ್ಯಾಪಾರದ ಒಪ್ಪಂದಗಳಾದ ಟ್ರಾನ್ಸ್ ಫೆಸಿಫಿಕ್ ಸಹಭಾಗಿತ್ವ (ಟಿಪಿಪಿ) ಮತ್ತು ಟ್ರಾನ್ಸ್ ಅಟ್ಲಾಂಟಿಕ್ ಟ್ರೇಡ್ ಮತ್ತು ಹೂಡಿಕೆ (ಟಿಟಿಐಪಿ) ಗಳನ್ನು ಜಾರಿ ಮಾಡಲು, ವಿಶ್ವ ವಾಣಿಜ್ಯ ಸಂಸ್ಥೆಯನ್ನು ಪುನಃ ಸಕ್ರಿಯಗೊಳಿಸುವ ಮೂಲಕ ವಿಶ್ವದ ಗಮನವನ್ನು ಬೇರೆಡೆಗೆ ತಿರುಗಿಸುವ ಉದ್ದೇಶ ಹೊಂದಿದ್ದಾರೆ.

ಈ ಹಿನ್ನೆಲೆಯಲ್ಲಿ, ಮಂತ್ರಿವರ್ಯರ ಈ ಸುತ್ತಿನ ಸಭೆಯಲ್ಲಿ 'ಭವಿಷ್ಯದ ಡಿಜಿಟಲೈಡ್ ಆರ್ಥಿಕತೆ" ಹಾಗೂ ವೇಗವಾಗಿ ಬೆಳೆಯುತ್ತಿರುವ "ಲಾಭದಾಯಕ ಇ–ಕಾಮರ್ಸ್"ನಲ್ಲಿ ಹೆಚ್ಚು ಲಾಭಗಳ ಅವಕಾಶಗಳ 'ಕೊಯ್ಲು ಮಾಡುವ" ನಿಟ್ಟಿನಲ್ಲಿ ಹೊಸ ನಿಯಮಗಳನ್ನು ಹಣಕಾಸು ಬಂಡವಾಳವು ಬಯಸುತ್ತದೆ. ಇದರ ಮೂಲಕ ಹೊಸ ಮಾರುಕಟ್ಟೆ ತೆರೆಯುವ ಉದ್ದೇಶವನ್ನು ಕೂಡ ಹೊಂದಿದ್ದಾರೆ. ಆದರೆ ಅಮೆಜಾನ್, ಫೆಡ್‌ಎಕ್ಸ್ ನಂತಹ ಇತರೆ ದೈತ ಇ–ಕಾಮಾರ್ಸ್ ಕಾರ್ಪೋರೇಟುಗಳ ದಾಳಿಗಳಿಂದ ಉಂಟಾಗಬಹುದಾದ ಪರಿಣಾಮಗಳಿಂದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಉಳಿಸಿಕೊಳ್ಳಲು ಕಷ್ಟ ಸಾಧ್ಯವಾಗಬಹುದು.

ಆಫ್ರಿಕಾ ಸಹಭಾಗಿತ್ವ – ವಶಕ್ಕೆ ಅವಕಾಶ ಮುಕ್ತ

ಹಣಕಾಸು ಬಂಡವಾಳವು ದಕ್ಷಿಣ ದೇಶಗಳ ಆರ್ಥಿಕತೆಯನ್ನು ನುಂಗಿಹಾಕುವುದನ್ನು ದಾಖಲಾ ಪಟ್ಟಿಯಲ್ಲಿ ಪ್ರಸ್ತಾಪಿಸಿದೆ. "ಖಾಸಗಿ ವಲಯಕ್ಕೆ ಉತ್ತೇಜನ ನೀಡುವ ಮೂಲಕ, ಆಫ್ರಿಕಾದ ಆರ್ಥಿಕತೆಯಲ್ಲಿನ ಅವಕಾಶಗಳನ್ನು ಸದುಪಯೋಗ ಪಡಿಸಲು – ಅವಕಾಶಗಳನ್ನು ಬಾಚಿಕೊಳ್ಳಿ" ಎಂದು ಜಿ–20 'ಆಫ್ರಿಕಾದ ಸಹಭಾಗಿತ್ವ" ಎಂಬ ಮತ್ತೊಂದು ಪ್ರತ್ಯೇಕ ದಾಖಲಾ ಪತ್ರದ ಟಿಪ್ಪಣಿಯಲ್ಲಿ "ಅವಕಾಶಗಳನ್ನು ಬಾಚಿಕೊಳ್ಳಿ" (Seize opportunities) ಎಂದು ಏಕೈಕ ಸಾಲಿನಲ್ಲಿ ಪ್ರಸ್ತಾಪಿಸಲಾಗಿದೆ.

ಪ್ರತಿಭಟನೆಕಾರರು ಪ್ರಶ್ನಿಸಿರುವ ಮತ್ತೊಂದು ಪ್ರಮುಖ ಅಂಶವೆಂದರೆ, "ತೆರಿಗೆ ವ್ಯವಸ್ಥೆ" (Tax system) ಗಳನ್ನು ಹಣಕಾಸು ಬಂಡವಾಳದಾರರ ಪರವಾಗಿ ಸುಧಾರಣೆ ಮಾಡುವುದು, ಈ ವಿಷಯ ಅನೇಕ ಶೃಂಗಸಭೆಗಳಲ್ಲಿನ ದಾಖಲಾ ಟಿಪ್ಪಣಿಯಲ್ಲಿ ಪುನಾರಾವರ್ತಿತವಾಗುತ್ತಿದೆ. ಇದರ ಮೂಲ ಉದ್ದೇಶಗಳು ಉತ್ತಮ ಸಂಪನ್ಮೂಲ ಖಚಿತ ಪಡಿಸಿಕೊಳ್ಳುವುದು ಮತ್ತು ತೆರಿಗೆ ಹೇರುವಿಕೆ ಅನುಸರಣೆಯ ಖಾತ್ರಿ. ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿ ಹೋಗಿರುವ ಗ್ರೀಸ್ ಮುಂತಾದ ದೇಶಗಳು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ (ಐಎಂಎಫ್)ಯಿಂದ ವಿಧಿಸಲ್ಪಟ್ಟ ಪ್ರಮುಖ ಶರತ್ತುಗಳೆಂದರೆ ವ್ಯಾಟ್ (VAT) ಪರಿಚಯಿಸಿ ಜನರನ್ನು ವಂಚಿಸುವುದಾಗಿತ್ತು.

ಈ ಹಿನ್ನೆಲೆಯಲ್ಲಿಯೇ ನಮ್ಮ ದೇಶದಲ್ಲಿನ 'ರಾಷ್ಟ್ರೀಯತೆಯ ವಾದಿಗಳೆಂದು ಹೇಳುಕೊಳ್ಳುವವರು – ಒಂದೇ ರೀತಿಯ ತೆರಿಗೆ ಜಿ.ಎಸ್.ಟಿ. ತಂದಿದ್ದಾರೆ.

ಕ್ರಿಯಾ ಯೋಜನೆಯಲ್ಲಿ ಬೆತ್ತಲಾದ ಭಾರತ

ಜಿ–20 ರ 'ಕ್ರಿಯಾ ಯೋಜನೆ' ಓದಲು ತುಂಬ ಆಸಕ್ತಿದಾಯಕವಾಗಿದೆ. ಭಾರತದಲ್ಲಿ "ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ" ಯನ್ನೂ ಉತ್ತೇಜಿಸಲು ತೆಗೆದುಕೊಂಡಿರುವ ಕ್ರಮಗಳನ್ನು ಕ್ರಿಯಾ ಯೋಜನೆಯಲ್ಲಿ ಈ ರೀತಿ ವಿವರಣೆ ನೀಡಲಾಗಿದೆ. 'ಭಾರತವು ಕಾರ್ಮಿಕರ ಭದ್ರತೆಯನ್ನು ಒದಗಿಸಲು ಕಾರ್ಮಿಕ ಮಾರುಕಟ್ಟೆಯ ಸುಧಾರಣೆಗಳನ್ನು ಪರಿಚಯಿಸುತ್ತಿದೆ. ಉದ್ಯೋಗಿಗಳಲ್ಲಿ ಮಹಿಳಾ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿದೆ ಹಾಗೂ ಇಲ್ಲಿ ವ್ಯಾಪಾರ – ವ್ಯವಹಾರಗಳನ್ನು ನಡೆಸಲು ವಾತಾವರಣ ಸಮೃದ್ಧಿದಾಯಕವಾಗಿದೆ." ಆದರೆ ಭಾರತದಲ್ಲಿ ಕಾರ್ಮಿಕ ಕಾನೂನುಗಳ ಸುಧಾರಣೆಗಳು, ಕಾರ್ಪೋರೇಟುಗಳಿಗೆ ಲಾಭದಾಯಕವಾದ ನೈಜ ಉದ್ದೇಶದಿಂದ ಕೂಡಿದೆಯೇ ಹೊರೆತು, ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಯೆಂಬುದನ್ನು ತಪ್ಪಾಗಿ ಬಿಂಬಿಸಲಾಗಿದೆ ಎಂದು ಯಾವುದೇ ಅನುಮಾನಗಳಿಲ್ಲದೆ ಸಾಭೀತಾಗಿದೆ. ಇದನ್ನು ಪ್ರಾನ್ಸ್, ಜಪಾನ್ ಮತ್ತು ಚೀನಾಕ್ಕೆ ದೇಶಗಳ ನೀತಿಗಳೊಂದಿಗೆ ಹೋಲಿಸಿ ನೋಡಬಹುದು.

ಫ್ರಾನ್ಸ್ ಆದಾಯ ಕಡಿಮೆ ಇರುವ ಕುಟುಂಬಗಳಿಗೆ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಿಸಲು ಜನತೆಯ ಮೇಲಿನ ತೆರಿಗೆ ಹೊರೆಯನ್ನು ಕಡಿಮೆಗೊಳಿಸುತ್ತಿದೆ. ಜಪಾನ್ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಖಾತ್ರಿ ಪಡಿಸುತ್ತಿದೆ. ಹಾಗೂ ಕೆಲಸದ ಅವಧಿಯನ್ನು ಕಡಿಮೆಗೊಳಿಸುತ್ತಿದೆ. ಚೀನಾ ದೇಶವು ಭೋದನಾ ಶುಲ್ಕವನ್ನು ಕಡಿಮೆ ಮಾಡಿ ಉನ್ನತ ಶಿಕ್ಷಣಕ್ಕಾಗಿ ಸಬ್ಸಿಡಿಗಳನ್ನು ಹೆಚ್ಚಿಸುತ್ತಿದೆ ಎಂಬ ಈ ದೇಶಗಳ ಹೇಳಿಕೆಗಳು 'ಕ್ರಿಯಾ ಯೋಜನೆ'ಯಲ್ಲಿ ಪ್ರಸ್ತಾಪಗೊಂಡಿದೆ. ಇವುಗಳ ಮುಂದೆ ಭಾರತದ 'ಬಿಜೆಪಿ ಸರ್ಕಾರವು ಅನುಸರಿಸಿದ ಎಲ್ಲರನ್ನು ಒಳಗೊಳ್ಳುವ ಬೆಳವಣಿಗೆಯ ನೀತಿಗಳು" ಇಡೀ ಜಿ–20 ಸಭೆಯಲ್ಲಿ ಬೆತ್ತಲಾಗಿವೆ.

ಜಿ–20 ಶೃಂಗ ಸಭೆ ಆಳವಾದ ಬಿಕ್ಕಟ್ಟಿನಲ್ಲಿರುವ ಬಂಡವಾಳ ಶಾಹಿ ವ್ಯವಸ್ಥೆಯನ್ನು ಮೇಲೆತ್ತುವ ಪ್ರಯತ್ನದಲ್ಲಿದೆ. ಆದರೆ ಮತ್ತೊಂದೆಡೆ ಶೋಷಣೆ ಮತ್ತು ವಿರುದ್ಧ ನಡೆದ ಪ್ರತಿಭಟನೆಗಳು ಜನತೆಯ ಕೋಪ–ಅಸಮಾಧಾನಗಳ ಅಭಿವ್ಯಕ್ತಿಯಾಗಿ ಪ್ರತಿಬಿಂಬಿತವಾಗಿವೆ. ಇದು ಜನತೆಯ ಉತ್ತಮ ಬದುಕಿಗೆ ಆಶಾದಾಯಕವಾಗಿ ಪರಿಣಿಮಿಸಿದೆ.

ಜಿ–20 ರ ಶೃಂಗ ಸಭೆಯ ದಾಖಲಾ ಪಟ್ಟಿಯಲ್ಲಿ ಪ್ರತಿಭಟನೆಕಾರರ ಬೇಡಿಕೆಗಳು ಒಳಗೊಂಡಿಲ್ಲದಿರುವುದು, ಇವರಲ್ಲಿ ನಿರಾಸೆಗೊಳಿಸಿಲ್ಲ ಅಥವಾ ಉತ್ಸಾಹವನ್ನು ಕುಗ್ಗಿಸಿಲ್ಲ. ಹ್ಯಾಂಬರ್ಗ್ ರಸ್ತೆಗಳಲ್ಲಿನ ಪ್ರತಿಭಟನೆಗಳು, ರಸ್ತೆ ದುರ್ಗಮವಾಗಿದ್ದರೂ ಗುರಿ ತಲುಪುವ ಯುವ ಪ್ರತಿಭಟನೆಕಾರರ ಹುಮ್ಮಸ್ಸು – ಉತ್ಸಾಹಕ್ಕೆ ನಿರಾಶೆ ಎಂಬುದಿಲ್ಲ ಎಂದು ತೋರಿಸಿಕೊಟ್ಟಿದೆ. ●



ಚೀನಾ ಭೇಟಿ – 4

ಕೆಂಪು ಸೈನ್ಯದ ಜನ್ಮಸ್ಥಾನ ಜ್ಯಾಂಕ್ಸಿ ಪ್ರಾಂತ್ಯಕ್ಕೆ

ವಸಂತ ಆಚಾರಿ

ಮೇ 19 ರಂದು ಗುಟಿಯಾನ್ ಅಧಿವೇಶನದ ಚಾರಿತ್ರಿಕ ಪ್ರದೇಶಗಳನ್ನು ಭೇಟಿಯಾದ ತರುವಾಯ ಬೆಳಿಗ್ಗೆ 11.20 ರಿಂದ 12.30ರ ತನಕ ಲೊಂಗ್‌ಯಾನ್ ಕಮ್ಯೂನಿಸ್ಟ್ ಪಾರ್ಟಿ ಶಾಲೆ ವಿಭಾಗದಲ್ಲಿ ನಮಗೆ 'ಕೆಳಹಂತದಲ್ಲಿ ಪಾರ್ಟಿ ಕಟ್ಟುವ ಕುರಿತು' ವಿಷಯದ ಮೇಲೆ ಪಾಠಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಕೆಳಹಂತದಲ್ಲಿ ಶಾಖೆಗಳು, ಶಾಖಾ ಸದಸ್ಯರು ಸಭೆ ನಡೆಸುವ ವಿಧಾನಗಳು, ಅವರು ಸರಕಾರದ ಕೆಲಸ ಕಾರ್ಯವನ್ನು ನಡೆಸುವ ಪ್ರತಿನಿಧಿ ಕೂಡಾ ಆಗಿದ್ದಾರೆ. ಅವರುಗಳ ಚಟುವಟಿಕೆಗಳನ್ನು ನೋಡಿಕೊಂಡು ನಿರ್ದೇಶನ ನೀಡಲು ಮೇಲ್ಸಮಿತಿ ಸದಸ್ಯರು ಕೂಡಾ ಇರುತ್ತಾರೆ. ಅವರಿಗೆ ಮಾರ್ಕ್ಸ್‌ವಾದ ಹಾಗೂ ಮಾವೋರವರ ತಾತ್ವಿಕ ವಿಚಾರಗಳನ್ನು ಆಗ್ಗಿಂದಾಗ್ಗೆ ತರಬೇತಿ ನೀಡುತ್ತಾರೆ ಎಂದು ವಿವರಿಸಿದರು. ಕಮ್ಯೂನಿಸ್ಟ್ ಪಕ್ಷದ ಸದಸ್ಯರ ಮನೆಯವರು ಅವರಿಗೆ ಯಾವ ಎಲ್ಲಾ ಕೆಲಸಗಳಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ ಇದೆ ಅವರು ಮಾಡುತ್ತಾರೆ. ಅವರಿಗೆ ಏನೂ ಅಡೆತಡೆಗಳು ಇರುವುದಿಲ್ಲ. ಅದೇ ರೀತಿ ಗ್ರಾಮೀಣ ಪ್ರದೇಶದ ರೈತ ಕುಟುಂಬಗಳಲ್ಲಿ ಕೂಡಾ ಪಾರ್ಟಿ ಶಾಖೆಗಳು ಕೆಲಸ ನಿರ್ವಹಿಸುತ್ತವೆ. ಕಮ್ಯೂನಿಸ್ಟ್ ಪಾರ್ಟಿಗೆ ಸದಸ್ಯರಾಗಲು ಯುವಜನರು ಆಸಕ್ತಿ ವಹಿಸುತ್ತಾರೆ. ಅವರಿಗೆ ಪಾರ್ಟಿಯಲ್ಲಿ ಕೆಲಸ ನಿರ್ವಹಿಸಲು ಪ್ರಚೋದನೆ ಕೂಡಾ ನೀಡಲಾಗುತ್ತದೆ ಎಂದು ನಮಗೆ ವಿವರಿಸಿದರು.

'ಕೆಳಹಂತದಲ್ಲಿ ಪಾರ್ಟಿ ಕಟ್ಟುವ ಕುರಿತು'

ಗ್ರಾಮೀಣ ಪ್ರದೇಶದಲ್ಲಿ ಕೂಡಾ ಪಾರ್ಟಿಯ ಆದ್ಯತೆ ಜನತೆಯ ಸೇವೆ ಮಾಡುವುದಾಗಿದೆ. ಒಳ್ಳೆಯ ಆರೋಗ್ಯಯುತ ನೆಮ್ಮದಿಯ ಜೀವನ ನಡೆಸಲು ವ್ಯವಸ್ಥೆ ಮಾಡುವುದೇ ಪಾರ್ಟಿ ಕಮಿಟಿಗಳ ಆದ್ಯತೆ. ನಮ್ಮ ದೇಶದ ಕಮ್ಯೂನಿಸ್ಟ್ ಚಟುವಟಿಕೆಯ ಕ್ರಮ ನಿಯಮಕ್ಕೂ ಅಲ್ಲಿನ ಕಮ್ಯೂನಿಸ್ಟ್‌ಕಾರ್ಯಕರ್ತರ ಚಟುವಟಿಕೆಗಳನ್ನು ಕಂಡಾಗ ಸಾಕಷ್ಟು ಬದಲಾವಣೆಯನ್ನು ಕಾಣಬಹುದಾಗಿದೆ. ಅಲ್ಲಿ ಕಾರ್ಮಿಕ ವರ್ಗದ ನೇತೃತ್ವದ ಸರಕಾರ ಬಂದಾಗಿದೆ. ಈ ಸರಕಾರವೇ ಸಾರ್ವಭೌಮ ಸರಕಾರ. ಆದರೆ ಇಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಸರಕಾರ ಇದೆ. ಈ ಸರಕಾರ ಮನುಷ್ಯನ ಶೋಷಣೆ ಮಾಡಿ ಬಂಡವಾಳಗಾರರ ಆದಾಯವನ್ನು ಹೆಚ್ಚಿಸುತ್ತದೆ. ಆದರೆ ಚೀನಾ ಸರಕಾರ ಜನರ ನೆಮ್ಮದಿಯ ಬದುಕಿಗಾಗಿ ತನ್ನ ಸದಸ್ಯರನ್ನು ಎಲ್ಲಾ ವಿಭಾಗದಲ್ಲಿ ತಯಾರಿ ನಡೆಸುತ್ತಿದೆ. ಬಡತನ ನಿರ್ಮೂಲನೆ, ಶಿಕ್ಷಣ, ಆರೋಗ್ಯ, ಕ್ರೀಡೆ, ಸಾಂಸ್ಕೃತಿಕ ವ್ಯವಸ್ಥೆಗಾಗಿ ಸರಕಾರದ ಪ್ರಯತ್ನ ಸಾಗುತ್ತಿದೆ. ಬಂಡವಾಳಶಾಹಿಯ ವಿರುದ್ಧದ ಹೋರಾಟದ ಛಾಯೆ ಅಲ್ಲಿ ಸಿಗುವುದಿಲ್ಲ. ಎಲ್ಲರೂ ಅವರವರ ಕೆಲಸಗಳಲ್ಲಿ ತಲ್ಲೀನರಾಗಿರುವುದನ್ನು ನಾವೆಲ್ಲಾ ಕಾಣಬಹುದು. ಅಲ್ಲಿ ಎಷ್ಟು ಪ್ರಮಾಣದ ಬಡತನ ಇತ್ತು. ಈಗ ಎಷ್ಟು ಇದೆ ಹಾಗೂ 2020 ರಲ್ಲಿ ಬಡತನವನ್ನು ಶಾಶ್ವತವಾಗಿ ನಿರ್ಮೂಲನ ಮಾಡುವ ಮತ್ತುಷ್ಟು ಯೋಜನೆಯನ್ನು ಚೀನಾ ಕಮ್ಯೂನಿಸ್ಟ್ ಪಾರ್ಟಿ ಹೊಂದಿದೆ. ಪ್ರಶ್ನೋತ್ತರ ನಂತರ ನಮಗೆ ವಿರಾಮ ನೀಡಲಾಯಿತು. ಸಂಜೆಗೆ ಊಟೋಪಚಾರ ಮುಗಿಸಿ ವಡಾ ರಿಯಾಲ್ಮ್ ಹೋಟೇಲಿನಲ್ಲಿ ತಂಗುವ ವ್ಯವಸ್ಥೆ ಮಾಡಲಾಗಿತ್ತು.

ಮೇ 20ರಂದು ರಂದು ಬೆಳಿಗ್ಗೆ 6.30ಕ್ಕೆ ಉಪಹಾರ ಮುಗಿಸಿ ಬೆಳಿಗ್ಗೆ 7.30ಕ್ಕೆ ಬಸ್ಸಿನಲ್ಲಿ ಪ್ರಯಾಣ ಮಾಡಿ ಲೊಂಗ್‌ಯಾನ್ ರೈಲ್ವೆ ಸ್ಟೇಶನ್‌ಗೆ ತಲುಪಿದೆವು. ಬೆಳಿಗ್ಗೆ 8.32ಕ್ಕೆ ಆ.6678 ಬುಲೆಟ್ ಟ್ರೈನ್‌ನಲ್ಲಿ ಪ್ರಯಾಣ ಬೆಳೆಸಿ ಜಿಯಾಂಕ್ಸಿ ಪ್ರಾಂತ್ಯದ ರುಜಿಯಿನ್‌ಗೆ ತಲುಪಿದೆವು. ಜಿಯಾಂಕ್ಸಿ ಪ್ರಾಂತ್ಯದ ಕಮ್ಯೂನಿಸ್ಟ್ ಪಾರ್ಟಿಯ ನಿಯೋಗವು ನಮ್ಮನ್ನು ಸ್ವಾಗತಿಸಿತು. ನಮ್ಮೆಲ್ಲರ ಪರಿಚಯವನ್ನು ಅವರಿಗೆ ಮಾಡಲಾಯಿತು. ಅಲ್ಲಿಂದ ನಮಗೆ ಪ್ರತ್ಯೇಕ ಬಸ್ಸು ಸೌಕರ್ಯವನ್ನು ಮಾಡಿದ್ದರು. ವಾಹನದಲ್ಲಿ ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಕೂಡಾ ಮಾಡಿದ್ದರು. ಅಲ್ಲಲ್ಲಿ ತುಂತುರು ಮಳೆ ಬರುತ್ತಿತ್ತು. ನಮಗಾಗಿ ಒಬ್ಬೊಬ್ಬರಿಗೂ ಒಂದೊಂದು ದೊಡ್ಡದಾದ ಕೊಡೆಯ ವ್ಯವಸ್ಥೆಯನ್ನು ಕೂಡಾ ಮಾಡಿದ್ದರು. ನಂತರ ಅಲ್ಲಿ ಹೊಟೇಲೊಂದರಲ್ಲಿ ಸ್ವಲ್ಪ ವಿಶ್ರಾಂತಿ ಮಾಡಿ ಮಧ್ಯಾಹ್ನದ ಊಟವನ್ನು ಅಲ್ಲಿಯೇ ಮುಗಿಸಿದೆವು.

ಸ್ಥಳೀಯ ಆಡಳಿತದ ಬಗ್ಗೆ ಮಾಹಿತಿ ವಿನಿಮಯ

ಮಧ್ಯಾಹ್ನ 2.30ಕ್ಕೆ ಸ್ಥಳೀಯ ಮುನ್ಸಿಪಾಲಿಟಿಯ ಆಡಳಿತದೊಂದಿಗೆ ನಗರದ ಜೀವನ ಪದ್ಧತಿ, ಅಲ್ಲಿನ ತೆರಿಗೆ ಪದ್ಧತಿ, ನೈರ್ಮಲ್ಯ, ಸ್ವಚ್ಛತೆ, ವಸತಿ, ರಸ್ತೆ, ಶಾಲೆ ಇತ್ಯಾದಿ ಬಗ್ಗೆ ವಿವರಣೆಯನ್ನು ಪಡೆಯಲಾಯಿತು. ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಹಾಗೂ ರ್‍ಯೂಜೀನ್ ಮುನ್ಸಿಪಾಲಿಟಿಯ ಅಧ್ಯಕ್ಷರು ನಮ್ಮ ಮುಖಾಮುಖಿ ಪ್ರಶ್ನೆಗಳಿಗೆ ಸವಿವರವಾಗಿ ಉತ್ತರವನ್ನು ನೀಡಿದರು. ಹಾಗೆನೇ ಅವರು ಭಾರತ ದೇಶದ ಪಶ್ಚಿಮ ಬಂಗಾಳ, ಕೇರಳ ಹಾಗೂ ತ್ರಿಪುರಾ ರಾಜ್ಯದ ನಗರ ಪ್ರದೇಶದ ಮುನ್ಸಿಪಾಲಿಟಿಗಳ ಬಗ್ಗೆ ಕೂಡಾ ವಿವರಣೆಯನ್ನು ಪಡೆದುಕೊಂಡರು. ಅವರು ನಮ್ಮ ಪ್ರತಿನಿಧಿಗಳನ್ನು ಸಾಲಾಗಿ ನಿಲ್ಲಿಸಿ ನಮ್ಮ ಕೈಕುಲುಕಿಸಿಕೊಂಡರು. ನಮಗೆ ಇದು ವಿಶೇಷ ಅನುಭವವನ್ನು ನೀಡಿತು. ಇನ್ನೊಂದು ವಿಶೇಷವನ್ನು ನಾನಿಲ್ಲಿ ತಿಳಿಸಬೇಕಾಗಿದೆ. ಸಂಜೆ 6.30ಕ್ಕೆ ಅಲ್ಲಿಯೇ ನಮಗೆ ಊಟದ ವ್ಯವಸ್ಥೆ ಇತ್ತು. ಅವರು ನಮ್ಮೊಂದಿಗೆ ಊಟದ ಕಾರ್ಯಕ್ರಮದಲ್ಲಿ ಭಾಗಿಯಾದರು.

ಊಟ ಪ್ರಾರಂಭವಾಗುವುದು ಸಾಂಕೇತಿಕವಾಗಿ ವೈನ್ ಕುಡಿಯುವುದರ ಮುಖಾಂತರ. ಚಿಕ್ಕ ಗ್ಲಾಸಿನಲ್ಲಿ ವೈನ್ ಸುರಿಯುತ್ತಾರೆ. ಅದನ್ನು ಎತ್ತಿಕೊಂಡು ನಮ್ಮ ತಂಡದ ನಾಯಕಿ ಹಾಗೂ ಅವರು ವೈನ್ ತುಂಬಿರುವ ಗ್ಲಾಸಿಗೆ ಗ್ಲಾಸ್ ತಾಗಿಸಿ ಚಿಯರ್ಸ್ ಅಂದರು. ನಂತರ ಅದನ್ನು ಪೂರ್ತಿ ಖಾಲಿಮಾಡಿಕೊಂಡು ಖಾಲಿಯಾದ ಗ್ಲಾಸನ್ನು ತೋರಿಸಿಕೊಂಡರು. ಇದು ಅಲ್ಲಿನ ಸಂಪ್ರದಾಯ. ಅದೇ ರೀತಿ ನಮ್ಮೊಂದಿಗೆ ಇತರ ಕಮ್ಯೂನಿಸ್ಟ್ ಪಾರ್ಟಿಯ ಮುಂದಾಳುಗಳು ಶಾಮಿಲಾಗಿ ವೈನ್ ಕುಡಿಯುವಿಕೆ ಆಯಿತು. ನಂತರ ಒಂದರ ನಂತರ ಒಂದರಂತೆ ವಿವಿಧ ನಮೂನೆಯ ಪದಾರ್ಥಗಳೊಂದಿಗೆ ಊಟೋಪಚಾರ ನಡೆಯಿತು. ಕೊನೆಯದಾಗಿ ಪುನ: ಗ್ಲಾಸಿಗೆ ವೈನ್ ಸುರಿದು ಅದನ್ನು ಕುಡಿದು ಖಾಲಿಗ್ಲಾಸ್ ತೋರಿಸಿ ರಾತ್ರಿ ಊಟೋಪಚಾರ ಮುಗಿಯಿತು. ವಿಶೇಷವೇನೆಂದರೆ ಊಟ ಒಂದು ಗಂಟೆ ತನಕ ನಡೆದರೆ ಆ ಒಂದು ಗಂಟೆಯಲ್ಲಿ ಚೈನಾದ ಬೆಳವಣಿಗೆ ಬಗ್ಗೆ, ಮುನ್ಸಿಪಾಲಿಟಿಯ ಮುಂದಿನ ಸವಾಲುಗಳ ಬಗ್ಗೆ ಅವರು ನಮಗೆ ವಿವರಿಸಿದರು. ನಾವೂ ಕೂಡಾ ನಮ್ಮಲ್ಲಿ ಇದ್ದ ಪ್ರಶ್ನೆಗಳನ್ನು ಉತ್ತರದ ಮುಖಾಂತರ ಪಡೆದು ತೃಪ್ತಿ ಹೊಂದಿದೆವು. ರಾತ್ರಿ ಅದೇ ಹೊಟೇಲಿನಲ್ಲಿ ತಂಗಲು ವ್ಯವಸ್ಥೆ ಇತ್ತು.

ಜ್ಯಾಂಕ್ಸಿ – ಭತ್ತದ ಕಣಜ

ದಿನಾಂಕ 21–05–2017 ರಂದು ಬೆಳಿಗ್ಗೆ 8.30ಕ್ಕೆ ಉಪಹಾರ ಮುಗಿಸಿ ಬಸ್ಸಿನಲ್ಲಿ ಅಲ್ಲಿನ ಕ್ರಾಂತಿಕಾರಿ ಹೋರಾಟ ನಡೆದ ಸ್ಥಳಗಳಿಗೆ ಕೊಂಡೊಯ್ಯುವ ದಿನಚರಿಯನ್ನು ತಯಾರಿಸಿದ್ದರು. ಆ ನಿಟ್ಟಿನಲ್ಲಿ ನಮ್ಮ ಪ್ರಯಾಣ ಹೊರಟಿತು. ಇದು ಜ್ಯಾಂಕ್ಸಿ ಪ್ರಾಂತ್ಯದಲ್ಲಿ ಬರುತ್ತದೆ. ಜ್ಯಾಂಕ್ಸಿ ಪ್ರಾಂತ್ಯದ ಬಗ್ಗೆ ಸ್ವಲ್ಪ ಪರಿಚಯ ಮಾಡೋಣ. ಜ್ಯಾಂಕ್ಸಿ ಪ್ರಾಂತ್ಯವು ಯಾಂಕ್ಟೇಜೀ ನದಿಯ ಮಧ್ಯದ ದಕ್ಷಿಣ ಭಾಗದ ಕೆಳಭಾಗದಲ್ಲಿ ಬರುತ್ತದೆ. ಮತ್ತು ಪೂರ್ವ, ಪಶ್ಚಿಮ ಮತ್ತು ದಕ್ಷಿಣದ ಸುತ್ತ ಮುತ್ತ ಭಾಗಗಳು ಗುಡ್ಡ ಪರ್ವತಗಳನ್ನು ಹೊಂದಿದೆ. ಪುರಾತನ ಕಾಲದಿಂದ ಹಿಡಿದು ಇಂದಿನವರೆಗೂ ಜ್ಯಾಂಕ್ಸಿ ಪ್ರಾಂತವು ಮೀನು ಮತ್ತು ಭತ್ತದ ಕಣಜ ಎಂದು ಹೆಸರು ಪಡೆದಿದೆ. ಒಟ್ಟು 166,900 ಸ್ಕ್ವೇರ್ ಕಿಲೋಮೀಟರ್ ವ್ಯಾಪ್ತಿಯನ್ನು ಹೊಂದಿರುವ ಈ ಪ್ರಾಂತ್ಯವು ಒಟ್ಟು 4.5 ಕೋಟಿ ಜನಸಂಖ್ಯೆಯನ್ನು ಹೊಂದಿದೆ. 11 ಆಡಳಿತಾತ್ಮಕ ಮಟ್ಟದ ನಗರಗಳು, 100 ಸ್ಥಳೀಯ ಸಂಸ್ಥೆ ಮಟ್ಟದ ನಗರಗಳು ಮತ್ತು ಜಿಲ್ಲೆಗಳನ್ನು ಹೊಂದಿದೆ. ಮಾತ್ರವಲ್ಲದೆ ಈ ಪ್ರಾಂತ್ಯವು ಹಲವಾರು ಬಹುಮುಖ ಪ್ರತಿಭೆಗಳನ್ನು ಸೃಷ್ಟಿಸಿದೆ.

ಜ್ಯಾಂಕ್ಸಿಯು ಭೌಗೋಳಿಕವಾಗಿಯೂ ಉತ್ತಮ ಗುಣಮಟ್ಟವನ್ನು ಹೊಂದಿದೆ ಮಾತ್ರವಲ್ಲದೆ ಅತ್ಯಂತ ಉತ್ತಮ ಸಾರಿಗೆ ಮತ್ತು ಸಂಪರ್ಕವನ್ನು ಕೂಡಾ ಹೊಂದಿದೆ. 2015ರ ಕೊನೆಗೆ ಹೆಚ್ಚಿನ ಪ್ರದೇಶಕ್ಕೆ ರೈಲ್ವೆ ರಸ್ತೆಯನ್ನು ಹೊಂದಿದ ಪ್ರದೇಶವಾಗಿದ್ದು ನಾನ್‌ಚಾಂಗ್, ಜೀವ್‌ಜಿಂಗ್, ಜಿಂಗ್‌ಡೆಜೆನ್, ಗಾಂಜ್‌ವೋ, ಜಿಂಗ್‌ನಾಷಾನ್, ಯೆಚೋನ್ ಎಂಬ 6 ವಿಮಾನ ನಿಲ್ದಾಣವನ್ನು ಹೊಂದಿದೆ.

ಜ್ಯಾಂಕ್ಸಿಗೆ ಅದರದ್ದೇ ದೊಡ್ಡ ಚರಿತ್ರೆ ಮತ್ತು ಸಂಸ್ಕೃತಿ ಇದೆ. ಜ್ಯಾಂಕ್ಸಿ ಪ್ರಾಂತ್ಯವು ಮೂರು ರಾಷ್ಟ್ರ ಮಟ್ಟದ ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಹೆಸರುವಾಸಿಯಾಗಿರುವ ನಗರವನ್ನು ಪಡೆದಿದೆ. ಅವುಗಳೆಂದರೆ ನಾನ್‌ಚಾಂಗ್, ಜಿಂಗ್‌ಡೆಜೆನ್ ಮತ್ತು ಗಾನ್‌ಜೊವೋ ನಗರಗಳು. ಜ್ಯಾಂಕ್ಸಿ ಪ್ರಾಂತ್ಯವು ಚೈನಾದ ಕನ್‌ಫ್ಯೂಶಿಯನ್‌ಸಮ್‌ನ, ಬುದ್ದಿಸಂನ ಮತ್ತು ಟಾವೋಯಿಸಂನ ಅನುಯಾಯಿಗಳಿಂದ ಕೂಡ ಸಮೃದ್ಧ ಪ್ರದೇಶವಾಗಿದೆ. ಜ್ಯಾಂಕ್ಸಿ ಪ್ರಾಂತ್ಯದ ವಾನ್–ನಿಯಾನ್ ಪ್ರದೇಶವು ಪ್ರಪಂಚದಲ್ಲಿಯೇ ಭತ್ತ ಬೆಳೆಯನ್ನು ಬೆಳೆಯುವ ಮೂಲ ಪ್ರದೇಶವಾಗಿದೆ. ಜಿಂಗ್‌ಡೆಜನ್ ಪ್ರದೇಶವು ಪ್ರಪಂಚದಲ್ಲಿಯೇ ನುಣುಪಾದ ಮಣ್ಣಿನ ಪಾತ್ರೆಗಳ ರಾಜಧಾನಿಯಾಗಿದೆ. ಜ್ಯಾಂಕ್ಸಿ ಪ್ರಾಂತ್ಯವು ಹೆಮ್ಮೆಪಟ್ಟುಕೊಳ್ಳಬಲ್ಲ ಒಳ್ಳೆಯ ಪರಿಸರವನ್ನು ಹೊಂದಿದೆ. ಇಲ್ಲಿ ಚೀನಾದಲ್ಲಿರುವ ನಂಬರ್ 1 ಸ್ಥಾನದ ಅರಣ್ಯ ಪ್ರದೇಶವನ್ನು ಹೊಂದಿದೆ. ಒಟ್ಟು ಪ್ರಾಂತ್ಯವು 63.1% ಅರಣ್ಯ ಪ್ರದೇಶದಿಂದ ಕೂಡಿದೆ. 14 ರಾಷ್ಟ್ರೀಯ ಮಟ್ಟದ ಪ್ರವಾಸಿ ಕೇಂದ್ರಗಳನ್ನು ಹೊಂದಿದೆ. ಅದರಲ್ಲಿ 13 ಸ್ವಾಭಾವಿಕ ರಾಷ್ಟ್ರೀಯ ಪ್ರವಾಸಿ ಕೇಂದ್ರಗಳು. ಹಾಗೂ 45 ರಾಷ್ಟ್ರೀಯ ಮಟ್ಟದ ಅರಣ್ಯ ಪಾರ್ಕ್‌ಗಳಿವೆ. ಪೊಯಾಂಕ್ ಕೆರೆಯು ಜ್ಯಾಂಕ್ಸಿಯ ವಿಶಾಲವಾದ ಮತ್ತು ಶುದ್ಧವಾದ ನೀರುಳ್ಳ ಕೆರೆಯಾಗಿದೆ ಮತ್ತು ಈ ಕೆರೆಯ ಸುತ್ತ ಮುತ್ತ ಇರುವ ಮಣ್ಣು ದೇಶ ಮತ್ತು ವಿದೇಶದಲ್ಲಿಯೇ ತೇವಭರಿತ ಮಣ್ಣನ್ನು ಹೊಂದಿದೆ.

ಜ್ಯಾಂಕ್ಸಿ ಪ್ರಾಂತ್ಯವು ಖನಿಜ ಉತ್ಪನ್ನಗಳಿಗೆ ಹೆಸರುವಾಸಿಯಾಗಿದೆ. ಒಟ್ಟು 174 ನಮೂನೆಯ ಖನಿಜಗಳು ಇಲ್ಲಿ ಲಭ್ಯವಿದೆ. ಇಲ್ಲಿನ ತಾಮ್ರವು ಚೀನಾದಲ್ಲಿಯೇ ಪ್ರಥಮ ಸ್ಥಾನದಲ್ಲಿ ಇದೆ. ದಕ್ಷಿಣ ಜ್ಯಾಂಕ್ಸಿ ಪ್ರದೇಶವು ಟುಂಗ್‌ಸ್ಟೇನ್ ಕ್ಯಾಪಿಟಲ್ ಆಫ್ ವರ್ಲ್ಡ್ ಮತ್ತು ಕಿಂಗ್‌ಡವಲ್‌ಅಫ್ ರ್‍ಯಾರ್‌ಅರ್ಥ್ ಎಂದು ಗೌರವಕ್ಕೆ ಪಾತ್ರವಾಗಿದೆ.

ನಾನ್‌ಚಂಗ್ – ಕೆಂಪು ಸೈನ್ಯದ ಜನ್ಮಸ್ಥಾನ

ಜ್ಯಾಂಕ್ಸಿಯೂ ಕೆಂಪು ಕ್ರಾಂತಿಯ ಹುಟ್ಟಿಗೆ ಹಾಗೂ ಬೆಳವಣಿಗೆಗೆ ಪೂರಕವಾದ ಪ್ರಾಂತ್ಯವಾಗಿದೆ. ನಾನ್‌ಚಂಗ್ ಪ್ರದೇಶವು ಪೀಪಲ್ಸ್ ಲಿಬರೇಶನ್ ಆರ್ಮಿ (PLA) ಹುಟ್ಟಿದ ಸ್ಥಳವಾಗಿದೆ. ಇಲ್ಲಿಯೇ ಕೋಮಿಂಗ್‌ಡಾಂಗ್ ಪಾರ್ಟಿಯ ವಿರುದ್ಧ ಆಗಸ್ಟ್ 1 ರಂದು ಯುದ್ಧ ಆರಂಭದ ದಿನವಾಗಿದೆ. ಇಲ್ಲಿನ ರೂಯಿಜಿನ್‌ವು ಚೀನಾ ಸೋವಿಯತ್ ಗಣ–ರಾಜ್ಯ ಎಂಬ ಪ್ರಥಮ ಚೈನಾದ ಕೆಂಪು ಸೈನ್ಯದ ಅಧಿಕಾರವನ್ನು ಸ್ಥಾಪಿಸಿದ್ದು, ಮಾತ್ರವಲ್ಲದೆ ಕೆಂಪು ಸೈನ್ಯದ ಕೇಂದ್ರದ ಲೊಂಗ್ ಮಾರ್ಚ್ ಪ್ರಾರಂಭವಾದ ಸ್ಥಳವೂ ಇದಾಗಿದೆ. ಈ ರೀತಿಯ ಕ್ರಾಂತಿಕಾರಿ ಚರಿತ್ರೆಯ ಜೀವಂತ ಸಾಕ್ಷಿ ಈ ಪ್ರದೇಶವಾಗಿದೆ.

ಹೊಸ ನಮೂನೆಯ ಚಿಂತನೆ ಆರಂಭವಾದ ಈ ಪ್ರದೇಶವು ಪೊಯಾಂಗ್ ಕೆರೆ ಪರಿಸರ ಮತ್ತು ಆರ್ಥಿಕ ವಲಯ ಮತ್ತು ಜ್ಯಾಂಕ್ಸಿ ಪ್ರಾಂತ್ಯದ ದಕ್ಷಿಣ ಭಾಗವನ್ನು ಹಿಂದಿನ ಕೇಂದ್ರ ಸೋವಿಯತ್ ಪ್ರದೇಶದ 'ಡ್ರಾಗನ್ ತಲೆ' ಎಂದು ಹೆಸರುವಾಸಿಯಾಗಿದೆ. (ಅನೇಕ ರೆಕ್ಕೆಗಳೂ ಉಗುರುಗಳೂ ಉಳ್ಳ ಪೌರಾಣಿಕ ಮಹಾಸರ್ಪ)

ಜ್ಯಾಂಕ್ಸಿ ಪ್ರಾಂತ್ಯವು ಜನರಿಗೆ ರಕ್ಷಣೆ ಮತ್ತು ಜೀವನ ಮಟ್ಟವನ್ನು ಉತ್ತಮ ಪಡಿಸಲು ಹಲವಾರು ಕ್ರಮಗಳನ್ನು ಸುಧಾರಣೆಗಳನ್ನು ಕಂಡ ಪ್ರಾಂತ್ಯವಾಗಿದೆ. ಹೊಸ ವಿಧಾನದ ಕೈಗಾರಿಕೀಕರಣ, ನಗರೀಕರಣ ಮತ್ತು ಆಧುನಿಕ ಕೃಷಿ ಪದ್ಧತಿಯನ್ನು ಇಲ್ಲಿ ಬೆಳೆಸಲಾಗಿದೆ. ಇಲ್ಲಿನ ಜನರ ಪರಿಸರ ರಕ್ಷಣೆ ಪ್ರಜ್ಞೆಯೂ, ಕಾಳಜಿಯೂ ಭವಿಷ್ಯತ್ತಿನ ಚೀನಾದ ದೂರದೃಷ್ಟಿಯನ್ನು ತೋರಿಸುತ್ತದೆ. ಜನರ ಸುಖೀಜೀವನ, ಸಾಮಾಜಿಕ ಗುಣಮಟ್ಟ ಮತ್ತು ವೈಜ್ಞಾನಿಕವಾದ ಬೆಳವಣಿಗೆ ಮತ್ತು ಹಸಿರು ಪ್ರದೇಶದ ರಕ್ಷಣೆ ಈ ಜ್ಯಾಂಕ್ಸಿ ಪ್ರಾಂತ್ಯದಲ್ಲಿ ಕಾಣಬಹುದಾಗಿದೆ. ●

ಟೊಮೆಟೊ 100ರೂ-ಬ್ಯಾಂಕ್ ಉಳಿತಾಯ ಬಡ್ಡಿ ಕಡಿತ-ಅಡುಗೆ ಅನಿಲ ಸತತ ಬೆಲೆ ಏರಿಕೆ



ಇವು ಈ ವಾರದ 'ಅಚ್ಛೇ ದಿನ್' ಕೊಡುಗೆಗಳು.

ಮೊದಲಿನ ಎರಡು ಪ್ರಧಾನಿಗಳ (ಅವರಿಗೆ ಉತ್ತರ ಪ್ರದೇಶವನ್ನು 'ಗೆದ್ದು ಕೊಟ್ಟ') ಧೀರ ಕ್ರಮವಾದ ನೋಟು ರದ್ದತಿಯ ಎರಡು ಹೊಸ 'ಫಲ'ಗಳಾದರೆ, ಮೂರನೆಯದ್ದು ಈ ಸರಕಾರದ 'ಚೈತನ್ಯಪೂರ್ಣ ಆರ್ಥಿಕ ಸುಧಾರಣೆ'ಗಳ ಮತ್ತೊಂದು ಫಲ.

ಬೆಳೆಗಾರರಿಗೆ ರಕ್ಷಣೆ ನೀಡದ ಧೋರಣೆಗಳ ಫಲ

ಟೊಮೆಟೊ ಬೆಲೆಗಳು ಕೇವಲ ಒಂದು ತಿಂಗಳಲ್ಲಿ ನಾಲ್ಕು ಪಟ್ಟಾಗಿವೆ. ಜುಲೈ-ಆಗಸ್ಟ್ ತಿಂಗಳಲ್ಲಿ ಸಾಮಾನ್ಯವಾಗಿ ಟೊಮೆಟೋ ಬೆಲೆಗಳು ಏರುತ್ತವೆ, ಆದರೆ ಇಷ್ಟೊಂದು ಎಂದೂ ಏರಿರಲಿಲ್ಲ. ಕಳೆದ ವರ್ಷ 40ರೂ. ಆಗಿತ್ತು, ಅದರ ಹಿಂದಿನ ವರ್ಷ 30ರೂ. ಆಗಿತ್ತು. ಅದರೆ ಈ ಬೆಲೆಯೇರಿಕೆಯ ಪ್ರಯೋಜನ ಬೆಳೆಗಾರರಿಗೆ ಮಾತ್ರ ಸೊನ್ನೆ. ನವಂಬರ್‌ನಲ್ಲಿ ಬಂಪರ್ ಬೆಳೆ ಬಂದಾಗ ಅದು ಬೆಳೆಗಾರರಿಗೆ ವರವಾಗುವ ಬದಲು ನೋಟುರದ್ದತಿಯಿಂದಾಗಿ ಮುಳುವಾಯಿತು. ಅದು ಈ ವರ್ಷದ ಮೇ ತಿಂಗಳ ವರೆಗೂ ಮುಂದುವರೆಯಿತು. ಈಗ ಬೆಲೆಗಳು ಗಗನಕ್ಕೇರಿರುವಾಗ ಅದರ ಪ್ರಯೋಜನ ಪಡೆಯುವ ಸ್ಥಿತಿಯಲ್ಲೂ ಬೆಳೆಗಾರರಿಲ್ಲ. ಇದು ಬೆಳೆಗಾರರಿಗೆ ನೈಸರ್ಗಿಕ ಪರಿಣಾಮಗಳಿಂದಲೂ, ಮಾರುಕಟ್ಟೆ ಪರಿಣಾಮಗಳಿಂದಲೂ ರಕ್ಷಣೆ ನೀಡದ ಸರಕಾರದ ಕೃಷಿ ಧೋರಣೆಗಳ ಫಲ.

ತುಂಬಿ ತುಳುಕುತ್ತಿರುವ ನೋಟುಗಳ ಹೊರೆಯೂ....

ಸ್ಟೇಟ್ ಬ್ಯಾಂಕ್ ಇಂಡಿಯ (ಎಸ್‌ಬಿಐ), ದೇಶದ ಅತಿ ದೊಡ್ಡ ಬ್ಯಾಂಕ್ ತನ್ನ ಉಳಿತಾಯ ಖಾತೆಗಳ ಮೇಲೆ ಕೊಡುವ ಬಡ್ಡಿಯ ದರವನ್ನು 4% ದಿಂದ 3.5%ಕ್ಕೆ ಇಳಿಸಿದೆ. ಎಲ್ಲರಿಗೂ ಅಲ್ಲ, ಉಳಿತಾಯ ಖಾತೆಯಲ್ಲಿ 1 ಕೋಟಿ ರೂ.ಗಿಂತ ಕಡಿಮೆ ಇರುವವರಿಗೆ ಮಾತ್ರ, ಆ ಕಡು ಶ್ರೀಮಂತ ಮಂದಿಗೆ ಈ ಕಡಿತದ ಹೊರೆ ಬಿದ್ದಿಲ್ಲ, ಆದರೆ 1 ಕೋಟಿ ರೂ. ಕಡಿಮೆ ಠೇವಣಿ ಇರುವ ಖಾತೆಗಳೇ ಸುಮಾರು 90% ದಷ್ಟು.

ಹಿರಿಯಣ್ಣನ ಚಾಳಿ ಮನೆಮಂದಿಗೆಲ್ಲ ಎಂಬಂತೆ ಇತರ ಎಲ್ಲ ಬ್ಯಾಂಕುಗಳು ಇದನ್ನೆ ಅನುಕರಿಸಲು ಹೆಚ್ಚೇನೂ ಕಾಯಬೇಕಾಗಿಲ್ಲ.

ನೋಟು ರದ್ದತಿಯಿಂದ ಬ್ಯಾಂಕ್‌ಗಳಲ್ಲಿ ತುಂಬಿ ಹೋಗಿರುವ ನೋಟುಗಳು ಮತ್ತು ಸುಸ್ತಿಸಾಲಗಳ ಹೊರೆಯಿಂದಾಗಿ ಸಾಲ ನೀಡಿಕೆಗಳಲ್ಲಿ ಇಳಿಕೆ ಇದಕ್ಕೆ ಕಾರಣಗಳು ಎನ್ನಲಾಗಿದೆ. ಸಾಮಾನ್ಯವಾಗಿ ಯಾವುದೇ ಬ್ಯಾಂಕ್ ದರ ಬದಲಾವಣೆಗಳಲ್ಲಿ ಉಳಿತಾಯ ಖಾತೆಯ ದರಗಳನ್ನು ಮುಟ್ಟುವುದಿಲ್ಲ. 2003-2011 ರ ಅವಧಿಯಲ್ಲಿ ಮಾತ್ರ ಇದು 3.5% ಇತ್ತು, 2011ರಲ್ಲಿ ಮತ್ತೆ ಏರಿಸಲಾಯಿತು.

ಇನ್ನೊಂದು ಸಂಗತಿಯೆಂದರೆ, ಎಂದೂ ಈ ರೀತಿ ಹೆಚ್ಚು ಠೇವಣಿಯವರಿಗೆ ಹೆಚ್ಚಿನ ದರ ಎಂಬ ವ್ಯತ್ಯಾಸಗಳಿರಲಿಲ್ಲ. ಇವೆರಡೂ ಮೇಲ್ವರ್ಗಗಳ ಮಂದಿಗೆ ಒಳ್ಳೆಯ ದಿನಗಳು ಬಂದಿರುವುದರ ಸೂಚನೆಗಳು

ರಿಝರ್ವ್ ಬ್ಯಾಂಕ್ ಬಡ್ಡಿದರಗಳನ್ನು ಇಳಿಸುತ್ತದೆ ಎಂಬ ನಿರೀಕ್ಷೆಯ ಮೇಲೆ ಹೀಗೆ ಮಾಡಲಾಗಿದೆ ಎಂದೂ ಸಮರ್ಥನೆ ಕೊಡಲಾಗುತ್ತಿದೆ, ಆದರೆ ಇನ್ನೂ ಎರಡು ದಿನ ಕಾಯದೆ ಈ ರೀತಿ ಕಡಿತ ಮಾಡಿರುವುದು ರಿಝರ್ವ್ ಬ್ಯಾಂಕ್ ಕಾರ್ಪೊರೇಟ್ ಸಾಲ 'ದರಗಳನ್ನು ಇಳಿಸಬೇಕು ಎಂಬ ನಿರೀಕ್ಷೆಯನ್ನು ಈಡೇರಿಸುವಂತೆ ಒತ್ತಡ ತರಲು ಎಂದೂ ಹೇಳಲಾಗುತ್ತಿದೆ. ಎರಡು ದಿನಗಳ ನಂತರ ರಿಝರ್ವ್ ಬ್ಯಾಂಕ್ ದರಗಳನ್ನೇನೋ ಇಳಿಸಿತು, ಆದರೆ ಎಸ್‌ಬಿಐ ನಂತೆ 0.5% ಅಲ್ಲ, 0.25% ದಷ್ಟು ಮಾತ್ರ .

ಅಡುಗೆ ಅನಿಲಕ್ಕೂ ಸಬ್ಸಿಡಿ ಇಲ್ಲ, ಏರಿಸಿರುವ ಸುಂಕಗಳು..?

ಸರಕಾರದ ಸಬ್ಸಿಡಿ ಹೊಣೆಗಳನ್ನು ಇಳಿಸುವ ನವ-ಉದಾರವಾದಿ ಧೋರಣೆಯ ಮುಂದುವರೆದ ಭಾಗವಾಗಿ ಅಡುಗೆ ಅನಿಲದ ಮೇಲಿನ ಸಬ್ಸಿಡಿಗಳನ್ನು ಕೂಡ ಸಂಪೂರ್ಣವಾಗಿ ತೆಗೆಯಲು ಸರಕಾರ ನಿರ್ಧರಿಸಿದೆ. ಇದರ ಪರಿಣಾಮವಾಗಿ ಇನ್ನು ಮುಂದೆ ಪ್ರತಿ ತಿಂಗಳು 4ರೂ.ನಂತೆ ಹೆಚ್ಚಳವಾಗುತ್ತದೆ, ಈ ಸಬ್ಸಿಡಿ ಮಾರ್ಚ್ 2018 ರ ವೇಳೆಗೆ ಸೊನ್ನೆಯಾಗಬೇಕಂತೆ, ಅಂದರೆ ಈ ಏರಿಕೆ ತಿಂಗಳಿಗೆ 4ರೂ.ಗೇ ಸೀಮಿತವಾಗುತ್ತದೆಯೇ ಎಂದೇನೂ ಹೇಳಿಲ್ಲ.

'ಗಿವ್ ಇಟ್ ಅಪ್' ಅಂದರೆ ಹಣ ಬಲವಿದ್ದವರು ಅನಿಲ ಸಬ್ಸಿಡಿಯನ್ನು ಬಿಟ್ಟು ಕೊಡಿ, ಅದನ್ನು ಬಿಪಿಎಲ್ ಕುಟುಂಬಗಳಿಗೆ ಪುಕ್ಕಟೆಯಾಗಿ ಕೊಡಲಾಗುವುದು ಎಂಬ ಆಂದೋಲನ ಆರಂಭಿಸಿ ಅದಕ್ಕೆ ಸರಕಾರೀ ಖರ್ಚಿನಲ್ಲಿ ಭಾರೀ ಪ್ರಚಾರ ಕೊಡಲಾಯ್ತು, 1.1 ಕೋಟಿ ಜನ ಪ್ರಧಾನಿಗಳ ಕರೆಗೆ ಓಗೊಟ್ಟರು ಅದರಿಂದ ಮತ್ತು ನೇರ ವರ್ಗಾವಣೆಯಿಮದಾಗಿ ಸರಕಾರಕ್ಕೆ ಮೊದಲ ಎರಡು ವರ್ಷಗಳಲ್ಲೇ 22,000 ಕೋಟಿ ರೂ.ಗಳ ಉಳಿತಾಯವಾಯ್ತು ಎಂದೆಲ್ಲ ಪ್ರಚಾರ ಮಾಡಲಾಯ್ತು.. ನಿಜ, ಇದು ಸರಿಯಲ್ಲ, ಹೆಚ್ಚೆಂದರೆ ಒಟ್ಟು 2000 ಕೋಟಿ ರೂ. ಕೂಡ ಉಳಿತಾಯವಾಗಿಲ್ಲ ಎಂಬ ಸಿಎಜಿ ಲೆಕ್ಕಾಚಾರವನ್ನು ಸರಕಾರ ಒಪ್ಪಲಿಲ್ಲ. ಅದೇನೇ ಇರಲಿ, ಅದು ನಿಜವಾಗಿಯೂ ಯಶಸ್ವಿಯಾಗಿದ್ದರೆ ಈ ನಿರ್ಧಾರ ಯಾಕೆ ಎಂಬ ಪ್ರಶ್ನೆ ಸಹಜ. ನಂತರ 2016-17ರಲ್ಲಿ ಹೀಗೆ ಬಿಟ್ಟು ಕೊಟ್ಟವರಲ್ಲಿ ಸುಮಾರು 1ಲಕ್ಷ ಮಂದಿ ಮತ್ತೆ ಸಬ್ಸಿಡಿ ಸ್ಕೀಮ್‌ಗೆ ಹಿಂದಿರುಗಿದ್ದಾರೆ ಎಂದೂ ವರದಿಯಾಗಿದೆ. ಪುಕ್ಕಟೆಯಾಗಿ ಅನಿಲ ಸಿಲಿಂಡರ್ ಪಡೆದ ಬಿಪಿಎಲ್ ಕುಟುಂಬಗಳವರೂ ಇನ್ನು ಮುಂದೆ ಸಬ್ಸಿಡಿ ಇಲ್ಲದ ಸಿಲಿಂಡರ್‌ಗಳನ್ನು ಪಡೆಯಬೇಕೇ? ಖರೀದಿಸಲು ಸಾಧ್ಯವೇ?

ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿ ಉಜ್ವಲ ಯೋಜನಾ(ಪಿಎಂಯುವೈ) ದ ಅನುಭವವನ್ನು ನೋಡಬಹುದು. ಮೇ 1, 2016ರಂದು ಆರಂಭವಾದ ಈ ಯೋಜನೆಯ ಅಡಿಯಲ್ಲಿ 2 ಕೋಟಿ ಬಿಪಿಎಲ್ ಮಹಿಳೆಯರಿಗೆ ಎಲ್‌ಪಿಜಿ ಸಂಪರ್ಕಗಳನ್ನು ಕೊಡಲಾಗಿದೆ. ಉತ್ತರಪ್ರದೇಶದಲ್ಲಿ ಬಿಜೆಪಿಯ ಭಾರೀ ಗೆಲುವಿನಲ್ಲಿ ಇದರ ಪಾತ್ರವೂ ಇತ್ತು ಎಂದೂ ಹೇಳಲಾಗಿದೆ. ಆದರೆ ಬಿಡಮಟ್ಟದ ತನಿಖೆಗಳ ಪ್ರಕಾರ ಈ ಸಂಪರ್ಕಗಳನ್ನು ಪಡೆದವರಲ್ಲಿ ಹೆಚ್ಚಿನವರು ಮತ್ತೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪಡೆಯಲು ಹೋಗಿಲ್ಲ, ಏಕೆಂದರೆ ಅದು ಪುಕ್ಕಟೆ ಅಲ್ಲ, ಅದನ್ನು ಕೊಳ್ಳುವ ಶಕ್ತಿ ಈ ಮಹಿಳೆಯರಿಗಿಲ್ಲ. ಪೆಟ್ರೋಲಿಯಂ ಮಂತ್ರಾಲಯದ ಅಂಕಿ-ಅಂಶಗಳೂ ಇದನ್ನು ಪುಷ್ಟೀಕರಿಸುತ್ತವೆ ಎಂದು ಸ್ಕ್ರಾಲ್.ಇನ್ ನಲ್ಲಿ ಧೀರೇಂದ್ರ ಕುಮಾರ್ ಝಾ ವರದಿ ಮಾಡಿದ್ದಾರೆ.

ಇದು ಸಬ್ಸಿಡಿ ಇದ್ದಾಗಿನ ಕತೆಯಾದರೆ, ಸಬ್ಸಿಡಿ ತೆಗೆದ ಮೇಲೆ ಈ 'ಗಿವ್ ಇಟ್ ಅಪ್', 'ಪ್ರಧಾನ ಮಂತ್ರಿ ಉಜ್ವಲ್ ಯೋಜನಾ'ದ ಅದ್ಭುತ ಸಾಧನೆಗಳ ಭವಿಷ್ಯ ಏನಾದರೇನಂತೆ, ಅ ಜಾಹಿರಾತುಗಳ ಪ್ರಯೋಜನ ಜನಗಳಿಗೆ ಸಿಗದಿದ್ದರೂ, ಆಳುವ ಪಕ್ಷಕ್ಕೆ ಸಿಕ್ಕಿಯಾಗಿದೆ,

ಇತ್ತ ಕೊಟ್ಟ ಸಬ್ಸಿಡಿಗಳಿಗಿಂತ ಹೆಚ್ಚು ಸುಂಕಗಳನ್ನು ಬಾಚಿಕೊಂಡಾಗಿದೆ.ಸಬ್ಸಿಡಿ ತೆಗೆಯುತ್ತಿದ್ದಂತೆ ಸುಂಕವನ್ನು ಹಿಂದಿನ ಮಟ್ಟಕ್ಕಾದರೂ ತರುವ ಮಾತಿಲ್ಲ. **ಈ ಮೂರು ವರ್ಷಗ ಒಳ್ಳೆಯ ದಿನಗಳಲ್ಲಿ ಕಚ್ಚಾ ತೈಲದ ಅಂತರ್‍ರಾಷ್ಟ್ರೀಯ ಬೆಲೆಗಳು 49% ಇಳಿದಿರುವಾಗಲೇ, ಎಲ್‌ಪಿಜಿ ಬೆಲಗಳು 16% ಏರಿವೆ ಎಂದು 'ಬಿಸಿನೆಸ್ ಸ್ಟಾಂಡರ್ಡ್'(ಆಗಸ್ಟ್4) ವರದಿ ಹೇಳುತ್ತದೆ.**

'ಒಳ್ಳೆಯ ದಿನಗಳು' ಎಂದರೆ ದುಬಾರಿ ಸರಕಾರೀ ಜಾಹಿರಾತುಗಳ ದಿನಗಳು

ಜಾಹಿರಾತುಗಳು ಎಂದರೆ ಬ್ರಾಂಡುಗಳು, ಕಾರ್ಪೊರೇಟ್‌ಗಳು ಬಳಕೆದಾರರ ಮನಗೆಲ್ಲಲು ಕೈಗೊಳ್ಳುವ ಕ್ರಮಗಳು ಎಂಬ ಪರಿಕಲ್ಪನೆ ಈಗಾಗಲೇ ಬದಲಾಗಿ ಸರಕಾರಗಳೂ ಮತ್ತು ಆಳುವ ವರ್ಗಗಳ ಪಕ್ಷಗಳು ಕೂಡ ಅದನ್ನು ಅನುಕರಿಸಲಾರಂಭಿಸಿರುವುದು ಇತ್ತೀಚಿನ ದಶಕಗಳ ವಿಶೇಷ ಬೆಳವಣಿಗೆ. ಈ 'ಒಳ್ಳೆಯ ದಿನ'ಗಳಲ್ಲಂತೂ ಎಲ್ಲ ಮೂಲರಚನೆಗಳ ಬೆಳವಣಿಗೆ ದರ ಕೆಳಗಿಳಿಯುತ್ತಿದ್ದರೂ ಸರಕಾರದ ಮತ್ತು ಆಳುವ ಪಕ್ಷದ ಜಾಹೀರಾತುಗಳ ವೆಚ್ಚ ವಾರ್ಷಿಕ 10%ದಷ್ಟು ಏರುತ್ತಿದೆ ಎಂದು ಹೇಳಲಾಗುತ್ತಿದೆ.

ಕೇಂದ್ರ ಸರಕಾರದ ವಿವಿಧ ಇಲಾಖೆಗಳು ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ ಪರವಾಗಿ ಜಾಹಿರಾತುಗಳನ್ನು ಪ್ರಕಟಿಸುವ ಡಿಎವಿಪಿ 2016-17ರಲ್ಲಿ 1285.77 ಕೋಟಿ ರೂ. ಖರ್ಚು ಮಾಡಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು 8.2% ಹೆಚ್ಚಳ ದಾಖಲಿಸಿದೆ.

ರಾಜ್ಯ ಸರಕಾರಗಳ ಜಾಹೀರಾತು ವೆಚ್ಚಗಳೂ ಏರುತ್ತಿವೆ- ಅದರಲ್ಲೂ ಕೇಂದ್ರದ ಆಳುವ ಪಕ್ಷದ ನೇತೃತ್ವದ ರಾಜ್ಯಸರಕಾರಗಳದ್ದು. ಇದರಲ್ಲಿ ಪ್ರಧಾನ ಮಂತ್ರಿಗಳ ಕೊಡುಗೆಯನ್ನು ಪ್ರಚಾರ ಮಾಡುವ ವಿಶೇಷ ಜಾಹಿರಾತುಗಳೂ ಸೇರಿರುತ್ತವೆ.

ಮಧ್ಯಪ್ರದೇಶದ ಸರಕಾರದ ಜಾಹಿರಾತು ವೆಚ್ಚ ಕಳೆದ ಮೂರು ವರ್ಷಗಳಲ್ಲಿ ಸುಮಾರು 800 ಕೋಟಿ ರೂ. ಎನ್ನಲಾಗಿದೆ.

ಮಹಾರಾಷ್ಟ್ರದ್ದೂ ಸುಮಾರಾಗಿ ಇದೇ ಪ್ರಮಾಣದಲ್ಲಿದೆ. ಕೇವಲ ಪ್ರಧಾನ ಮಂತ್ರಿಗಳು ಪೋಟೋಗಳಿದ್ದ ಮೂಲರಚನೆಗಳ ಉದ್ಘಾಟನೆ ಇತ್ಯಾದಿಗಳ ಜಾಹಿರಾತುಗಳಿಗಾಗಿಯೇ 8ಕೋಟಿ ರೂ. ಖರ್ಚು ಮಾಡಲಾಗಿದೆಯಂತೆ.

ರಾಜಸ್ಥಾನ ಸರಕಾರ ಪ್ರವಾಸೋದ್ಯಮ ಒಂದರ ಹೆಸರಿನಲ್ಲೇ 100 ಕೋಟಿರೂ.ಗಿಂತ ಹೆಚ್ಚು ಜಾಹೀರಾತುಗಳಿಗಾಗಿ ಎತ್ತಿಟ್ಟಿದೆಯಂತೆ.


ಉತ್ತರ ಪ್ರದೇಶದಲ್ಲಿ ಇತ್ತೀಚಿನ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು 5500 ಕೋಟಿ ರೂ.ವೆಚ್ಚ ಮಾಡಿರುವುದಾಗಿ ಅಂದಾಜು ಮಾಡಲಾಗಿದೆ. ಇದರಲ್ಲಿ 1000 ಕೋಟಿ ರೂ.ಗಳನ್ನು ಕೇವಲ ಮತದಾರರನ್ನು ಆಕರ್ಷಿಸಲು ಖರ್ಚಾಗಿದೆಯಂತೆ.

ಬಿಜೆಪಿಯೇತರ ಸರಕಾರಗಳಲ್ಲಿ ದಿಲ್ಲಿಯ ಎಎಪಿ ಸರಕಾರ ಈ ದಿಸೆಯಲ್ಲಿ 'ಉತ್ತಮ ಸ್ಪರ್ಧೆ' ನೀಡಿದೆ ಎಂದು ಅಂಕಿ-ಅಂಶಗಳು ಹೇಳುತ್ತವೆ.

'ಜನಗಳನ್ನು ತಲುಪಲು' ಸರಕಾರಗಳು ಮತ್ತು ರಾಜಕೀಯ ಪಕ್ಷಗಳು ಇಷ್ಟೊಂದು ಖರ್ಚು ಮಾಡುವುದರಲ್ಲಿ ತಪ್ಪೇನು ಎಂದು ಮಾಧ್ಯಮಗಳು ಮತ್ತು ಜಾಹಿರಾತು ಸಂಸ್ಥೆಗಳು ಕೇಳುತ್ತಿವೆ. ಫಲಾನುಭವಿಗಳ ಸಮರ್ಥನೆ ಸಹಜ ತಾನೇ?

ಕಾಂಗ್ರೆಸ್‌ನ ರಾಜ್ಯ ಸಭಾ ಸದಸ್ಯ ಅಹಮದ್ ಪಟೇಲ್ ಗುಜರಾತಿನಿಂದ ಮರು ಆಯ್ಕೆಗೊಳ್ಳದಂತೆ ಮಾಡಲು ಅಲ್ಲಿನ ಕಾಂಗ್ರೆಸ್ ಶಾಸಕರನ್ನು ಬಿಜೆಪಿ ಖರೀದಿಸುವ ಪ್ರಯತ್ನ ನಡೆಸುತ್ತಿದೆ ಎಂದು ಆಪಾದಿಸಿ ಗುಜರಾತಿನ ಶಾಸಕರನ್ನು ಕರ್ನಾಟಕದ ರೆಸಾರ್ಟ್ ಒಂದಕ್ಕೆ ಸಾಗಿಸಲಾಯಿತು. ಒಂದೆರಡು ದಿನಗಳ ನಂತರ ಇದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಕರ್ನಾಟಕದ ಮಂತ್ರಿಯ ಮನೆಯ ಮೇಲೆ ಮತ್ತು ರೆಸಾರ್ಟ್ ಮೇಲೆ ಆದಾಯ ತೆರಿಗೆ ದಾಳಿ ನಡೆದಿದೆ. ಇದನ್ನು ದುರುದ್ದೇಶಪೂರ್ವಕವಾಗಿಯೇ ಮಾಡಲಾಗಿದೆ ಎಂದು ಕಾಂಗ್ರೆಸ್ ಆಪಾದಿಸಿದೆ

-ಸುದ್ದಿ



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಕೋಮುವಾದಿ ಅಪರಾಧದ ದಾಖಲೆಯಿದ್ದರೆ ಚುನಾವಣೆ ಗೆಲ್ಲುವ ಸಾಧ್ಯತೆ ನಾಲ್ಕು ಪಟ್ಟು ಹೆಚ್ಚು


-ಒಳ್ಳೆಯ ದಿನಗಳ ಮತ್ತೊಂದು ಲಕ್ಷಣ

ಹೌದು, ಇದು ಈಗ ಬಂದಿರುವ ಒಳ್ಳೆಯ ದಿನಗಳ ಮುಖ್ಯ ಲಕ್ಷಣ ಎಂದೂ ಹೇಳಬಹುದೇನೋ. ಹಿಂದುಸ್ತಾನ್ ಟೈಮ್ಸ್ ಕಳೆದ ಐದು ವರ್ಷಗಳಲ್ಲಿ ನಡೆದ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳ 50,000 ಅಭ್ಯರ್ಥಿಗಳ ದಾಖಲೆಗಳನ್ನು ವಿಶ್ಲೇಷಿಸಿದಾಗ ಕಂಡು ಬಂದ ಸಂಗತಿ ಇದು:

* 41,488 ಅಭ್ಯರ್ಥಿಗಳ ಮೇಲೆ ಯಾವುದೇ ಕ್ರಿಮಿನಲ್ ಕೇಸ್ ಇರಲಿಲ್ಲ. ಅವರಲ್ಲಿ ಗೆದ್ದವರ ಸಂಖ್ಯೆ 2550, ಅಂದರೆ 6%.
* 8649 ಅಭ್ಯರ್ಥಿಗಳ ಮೇಲೆ ಕೇಸುಗಳಿದ್ದವು, ಆದರೆ ಅವು ಕೋಮುವಾದಕ್ಕೆ ಸಂಬಂಧಪಟ್ಟದ್ದಲ್ಲ. ಇವರಲ್ಲಿ ಗೆದ್ದವರ ಸಂಖ್ಯೆ 1201 ಅಂದರೆ 14%.
* 187 ಅಭ್ಯರ್ಥಿಗಳ ಮೇಲೆ ಕೋಮುವಾದಿ ಅಪರಾಧಗಳ ಕೇಸುಗಳಿದ್ದವು. ಇವರಲ್ಲಿ ಗೆದ್ದವರ ಸಂಖ್ಯೆ 53, ಅಂದರೆ 28%!

ನಿಜ, ಹಿಂದುಸ್ತಾನ್ ಟೈಮ್ಸ್ ವಿಶ್ಲೇಷಣೆಯಲ್ಲಿ ಕೋಮುವಾದಿಯಲ್ಲದ ಕ್ರಿಮಿನಲ್ ಕೇಸುಗಳಿದ್ದವರ ಪ್ರಮಾಣ 17%, ಕೋಮುವಾದಿ ಕೇಸುಗಳಿದ್ದವರ ಪ್ರಮಾಣ ಕೇವಲ 0.4%. ಬಹುಶಃ ಇದರಿಂದ ತುಸು ಸಮಾಧಾನ ಪಟ್ಟುಕೊಳ್ಳಬಹುದೇನೋ. ಆದರೆ ಕೋಮುವಾದಿ ಹಿನ್ನೆಲೆಯ 'ಯಶಸ್ಸಿ'ನ ಹಿನ್ನೆಲೆಯಲ್ಲಿ ಇದು ಇನ್ನೆಷ್ಟು ದಿನ ಹೀಗೆ ಉಳಿದೀತು ಎಂದು ಪ್ರಜಾಪ್ರಭುತ್ವವಾದಿಗಳಿಗಿರುವ ಸಹಜ ಆತಂಕ.

ಹಣಕಾಸು ಮಂತ್ರಿಗಳು ಜುಲೈ 25ರಂದು ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ರಿಝರ್ವ್ ಬ್ಯಾಂಕ್ ರದ್ದಾದ ನೋಟುಗಳನ್ನು ತಾಳೆ ಹಾಕುವ ಪ್ರಕ್ರಿಯೆಯಲ್ಲಿದೆ ಎಂದರು....ತಂದೊಪ್ಪಿಸಿದ ನೋಟುಗಳ ಎಣಿಕೆಯಲ್ಲಿ ಹಿಂದೆ ಮಾಡಿದ ತಪ್ಪುಗಳಿಂದಾಗಿ ಮತ್ತೆ ಲೆಕ್ಕ ಮಾಡುತ್ತಿರಬಹುದೇ? ಆದರೆ ಯಾವುದರ ಮರು ಎಣಿಕೆ?.... ಅಥವ ಹಿಂದೆ ಬಂದ ನೋಟುಗಳ ಸಂಖ್ಯೆ ಹೊರಡಿಸಿದ ನೋಟುಗಳಗಿಂತ ಹೆಚ್ಚಿವೆಯೇ? ಹಾಗಿದ್ದರೆ, ಅಪಾರದರ್ಶಕತೆ ಅಪಾರ ಮುಜುಗರ ಮತ್ತು ವಿಶ್ವಸನೀಯತೆ ಕಳಕೊಳ್ಳುವುದನ್ನು ತಪ್ಪಿಸಲಿಕ್ಕಾಗಿ ಮಾತ್ರವೇ? ಆದರೆ ಎಂದಿನ ವರೆಗೆ?-ಅರ್ಥಶಾಸ್ತ್ರಜ್ಞ ಪ್ರೊ. ಅರುಣ್ ಕುಮಾರ್ ಲೇಖನದಲ್ಲಿ, ದಿ ಇಂಡಿಯನ್ ಎಕ್ಸ್‌ಪ್ರೆಸ್, ಆಗಸ್ಟ್ 1



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ



ವರದಕ್ಷಿಣೆ ದೌರ್ಜನ್ಯ ಸೆಕ್ಶನ್ 498 A ಸುಪ್ರೀಂ ಆದೇಶ : ಹಿಮ್ಮುಖ ಚಲನೆ

ವಿಮಲಾ ಕೆ.ಎಸ್.

ದೇಶದ ಸರ್ವೋಚ್ಚ ನ್ಯಾಯಾಲಯ ಮತ್ತೆ 498 A (ಎ) ಯ ಕುರಿತು ಆದೇಶವನ್ನು ಹೊರಡಿಸಿದೆ. ಅದರ ಪ್ರಕಾರ ಮಹಿಳೆಯರು ತಮ್ಮ ಗಂಡ ಮತ್ತವನ ಸಂಬಂದಿಕರ ಮೇಲೆ ವರದಕ್ಷಿಣೆ ನಿಷೇಧ ಕಾನೂನು ಅಡಿಯಲ್ಲಿ ಸುಳ್ಳು ಮೊಕದ್ದಮೆಗಳನ್ನು ದಾಖಲಿಸುತ್ತಾರೆ ಹಾಗಾಗಿ ಅವರು ಸುಳ್ಳರು ಎಂಬರ್ಥದ ಆದೇಶವನ್ನು ರಮೇಶ್ ಕುಮಾರ್ ವಿ ಅವರ ಪ್ರಕರಣದಲ್ಲಿ ನೀಡಿದೆ. ಅಲ್ಲದೇ ಈ ಹಿಂದೆ ಈ ಕಾನೂನನ್ನು ಸಡಿಲಗೊಳಿಸುವ ರೀತಿಯಲ್ಲಿ ಕೊಟ್ಟ ಆದೇಶಗಳ ಮುಂದುವರೆದ ಭಾಗವಾಗಿ ಒಂದು ನಾಗರಿಕ ಸಮಿತಿಗೆ ವರದಕ್ಷಿಣೆ ಪ್ರಕರಣಗಳ ಪ್ರಾಥಮಿಕ ತನಿಖೆಗೆ ಅವಕಾಶ ಕಲ್ಪಿಸಿದೆ. ಇದನ್ನು ಒಪ್ಪಲಾಗದು ಎಂದು ದೇಶದ ಹಲವು ಮಹಿಳಾ ಸಂಘಟನೆಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿವೆ. ಇದು ಮಹಿಳೆಯರ ಕುರಿತಂತೆ ನ್ಯಾಯಾಲಯು ಈ ಹಿಂದೆಯೂ ಹೊಂದಿದ್ದ ಧೋರಣೆಯ ಮುಂದುವರೆದ ಮತ್ತು ಇನ್ನಷ್ಟು ಹಿಮ್ಮುಖ ಚಲನೆಯ ಸೂಚನೆಯಾಗಿದೆ. ದೇಶದ ಬಹುಪಾಲು ಹೆಣ್ಣು ಮಕ್ಕಳು ತಮ್ಮ ದಿನ ನಿತ್ಯದ ಜೀವನದಲ್ಲಿ ಪ್ರತಿದಿನ ವರದಕ್ಷಿಣೆ ಕಿರುಕುಳವನ್ನು ಎದುರಿಸುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಗಂಡ ಮತ್ತು ಆತನ ಮನೆಯವರಿಂದ ಮಹಿಳೆಯರು ಎದುರಿಸುವ ಈ ಕಿರುಕುಳವನ್ನು ನ್ಯಾಯಾಲಯ ಪರಿಗಣನೆಗೆ ತೆಗೆದುಕೊಂಡಿಲ್ಲವೆಂದೇ ಅರ್ಥ.

ಈಗಾಗಲೇ ನಡೆದಿರುವ ಹಲವಾರು ಸಮೀಕ್ಷೆಗಳಲ್ಲದೆ ಫ್ಯಾಮಿಲಿ ಹೆಲ್ತ್ ಸರ್ವೇ–3 ಪ್ರಕಟಿಸಿದಂತೆ ಮೂವರಲ್ಲಿ ಒಬ್ಬ ಮಹಿಳೆ ಮಾನಸಿಕ, ದೈಹಿಕ ಮತ್ತು ವಾಚಿಕ ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ಅಲ್ಲದೇ ಈ ದೇಶದಲ್ಲಿ ಮಹಿಳೆಯರ ಮಧ್ಯೆ ಕೆಲಸ ಮಾಡುವ ಮಹಿಳಾ ಮತ್ತು ಮಹಿಳಾ–ಪರ ಸಂಘಟನೆಗಳ ಅನುಭವವೂ ಇದೇ ಆಗಿದೆ. ಕೌಟುಂಬಕ ಹಿಂಸೆಗೆ ಒಳಗಾಗುವ ಹೆಣ್ಣುಮಕ್ಕಳು ಮಾನಸಿಕ ಮತ್ತು ದೈಹಿಕವಾಗಿ ಕುಗ್ಗುತ್ತಾರೆ. ಅವರ ಎಲ್ಲ ಶಕ್ತಿ ಸಾಮರ್ಥ್ಯಗಳು ಕುಂದುತ್ತವೆ ಎಂಬುದು ಅನುಭವದಲ್ಲಿ ಸಿಕ್ಕ ಮಾಹಿತಿಗಳು. ರಾಷ್ಟ್ರೀಯ ಅಪರಾಧಗಳ ಅಂಕಿ ಸಂಖ್ಯೆಗಳ ಬ್ಯೂರೋ ಹೇಳುವಂತೆ 2015 ರಲ್ಲಿ 1,13,403 ಪ್ರಕರಣಗಳು 498 ಏ ಅಡಿಯಲ್ಲಿ ದಾಖಲಾಗಿ 89.4% ಚಾರ್ಜ್‌ಷೀಟ್ ಆಗಿದೆ. ಆದರೆ ಈಗಲೂ ದಾಖಲೆಗಳು ಹೇಳುತ್ತವೆ ಶಿಕ್ಷೆಯ ಪ್ರಮಾಣ 24–27% ಗಿಂತ ಹೆಚ್ಚಿಲ್ಲ! ಲಭ್ಯವಾದ ವರದಿಗಳಂತೆ 2013 ರ ಅಂಕಿ ಸಂಖ್ಯೆಗಳು ಹೀಗಿವೆ. ವರದಿಯಾದ ಪ್ರಕರಣಗಳು 4,66,079 ಶಿಕ್ಷೆಯಾಗಿದ್ದು 7,258! 2012 ರಲ್ಲಿ 3,72,706 ರಲ್ಲಿ ಸಂಭವನೀಯ ಬಿಡುಗಡೆ 3,17,000 ಎಂದಿತ್ತು.

ಸರ್ವೋಚ್ಚ ನ್ಯಾಯಾಲಯ ಅಥವಾ ಯಾವುದೇ ಕೆಳ ನ್ಯಾಯಾಲಯಗಳು ಹೀಗೆ ಶಿಕ್ಷೆಯಾಗದ ಅಥವಾ ಸಂಭವನೀಯ ಬಿಡುಗಡೆಯ ಕಾರಣಗಳನ್ನು ಕೂಲಂಕುಷವಾಗಿ ಪರಿಶೀಲಿಸಿಲ್ಲ. ಬಿಡುಗಡೆಯಾಗಿದೆ ಅಥವಾ ಶಿಕ್ಷೆಯಾಗಲು ಬೇಕಾದ ದಾಖಲೆಗಳು ಸಿಗಲಿಲ್ಲವೆಂದರೆ ತನಿಖಾ ಮಟ್ಟದಲ್ಲಿ ಆಗಿರಬಹುದಾದ ವ್ಯತ್ಯಯಗಳನ್ನು ಪರಿಶೀಲಿಸಿ ಸರಿಪಡಿಸುವ ಮತ್ತು ಅನಾದಿ ಕಾಲದಿಂದ ಇರುವ ಹೆಣ್ಣಿನ ಬಗೆಗಿನ ಅನಾದರ ಮತ್ತು ಭೋಗವಸ್ತುವಿನ ಮನಃಸ್ಥಿತಿಯ ಬಗ್ಗೆ ವಿವಿಧ ಹಂತದ ಅಧಿಕಾರ ವರ್ಗಕ್ಕೆ ಸರಿ ಪಡಿಸುವ ಒತ್ತಡ ತರುವ ಆದೇಶ ನಿರ್ಮಿಸುವ ಬದಲು, ಗಾಯದ ಮೇಲೆ ಬರೆ ಎಳೆದಂತೆ ಮತ್ತೆ ಮತ್ತೆ ಮಹಿಳೆಯರ ಹಿತಾಸಕ್ತಿಗಳಿಗೆ ಮಾರಕವಾಗುವ ಆದೇಶಗಳನ್ನೇ ನೀಡುತ್ತಿದೆ. ದಾಖಲಾಗುತ್ತಿರುವ ಪ್ರಕರಣಗಳು ಕೋರ್ಟಿನ ಪ್ರಕಾರ "ದೂರು ದಾಖಲು ಕ್ಷುಲ್ಲಕ ವಿಷಯಗಳಿಗೆ ಸಂಬಂಧಿಸಿದಂತೆ ಆ ಕ್ಷಣದ ಆವೇಶದ ಪ್ರತಿಕ್ರಿಯೆ ಯಾಗಿರುತ್ತದೆ' ಅದಕ್ಕೆ 2005 ಮತ್ತು 2009 ರ ಕೆಲವು ಪ್ರಕರಣಗಳಲ್ಲಿ ಎನ್.ಸಿ.ಆರ್.ಬಿ ಕೊಟ್ಟ ವರದಿಯಂತೆ ಪೋಲಿಸರು ಕೆಲವು ಅತಿ ಸಣ್ಣ ಪ್ರಮಾಣದಲ್ಲಿ ಕಾನೂನಾತ್ಮಕ ದೋಷಗಳಿಂದಾಗಿ ಅಥವಾ ಮಾಹಿತಿಯ ಕೊರತೆಯಿಂದಾಗಿ ದಾಖಲಾದ ಪ್ರಕರಣಗಳನ್ನು ಉಲ್ಲೇಖಿಸಿ ದೊಡ್ಡ ಪ್ರಮಾಣದಲ್ಲಿ ದುರ್ಬಳಕೆಯಾಗುತ್ತಿದೆ ಎಂದು ಅಭಿಪ್ರಾಯ ಪಟ್ಟಿದೆ. 2005 ರಲ್ಲಿ ಈ ಪ್ರಮಾಣ 8.78% ಆದರೆ 2009 ರಲ್ಲಿ ಇದು 7.08%. ಈ ಪ್ರಮಾಣಗಳು ಬಹಳ ಸಂದರ್ಭಗಳಲ್ಲಿ ಕೌಟುಂಬಿಕ ಹಿಂಸಾಚಾರಕ್ಕೆ ಸಂಬಂಧಿಸಿದವುಗಳೇ ಆಗಿರುತ್ತವೆ. ಇವೂ ಕೂಡ ಐ.ಪಿ.ಸಿ.ಸೆಕ್ಷನ್ ಗಳಲ್ಲಿ ಇತರ ವಿಷಯಗಳಲ್ಲಿ ದುರ್ಬಳಕೆ ಅಥವಾ ಸುಳ್ಳೆಂದು ಪರಿಗಣಿಸಲ್ಪಡುವ ಪ್ರಕರಣಗಳಿಗಿಂತ ಹೆಚ್ಚಿನದವೇನೂ ಅಲ್ಲ. 2012 ರಲ್ಲಿ 14.4%, 2013 ರಲ್ಲಿ 15.6% ಶಿಕ್ಷೆಯಾಗಿರುವುದನ್ನೂ ನ್ಯಾಯಾಲಯ ಉಲ್ಲೇಖಿಸಿದೆ.

ಈ ಪ್ರಮಾಣ ಹೆಚ್ಚಬೇಕು, ತಪ್ಪಿತಸ್ಥರು ಬಹಳ ಸುಲಭವಾಗಿ ಅಧಿಕಾರ, ಸಮಾಜದಲ್ಲಿರುವ ಪುರುಷ ಪ್ರಧಾನ ಧೋರಣೆ, ಹಣ , ಹೆಣ್ಣುಮಕ್ಕಳಿಗೆ ಇರುವ ಸಾಮಾಜಿಕ ಕಳಂಕಗಳ ಭಯಗಳನ್ನು ಬಳಸಿ ತಪ್ಪಿಸಿಕೊಳ್ಳುತ್ತದ್ದಾರೆಂದು ಅನುಭವದ ಆಧಾರದಲ್ಲಿ, ಮಹಿಳಾ ಸಂಘಟನೆಗಳು ಪ್ರತಿಪಾದಿಸುತ್ತಿದ್ದರೆ ಸರ್ವೋಚ್ಚ ನ್ಯಾಯಾಲಯು ಇದನ್ನೇ ಸುಳ್ಳು ಪ್ರಕರಣಗಳೆಂದು ಅರ್ಥೈಸುತ್ತಿದೆ.! ಬೇಕಷ್ಟು ಸಂದರ್ಭಗಳಲ್ಲಿ ತನಿಖೆ ಸಮರ್ಪಕವಾಗಿ ನಡೆಯದ, ಸಾಕ್ಷಿಗಳು ಹೋಸ್ಟೈಲ್ ಆಗುವ, ಸಾಂದರ್ಭಿಕ ಸಾಕ್ಷಿಗಳು ಸಿಗದ, ದಾಖಲೆಗಳು ನಾಶವಾಗುವ ಹೀಗೆ ಹತ್ತು ಹಲವು ತೊಡಕುಗಳಿರುತ್ತವೆ. ಮನೆಯ ನಾಲ್ಕು ಗೋಡೆಯ ಒಳಗೆ ನಡೆಯುವ ಕೌಟುಂಬಿಕ ಹಿಂಸೆಗೆ ಎಲ್ಲಿಂದ ದಾಖಲೆಗಳನ್ನು ಇಡುವುದು. ಕೆಲವೊಮ್ಮೆ ಸಹಿಸ ಬೇಕಿಲ್ಲ ತಾನು ಎಂದು ಯಾವುದಾದರೂ ಸಾಕ್ಷಿಗಳನ್ನು ಇಟ್ಟುಕೊಂಡಳೆಂದರೆ ಅವಳಿಗೆ ಕುಟುಂಬದ ಹಿತ ಮುಖ್ಯವಿರಲಿಲ್ಲ. ಅದಕ್ಕೆ ಸಾಕ್ಷಿ ಸಂಗ್ರಹಿಸಿಟ್ಟುಕೊಂಡಿದ್ದಳು ನೋಡಿ ಎಂಬ ಮೂದಲಿಕೆ ಗ್ಯಾರಂಟಿ. ಕೊನೆಗೂ ಅವಳೇ ತಾನೇ ಕುಟುಂಬದ ಮರ್ಯಾದೆ ರಕ್ಷಿಸಬೇಕಾದವಳು.

ನ್ಯಾಯಾಲಯ ಬಹಳ ಸ್ಪಷ್ಟವಾಗಿ ಪೋಲೀಸರಿಗೆ ಆದೇಶ ನೀಡಿದೆ. ಕಣ್ಣಿಗೆ ಕಾಣುವ ದೈಹಿಕ ಹಿಂಸೆಯ ಗುರುತು ಅಥವಾ ಸಾವು ಸಂಭವಿಸಿದಲ್ಲಿ ಮಾತ್ರ ಕ್ರಮ ಕೈಗೊಳ್ಳುವಂತೆ ನೀಡಿದ ಆದೇಶವದು. ಮನುಷ್ಯರ ವ್ಯಕ್ತಿತ್ವವನ್ನೇ ಹಾಳುಗೆಡಹಬಹುದಾದ ಮಾನಸಿಕ ಹಿಂಸೆಯ ಕ್ರೌರ್ಯವನ್ನು ನ್ಯಾಯಾಲಯ ಪರಿಗಣಿಸಿಯೇ ಇಲ್ಲ. ಹಿಂದೆಯೇ ಇಂಥಹ ಆದೇಶಗಳನ್ನು ನೀಡಿ ಎಫ್.ಐ.ಆರ್ ಹಾಕಲೂ ಕೂಡ ಡಿ.ಸಿ.ಪಿ, ಎ.ಸಿ.ಪಿ ಮಟ್ಟ ದ ಅಧಿಕಾರಿಗಳ ಲಿಖಿತ ಆದೇಶ ಪಡೆಯುವ ಮತ್ತು ನ್ಯಾಯಾಲಯದಲ್ಲಿ ಹಾಜರು ಪಡಿಸಿ ಬಂಧನಕ್ಕೊಳ ಪಡಿಸುವ ಮುನ್ನ ಸರ್ವ ರೀತಿಯ ಖಚಿತತೆಯನ್ನು ಪಡೆದುಕೊಳ್ಳಬೇಕು. ತಪ್ಪಿದಲ್ಲಿ ತನಿಖಾದಿಕಾರಿ ಮತ್ತು ಮ್ಯಾಜಿಸ್ಟ್ರೇಟ್ ಕೂಡ ಮೇಲಿನ ಹಂತದ ಅಧಿಕಾರದಿಂದ ದಂಡನೆಗೆ ಸೂಕ್ತ ಇಲಾಖಾ ಕ್ರಮ ಎದುರಿಸಬೇಕೆಂದು ಆದೇಶವಿತ್ತು. ಈಗ ಇನ್ನಷ್ಟು ಮುಂದುವರೆದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸ್ಥಳೀಯವಾಗಿ ಅರೆ ಕಾನೂನು ತಜ್ಞರು/ಸಾಮಾಜಿಕ ಕಾರ್ಯಕರ್ತರು/ನಿವೃತ್ತ ಅಧಿಕಾರಿಗಳು/ಸೇವೆಯಲ್ಲಿರುವ ಅಧಕಾರಿಗಳ ಹೆಂಡತಿಯರು ಮುಂತಾದವರನ್ನು ಆಯ್ಕೆ ಮಾಡಿ ಸಮಿತಿಗಳನ್ನು ರಚಿಸುವ ಮತ್ತು ಪ್ರಾಥಮಿಕ ಹಂತದ ತನಿಖೆಯನ್ನು ಅವರಿಗೊಪ್ಪಿಸುವ ಆದೇಶ ನೀಡಿದೆ. ದೂರು ಸ್ವೀಕರಿಸಿದ ಒಂದು ತಿಂಗಳೊಳಗೆ ತನ್ನ ಅನುಭವಕ್ಕನುಗುಣವಾಗಿ ವರದಿ ನೀಡುವಂತೆ ಆದೇಶಿಸಿ ಮೂರು ಜನರ ಸಮಿತಿ ರಚನೆಗೆ ಆದೇಶ ನೀಡಿದೆ. ತನಿಖಾದಿಕಾರಿಯನ್ನು ಅದೇಶ ಪ್ರಕಟವಾದ ಒಂದು ತಿಂಗಳೊಳಗೆ ಮತ್ತು ಅವರಿಗೆ ಸೂಕ್ತ ತರಬೇತಿಯನ್ನು ಈ ದಿನದಿಂದ 4 ತಿಂಗಳಿನೊಳಗೆ ನೀಡಬೇಕು.! ಈ ಎಲ್ಲವೂ ಐ.ಪಿ.ಸಿ 498 ಕಲಮಿಗೆ ಸಂಪೂರ್ಣ ವ್ಯತಿರಿಕ್ತವಾಗಿದ್ದು ಅದು ಸರಿ ಹೋಗಬೇಕು.

ಈಗಾಗಲೇ ಲಲಿತ ಕುಮಾರಿ ಪ್ರಕರಣದಲ್ಲಿ ಬಂದ ಆದೇಶಗಳನ್ವಯ ಪೋಲೀಸರು ಪ್ರಾಥಮಿಕ ತನಿಖೆ ನಡೆಸದೇ ಪ್ರಕರಣ ದಾಖಲಿಸಿಕೊಳ್ಳುತ್ತಿಲ್ಲ. ಅಲ್ಲದೇ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಗಳ ಕುರಿತು ರಚಿಸಿರುವ ಸೆಲ್ ಗಳು ಮೀಡಿಯೇಷನ್ ಗಳನ್ನು ಮಾಡುವ ಪರಸ್ಪರರಲ್ಲಿರುವ ಉಂಟಾಗಿರುವ ಬಿನ್ನಾಭಿಪ್ರಾಯಗಳನ್ನು ಸರಿಪಡಿಸುವ ಕೆಲಸ ನಡೆಸುತ್ತಿವೆ. ಅದಕ್ಕೆ 90 ದಿನಗಳ ಅವಕಾಶವನ್ನೂ ನೀಡಲಾಗಿದೆ. ಈಗ ರಚಿಸಲು ಸೂಚಿಸಿರುವ ಕೌಟುಂಬಿಕ ಸಮಿತಿಗಳು ಯಾವುದೇ ರೀತಿಯಲ್ಲಿಯೂ ಈ ತೆರನ ತನಿಖೆಗಳನ್ನು ನಡೆಸುವ ಕ್ರಿಮಿನಲ್ ಪ್ರಕರಣಗಳನ್ನು ನಡೆಸುವ ಅರ್ಹತೆಗಳನ್ನು ಹೊಂದಿರುವುದಿಲ್ಲ. ಹಾಗಾಗಿ ನ್ಯಾಯಾಲಯದ ಈ ಆದೇಶ ನ್ಯಾಯಯುತವಲ್ಲ. ಈಗಾಗಲೇ ಧ್ವನಿ ಅಡಗಿಸಿಕೊಂಡು ಕುಳಿತ ಲಕ್ಷಾಂತರ ಹೆಣ್ಣುಮಕ್ಕಳನ್ನು ಮತ್ತಿಷ್ಟು ಜಂಗಲ್ ರಾಜ್ ಗೆ ತಳ್ಳುವ ಪ್ರಕ್ರಿಯೆ ಇದಾಗಬಹುದಾಗಿದೆ. ಈ ಸಮಿತಿಗಳು ಕಾಂಗರೂ ನ್ಯಾಯಗಳನ್ನು ಕೊಡುವ, ಅಥವಾ ಕಾಫ್ ಪಂಚಾಯತ್ ಗಳಂತೆ ಪರಿವರ್ತಿತವಾಗುವ ಎಲ್ಲ ಸಾಧ್ಯತೆಗಳಿದ್ದು ಇದು ಸಾಧುವಲ್ಲ.

ಐ.ಪಿ.ಸಿ 498 ಏ ಕುಟುಂಬದೊಳಗೆ ಮಹಿಳೆಯರು ಎದುರಿಸುವ ಹೀನಾಯ ಸ್ಥಿತಿ, ಕ್ರೌರ್ಯಗಳನ್ನು ಗುರುತಿಸುವ ಪ್ರಬಲವಾದ ಸಾಧನವಾಗಿತ್ತು. ಅಂತಹ ದೌರ್ಜನ್ಯ ಎಸಗುವವರಿಗೆ ಶಿಕ್ಷೆ ವಿಧಿಸುವ ಅಸ್ತ್ರವಾಗಿತ್ತು. ಈ ಸೆಕ್ಷನ್ ನ್ನು ಮಹಿಳಾ ಸಂಘಟನೆಗಳು ಹೋರಾಟ ನಡೆಸಿ ಸೇರ್ಪಡೆ ಮಾಡಲಾದದ್ದು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬೇಕು.

ಯಾವುದೇ ಮಹಿಳೆಯೂ ಆವೇಶದಲ್ಲಿ ಆಕ್ರೋಶದಲ್ಲಿ 498ರ ಅಡಿಯಲ್ಲಿ ಪ್ರಕರಣ ದಾಖಲಿಸುವುದಿಲ್ಲ. ತಾಳಿ ತಾಳಿ ಕೊನೆಗೊಮ್ಮೆ ಸಹಿಸಲಸಾಧ್ಯವಾದಾಗಲಷ್ಟೇ ನಾಲ್ಕು ಗೋಡೆಯಿಂದಾಚೆ ಕಾಲಿಡುತ್ತಾಳೆ. ಇದು ಭಾರತದ ಮಹಿಳೆಯರು ಪಾಲಿಸಿಕೊಂಡು ಬರುತ್ತಿರುವ ಕುಟುಂಬ ಧರ್ಮ ಅಘೋಷಿತ ಕಟ್ಟಳೆ. ಇದು ಹಲವು ಸಮೀಕ್ಷೆಗಳಿಂದ ಮಹಿಳಾ ಆಯೋಗವೂ ನಡೆಸಿದ ಸಮೀಕ್ಷೆಗಳಿಂದ ಧೃಢಪಟ್ಟಿರುವ ಅಂಶಗಳು. ಹಾಗಾಗಿ ಕೇವಲ ಮೇಲ್ಪದರದ ದೃಷ್ಟಿಕೋನ ಮತ್ತು ಪುರುಷ ಕೇಂದ್ರಿತ ಆಲೋಚನಾ ಕ್ರಮ ಇಂಥಹ ಆದೇಶಗಳನ್ನು ನೀಡಬಹುದೇ ಹೊರತೂ ಇದು ಸಮಾಜದ ಒಟ್ಟು ಪ್ರಗತಿಯ ದಾರಿಗೆ ಸಹಾಯಕವಲ್ಲ. ಈ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯು ಈ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಮಹಿಳಾ ಸಂಘಟನೆಗಳು ಆಗ್ರಹಿಸಿವೆ. ●

ಬೀದಿಬದಿ ವ್ಯಾಪಾರಸ್ಥರ ಕಾನೂನುಬದ್ಧ ಹಕ್ಕುಗಳನ್ನು ರಕ್ಷಿಸಿರಿ... ಪುಟ 4 ರಿಂದ

ಹಿಂದಿನ ತೀರ್ಮಾನದ ಬಗ್ಗೆ ಚಕಾರ ಶಬ್ದವೆತ್ತದೆ, ವಿನಾಃ ಕಾರಣ ಚರ್ಚೆ ನಡೆಸಿತು. ಬಳಿಕ ಜುಲೈ 26ಕ್ಕೆ ಏಕಾಏಕಿಯಾಗಿ ಬೀದಿಬದಿ ವ್ಯಾಪಾರಸ್ಥರ ಮೇಲೆ ಧಾಳಿ ನಡೆಸಿರುವುದು ತೀರಾ ಖಂಡನೀಯವಾಗಿದೆ. ನಗರದ ಪ್ರತಿಯೊಂದು ಸಮಸ್ಯೆಗಳಿಗೆ ಬಡಪಾಯಿ ಬೀದಿಬದಿ ವ್ಯಾಪಾರಸ್ಥರೇ ಕಾರಣ ಎಂಬಂತೆ ವಿನಾಃ ಕಾರಣ ಆರೋಪ ಮಾಡುವ ಮನಪಾ, ನಗರದ ಅನೇಕ ರಸ್ತೆಗಳ ಜಾಗಗಳನ್ನು ಅತಿಕ್ರಮಿಸಿ ರಸ್ತೆಯಲ್ಲೇ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿರುವ ಅನಧಿಕೃತ ಕಟ್ಟಡಗಳ ವಿರುದ್ಧ ಹಾಗೂ ಕಾನೂನು ಉಲ್ಲಂಘನೆ ಮಾಡಿರುವ ಬಿಲ್ಡರ್‌ಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಯಾಕೆ ಮುಂದಾಗುತ್ತಿಲ್ಲ ಎಂದು ಪ್ರಶ್ನಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ಅಧ್ಯಕ್ಷ ರಾದ ಮಹಮ್ಮದ್ ಮುಸ್ತಫಾರವರು ನಗರದ ಹೃದಯಭಾಗದಲ್ಲಿರುವ ಬೀದಿಬದಿ ವ್ಯಾಪಾರಸ್ಥರಿಗೆ ಮಾತ್ರವೇ ವೆಂಡಿಂಗ್ ಝೋನ್ ಪ್ರದೇಶದಲ್ಲಿ ವ್ಯವಸ್ಥೆ ಮಾಡಬೇಕು. ಮಾತ್ರವಲ್ಲದೆ ಅಲ್ಲಿ ಸರಿಯಾದ ಕ್ರಮಗಳನ್ನು ವಹಿಸುವ ಮೂಲಕ ಬೀದಿಬದಿ ವ್ಯಾಪಾರಸ್ಥರಿಗೆ ಅನುಕೂಲ ವಾತಾವರಣ ನಿರ್ಮಿಸಬೇಕು. ಆಹಾರ ಪದಾರ್ಥ ಮಾರಾಟಗಾರರಿಗೆ ಪ್ರತ್ಯೇಕ ಆಹಾರ ವಲಯಗಳನ್ನು ರಚಿಸಬೇಕು. ಎರಡನೇ ಹಂತದ ಗುರುತುಚೀಟಿಯನ್ನು ತಕ್ಷಣ ನೀಡಬೇಕು. ಮೊದಲ ಹಂತದಲ್ಲಿ ನೀಡಿದ ಗುರುತುಚೀಟಿಯ ನವೀಕರಣ ತಕ್ಷಣ ಆಗಬೇಕು ಎಂದು ತಮ್ಮ ಬೇಡಿಕೆಗಳ ಬಗ್ಗೆ ಬೆಳಕು ಚೆಲ್ಲಿದರು.

ಹೋರಾಟದ ನೇತೃತ್ವವನ್ನು ಸಂಘದ ಮುಖಂಡರಾದ ಸಂತೋಷ್ ಆರ್. ಎಸ್., ಹರೀಶ್ ಪೂಜಾರಿ, ಆಸಿಫ್, ಮುಜಾಫರ್, ನೌಶಾದ್, ಅಣ್ಣಯ್ಯ ಕುಲಾಲ್, ಮೇರಿ ಡಿ'ಸೋಜಾ, ಆದಂ ಬಜಾಲ್, ಹಸನ್, ಶಾಹುಬುದ್ದೀನ್, ಮೇಬುಲ್ ಡಿ'ಸೋಜ, ಹೆಲೆನ್, ಗಜಾನನ, ಅನಿಲ್, ರವಿಪೂಜಾರಿ ಮುಂತಾದವರು ವಹಿಸಿದ್ದರು.

ಮುಹಮ್ಮದ್ ಮುಸ್ತಫ



ಕೇರಳ : ಕಾಂಗ್ರೆಸ್‌ನ್ನು ಅನುಕರಿಸುವ ಬಿಜೆಪಿ ಹುನ್ನಾರ

ಜುಲೈ 29 ರಂದು ತಿರುವನಂತಪುರದಲ್ಲಿ ಆರೆಸ್ಸೆಸ್ 'ಕಾರ್ಯವಾಹ' ರಾಜೇಶ್ ಎಂಬಾತನ ಹತ್ಯೆಯನ್ನು ಬಳಸಿಕೊಂಡು ಕೇರಳದ ಎಲ್‌ಡಿಎಫ್ ಸರಕಾರದ ಮೇಲೆ ಕೇಂದ್ರ ಸರಕಾರದ ಹೊಸ ದಾಳಿ ಆರಂಭವಾಗಿದೆ. ಕೊಲೆ ಮಾಡಿದವರನ್ನು 12 ಗಂಟೆಗಳೊಳಗೆ ಬಂಧಿಸಿದರೂ ರಾಜ್ಯಪಾಲರು ಈ ಬಗ್ಗೆ ಮುಖ್ಯಮಂತ್ರಿಗಳಿಗೆ 'ಸಮನ್ಸ್' ಕಳಿಸುವ ಮಟ್ಟಕ್ಕೆ ಹೋದರು. ಬಿಜೆಪಿ ಹಿಂಸಾತ್ಮಕ ಬಂದ್ ನಡೆಸಿತು. ಮುಖ್ಯಮಂತ್ರಿಗಳು ಬಿಜೆಪಿ ಮತ್ತು ಸಿಪಿಐ(ಎಂ) ಮುಖಂಡರ ಸಭೆ ಕರೆದರೂ ಅದರಿಂದೇನೂ ಪ್ರಯೋಜನವಿಲ್ಲ ಎಂದು ಸ್ವತಃ ಕೇಂದ್ರ ಹಣಕಾಸು/ರಕ್ಷಣಾ ಮಂತ್ರಿಗಳೇ ತಿರುವನಂತಪುರಕ್ಕೆ ಭೇಟಿ ನೀಡುತ್ತಿದ್ದಾರೆ, ರಾಜೇಶ್ ಮನೆಗೆ ಭೇಟಿ ನೀಡುತ್ತಾರೆ ಎಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ವರದಿಯಾಗಿದೆ.

ಈ ನಡುವೆ ರಾಜೇಶ್ ಕೊನೆಯುಸಿರೆಳೆಯುವ ಮೊದಲು ತನ್ನ ಕೊಲೆಗಾರರ ಬಗ್ಗೆ ಹೇಳಿದ್ದು ಅದರ ಆಧಾರದಲ್ಲಿ 9 ಮಂದಿಯನ್ನು ಆಗಲೇ ಬಂಧಿಸಲಾಗಿದೆ. ಇದರಲ್ಲಿ 5 ಮಂದಿ ನೇರವಾಗಿ ಕೊಲೆಯಲ್ಲಿ ಭಾಗಿಯಾಗಿದ್ದವರು ಎನ್ನಲಾಗಿದೆ. ವೈಯಕ್ತಿಕ ದ್ವೇಷ ಈ ಕೊಲೆಯ ಕಾರಣಗಳಲ್ಲಿ ಒಂದು ಎಂದೂ ತಿಳಿದು ಬಂದಿದೆ. ಮುಖ್ಯ ಆರೋಪಿ ಮಣಿಕುಟ್ಟನ್ ಈಗಾಗಲೇ ಇತರ 18 ಕ್ರಿಮಿನಲ್ ಕೇಸುಗಳಲ್ಲಿ ಆಪಾದಿತನಾಗಿದ್ದು ಈ ಹಿಂದೆ ಕಾಂಗ್ರೆಸ್ ಪರವಾಗಿಯೂ ರಾಜಕೀಯ ಹಿಂಸಾಚಾರವನ್ನು ನಡೆಸಿದ ದಾಖಲೆ ಇರುವಾತ. ಹಿಂದಿನ ಎಲ್‌ಡಿಎಫ್ ಸರಕಾರದ ಆಡಳಿತ ಅವಧಿಯಲ್ಲಿ ಸಿಪಿಐ(ಎಂ) ಮುಖಂಡರ ಮನೆಯ ಮೇಲೆ ಬಾಂಬೆಸೆದ ಕೇಸ್ ಅತನ ವಿರುದ್ಧ ದಾಖಲಾಗಿತ್ತು. ಕೊಲೆಯ ಇನ್ನೊಬ್ಬ ಆರೋಪಿ ಆರೆಸ್ಸೆಸ್‌ನ ಸಕ್ರಿಯ ಸದಸ್ಯ ಎಂದೂ ವರದಿಯಾಗಿದೆ.

ಈ ಹಿಂದೆ ಎಪ್ರಿಲ್‌ನಲ್ಲಿ ಒಬ್ಬ ಮಾಜಿ ಆರೆಸ್ಸೆಸ್ ಕಾರ್ಯಕರ್ತ 17 ವರ್ಷದ ಅನಂತು ಎಂಬಾತನ ಹತ್ಯೆಗೆ ಸಂಬಂಧಿಸಿದಂತೆ ಹತ್ತು ಆರೆಸ್ಸೆಸ್ ಕಾರ್ಯಕರ್ತರನ್ನು ಬಂಧಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇತ್ತೀಚಿನ ಹತ್ಯೆಯ ಮೊದಲು ತಿರುವನಂತಪುರದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ತಿರುವನಂತಪುರಕ್ಕೆ ಬಂದಾಗಗ ಉಳಕೊಳ್ಳುವ ಅವರ ಮಗನ ಮನೆಯೂ ಸೇರಿದಂತೆ ಸಿಪಿಐ(ಎಂ) ಮುಖಂಡರ ಮನೆಗಳ ಮೇಲೆ ದಾ:ಳಿ ನಡೆಯಿತು ಎಂಬುದನ್ನೂ ಇಲ್ಲಿ ಗಮನಿಸಬಹುದು.

ಈ ಹತ್ಯೆಯಲ್ಲಿ ಆಪಾದಿತರಲ್ಲಿ ಯಾರೂ ಸಿಪಿಐ(ಎಂ)ಗೆ ಸಂಬಂಧಪಟ್ಟವರಲ್ಲ, ಇದು ರಾಜಕೀಯ ಪ್ರೇರಿತ ಆಪಾದನೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಹೇಳಿದ್ದಾರೆ. ಬಿಜೆಪಿ ಒಂದು ರಾಜಕೀಯೇತರ ವಿಷಯಕ್ಕಾಗಿ ಬಂದ್ ನಡೆಸಿ ಹಿಂಸಾಚಾರ ನಡೆಸಿದೆ, ತಾನೇ ಶಾಂತಿಯನ್ನು ಕೆಡಿಸಿ ಆಮೂಲಕ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಸರಿಯಿಲ್ಲೆಂದು ಬಿಂಬಿಸಲು ಪ್ರಯತ್ನಿಸುತ್ತಿದೆ ಎಂದು ಅವರು ಹೇಳಿದ್ದಾರೆ.

ಈ ಹಿಂದೆ ಕಾಂಗ್ರೆಸ್ ಕೇಂದ್ರ ಸರಕಾರ ಇಎಂಎಸ್ ನಂಬೂದರಿಪಾದ್ ನೇತೃತ್ವದ ಮೊದಲ ಕಮ್ಯುನಿಸ್ಟ್ ಸರಕಾರವನ್ನು ವಜಾ ಮಾಡಿದ ರೀತಿಯನ್ನು ಅನುಕರಿಸಲು ಈಗಿನ ಬಿಜೆಪಿ ಕೇಂದ್ರ ಸರಕಾರ ಪ್ರಯತ್ನಿಸುತ್ತಿರುವಂತೆ ಕಾಣುತ್ತದೆ ಎಂದು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

ಗೂರ್ಖಾಲ್ಯಾಂಡ್ ಚಳುವಳಿ: ಬಿಜೆಪಿಯ ಗೋಸುಂಬೆತನ ಕೊನೆಗೂ ಬಯಲು

ಗೂರ್ಖಾ ಜನಮುಕ್ತಿ ಮೋರ್ಚಾ(ಜಿಜೆಎಂ) ಹತ್ತು ದಿನಗಳ ಒಳಗೆ ತಮ್ಮ ಬೇಡಿಕೆಗಳನ್ನು ಸ್ವೀಕರಿಸಬೇಕು, ಇಲ್ಲವಾದರೆ ಪರಿಣಾಮಗಳನ್ನು ಎದುರಿಸಬೇಕು ಎಂದು ಕೇಂದ್ರ ಸರಕಾರಕ್ಕೆ ಗಡುವು ನೀಡಿದೆ. ಆದರೆ ಗೂರ್ಖಾಗಳ, ಆದಿವಾಸಿಗಳ ಅಥವ ಇತರರ ಬೇಡಿಕೆಗಳನ್ನು ಪರಿಶೀಲಿಸಿಲು ಸಮಿತಿಯನ್ನು ರಚಿಸುವ ಪ್ರಸ್ತಾವ ಸರಕಾರದ ಮುಂದಿಲ್ಲ ಎಂದು ಸಂಸತ್ತಿಗೆ ಕೇಂದ್ರ ಗೃಹ ಮಂತ್ರಾಲಯ ತಿಳಿಸಿದೆ.

ಡಾರ್ಜಿಲಿಂಗ್‌ನಿಂದ ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಲು ಬಿಜೆಪಿ ಕಳೆದ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಇದೇ ಜಿಜೆಎಂನ ಬೆಂಬಲ ಪಡೆದಿತ್ತು, ಅದಕ್ಕಾಗಿ ಅದರ ಬೇಡಿಕೆಯನ್ನೂ ಬೆಂಬಲಿಸಿತ್ತು. 2009ರಲ್ಲಿ ಜಸ್ವಂತ್ ಸಿಂಗ್‌ರನ್ನು ಲೋಕಸಭೆಗೆ ಕಳಿಸುವಲ್ಲಿ ಜಿಜೆಎಂ ನೆರವು ಪಡೆಯಲಾಗಿತ್ತು. ಅವರು ಆಗ ಪ್ರತಿಪಕ್ಷವಾಗಿದ್ದ ಬಿಜೆಪಿ ಪರವಾಗಿ ಗೂರ್ಖಾಲ್ಯಾಂಡ್ ಬೇಡಿಕೆಯನ್ನು ಹಲವು ಬಾರಿ ಸಂಸತ್ತಿನಲ್ಲಿ ಎತ್ತಿದ್ದರು.

2011ರಲ್ಲಿ ಮತ್ತು 2016ರಲ್ಲಿ ಇದೇ ಜಿಜೆಎಂ ಜತೆ ಮೈತ್ರಿ ಮಾಡಿಕೊಂಡ ಫಲವಾಗಿ ಪಶ್ಚಿಮ ಬಂಗಾಲ ವಿಧಾನಸಬೆಯನ್ನು ಪ್ರವೇಶಿಸಲೂ ಬಿಜೆಪಿಗೆ ಸಾಧ್ಯವಾಯಿತು.

2014ರಲ್ಲಿ ಬಿಜೆಪಿಯ ಆಂತರಿಕ ಕಾರಣಗಳಿಂದಾಗಿ ಜದವಂತ್ ಸಿಂಗ್‌ರಿಗೆ ಟಿಕೆಟ್ ನೀಡದೆ ಎಸ್ ಎಸ್ ಅಹ್ಲುವಾಲಿಯ ಅವರನ್ನು ಅಭ್ಯರ್ಥಿಯಾಗಿಸಿದಾಗ ಬಿಜೆಪಿ ಈ ಬೇಡಿಕೆಯ ಬಗ್ಗೆ ಪ್ರಾಮಾಣಿಕವಾಗಿಲ್ಲ ಎಂದು ಆಪಾದಿಸಿದರು. ಅದು ಹೊಸ ವಿಚಾರವೇನೂ ಆಗಿರಲಿಲ್ಲದಿದ್ದರೂ, ಮತ್ತೆ ಜಿಜೆಎಂ ಬೆಂಬಲದಿಂದ ಗೆದ್ದ ಬಿಜೆಪಿಯ ಲೋಕಸಭಾ ಸದಸ್ಯರೂ ಗೂರ್ಖಾಲ್ಯಾಂಡ್ ಬೇಡಿಕೆಯನ್ನು ಬೆಂಬಲಿಸುತ್ತಲೇ ಇದ್ದರು. ಆದರೆ ಈ ಬಾರಿ ಚಳುವಳಿ ಭುಗಿಲೆದ್ದ ನಂತರ ಅವರು ನಾಪತ್ತೆಯಾಗಿದ್ದಾರೆ.

ಈ ನಡುವೆ ಪಶ್ಚಿಮ ಬಂಗಾಲದಲ್ಲಿ ತನ್ನ ಕೋಮುಧ್ರುವೀಕರಣ ಪ್ರಯತ್ನದ ಫಲವಾಗಿ ಪಡೆಯುತ್ತಿರುವ ಬೆಂಬಲಕ್ಕೆ ಸಂಚಕಾರ ಬರಬಹುದೆಂಬ ಭಯದಿಂದ ರಾಜ್ಯದ ಬಿಜೆಪಿ ಘಟಕವೂ ಈ ಬಗ್ಗೆ ಮೌನ ತಾಳಿತು, ಚಳುವಳಿ ಕ್ರಮೇಣ ತಣ್ಣಗಾಗಬಹುದು ಎಂಬ ಅದರ ನಿರೀಕ್ಷೆ ಹುಸಿಯಾದಾಗ ಈಗ ನಿರ್ವಾಹವಿಲ್ಲದೆ ಗೂರ್ಖಾಲ್ಯಾಂಡ್ ಬೇಡಿಕೆಯನ್ನು ಅದು ವಿರೋಧಿಸಲೇ ಬೇಕಾಗಿ ಬಂದಿದೆ.

ಕ್ರಿಮಿನಲ್ ಕೇಸುಗಳಿಂದ ತಪ್ಪಿಸಿಕೊಳ್ಳುವ ಉತ್ತರಪ್ರದೇಶ ಸರಕಾರದ ಪ್ರಯತ್ನಕ್ಕೆ ಹೈಕೋರ್ಟಿನಲ್ಲಿ ಸವಾಲು

ಹಲವಾರು ಕ್ರಿಮಿನಲ್ ಕೇಸುಗಳನ್ನು ಎದುರಿಸುತ್ತಿರುವ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್‌ರನ್ನು ವಿಚಾರಣೆಗಳಿಂದ ರಕ್ಷಿಸುವ ಬಿಜೆಪಿ ಪ್ರಯತ್ನಕ್ಕೆ ಮೊದಲ ಭಂಗ ಬಂದಿದೆ.

2007 ರ ಗೋರಖ್‌ಪುರ ದ್ವೇಷ ಭಾಷಣದ ಕೇಸಿನಲ್ಲಿ ಪ್ರಮುಖ ಆರೋಪಿಯೇ ಮುಖ್ಯಮಂತ್ರಿಯಾಗಿರುವಾಗ ಈ ಕೇಸಿನಲ್ಲಿ ನ್ಯಾಯ ಸಿಗುವ ಸಂಭವ ಇಲ್ಲ, ಆದ್ದರಿಂದ ಇದನ್ನು ಒಂದು ಸ್ವತಂತ್ರ ತನಿಖಾ ಸಂಸ್ಥೆಗೆ ವಹಿಸಬೇಕೆಂಬ ಅರ್ಜಿಯ ವಿಚಾರಣೆಗೆ ಉತ್ತರ ಪ್ರದೇಶ ಸರಕಾರ ಮಂಜೂರಾತಿ ನೀಡದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿರುವ ಅಲಹಾಬಾದ್ ಹೈಕೋರ್ಟ್ ರಾಜ್ಯ ಸರಕಾರದ ಮಂಜೂರಾತಿ ನಿರಾಕರಣೆಗೆ ಸವಾಲು ಹಾಕಲು ಅರ್ಜಿದಾರರಿಗೆ ಅವಕಾಶ ನಿಡಿದೆ.

ಈ ವಿಚಾರಣೆಯ ಸಂದರ್ಭದಲ್ಲಿ ಅರ್ಜಿದಾರರಿಗೆ ಪರಿಹಾರವಿಲ್ಲದಂತೆ ಮಾಡಲು ಸಾಧ್ಯವಿಲ್ಲವಲ್ಲ ಎಂದು ನ್ಯಾಯಾಲಯ ಕೇಳಿದಾಗ ರಾಜ್ಯದ ಅಡಿಶನಲ್ ಅಡ್ವೊಕೇಟ್ ಜನರಲ್, ಅರ್ಜಿದಾರರು ಸರಕಾರದ ಮಂಜೂರಾತಿಗೆ ಸವಾಲು ಹಾಕುವ ಅಗತ್ಯವಿಲ್ಲ, ಮ್ಯಾಜಿಸ್ಟ್ರೇಟ್ ಮುಂದೆ ಪ್ರತಿಭಟನಾ ಅರ್ಜಿ ಸಲ್ಲಿಸಬಹದು ಎಂದಿದ್ದರು. ಆದರೆ ನಂತರ ಅಡ್ವೊಕೇಟ್ ಜನರಲ್ ತದ್ವಿರುದ್ಧ ಹೇಳಿಕೆ ಕೊಟ್ಟರು– ಮ್ಯಾಜಿಸ್ಟ್ರೇಟರಿಗೆ ಈ ಅಧಿಕಾರ ಇಲ್ಲ ಎಂದು ಒಪ್ಪಿಕೊಂಡರು.

ಇದನ್ನು ಕಂಡ ನ್ಯಾಯಾಲಯ, ನೀವು ಸರಕಾರದ ಪರವಾಗಿ ಯಾವ ತರ್ಕವನ್ನು ಮುಂದಿಡ ಬಯಸುತ್ತಿರಿ ಎಂಬುದನ್ನು ನಿಮ್ಮ ನಡುವೆಯೇ ನಿರ್ಧರಿಸಿಕೊಳ್ಳಿ ಎಂದು ಟಿಪ್ಪಣಿ ಮಾಡಿದ್ದಲ್ಲದೆ ವಿಚಾರಣೆಯ ವೇಳೆಯಲ್ಲಿ ಆಗಾಗ ಅಡ್ವೊಕೇಟ್ ಜನರಲ್ ಅನುಪಸ್ಥಿತಿಯ ಬಗ್ಗೆಯೂ ಟೀಕಿಸಿದರು, ನಿಮ್ಮ ಪ್ರಮುಖ ಕಾರ್ಯಸ್ಥಳ ಅಲಹಾಬಾದ್ ಆದರೂ ಹೆಚ್ಚಾಗಿ ಲಕ್ನೌ ನಲ್ಲೇ ಇರುತ್ತಿರಿ, ಇದೊಂದು ಗಂಭೀರ ವಿಷಯ ಎಂದೂ ಟಿಪ್ಪಣಿ ಮಾಡಿದರು.

ಅಂತಿಮವಾಗಿ, ಅರ್ಜಿದಾರರ ಮನವಿಯನ್ನು ಏಕೆ ತಿರಸ್ಕರಿಸಬೇಕು ಎಂದು ಸಾಬೀತು ಮಾಡಲು ರಾಜ್ಯ ಸರಕಾರದ ವಕೀಲರಿಗೆ ಸಾಧ್ಯವಾಗಿಲ್ಲ ಎಂದು ರಾಜ್ಯ ಸರಕಾರದ ಆಕ್ಷೇಪಣೆಯನ್ನು ತಳ್ಳಿ ಹಾಕಿದ ಹೈಕೋರ್ಟ್ ರಾಜ್ಯಸರಕಾರದ ಮಂಜೂರಾತಿ ನಿರಾಕರಣೆಗೆ ಸವಾಲು ಹಾಕುವ ತಿದ್ದುಪಡಿ ಮಾಡಿದ ಅರ್ಜಿ ಸಲಿಸುವಂತೆ ಅರ್ಜಿದಾರರಿಗೆ ಹೇಳಿದೆ, ಆಗಸ್ಟ್ 9 ರಂದು ಅದರ ವಿಚಾರಣೆ ನಡೆಸಲಾಗುವುದು ಎಂದಿದೆ.

ಜಮ್ಮು–ಕಾಶ್ಮೀರದಲ್ಲಿ ವಿವೇಕದ ದನಿಗಳಿಗೆ ತೀವ್ರ ಹಿನ್ನಡೆ– ತರಿಗಾಮಿ

ಜಮ್ಮು–ಕಾಶ್ಮೀರದಲ್ಲಿ ಜನಗಳ ಅಸಂತುಷ್ಟಿ ಹೆಚ್ಚುತ್ತಿರುವಂತೆ ಒಂದೆಡೆ ದಮನದ ಮೂಲಕ, ಇನ್ನೊಂದೆಡೆಯಲ್ಲಿ ವಿವೇಕಯುತ ದನಿಗಳಿಗೆ ಹಿನ್ನಡೆಯುಂಟು ಮಾಡುವ ಮೂಲಕ ಬಿಜೆಪಿ ತನ್ನ ಅಜೆಂಡಾವನ್ನು ತರಲು ನಿರ್ಧಾರ ಮಾಡಿದಂತಿದೆ.

ಏಳು ವರ್ಷಗಳ ಹಿಂದೆ ಒಂದು ಕುಖ್ಯಾತ ಹುಸಿ ಎನ್‌ಕೌಂಟರ್‌ನಲ್ಲಿ ಉತ್ತರ ಕಾಶ್ಮೀರದ ಗಡಿಪ್ರದೇಶದ ಮಚಿಲ್‌ನಲ್ಲಿ ಮೂವರು ಕಾಶ್ಮೀರಿ ಯುವಕರನ್ನು ಕೊಂದದ್ದಕ್ಕೆ 2014ರಲ್ಲಿ ಭಾರತೀಯ ಸೇನೆಯ ನ್ಯಾಯಾಲಯ ಸೇನಾಧಿಕಾರಿಗಳೂ ಸೇರಿದಂತೆ ಐವರು ಸೇನಾ ಸಿಬ್ಬಂದಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಭಯೋತ್ಪಾದಕರನ್ನು ಕೊಂದರೆಂದು ಪಾರಿತೋಷಕ ಮತ್ತು ನಗದು ಬಹುಮಾನಕ್ಕಾಗಿ ಈ ಕೃತ್ಯ ಎಸಗಲಾಗಿತ್ತಂತೆ. ಆದರೆ ಈಗ ಒಂದು ಮಿಲಿಟರಿ ಟ್ರಿಬ್ಯೂನಲ್ ಆ ಐವರಿಗೆ ಜಾಮೀನು ಕೊಟ್ಟಿದೆ.

ಇದು ಕಾಶ್ಮೀರದಲ್ಲಿ ವಿವೇಕಯುತ ದನಿಗಳಿಗೆ ತೀವ್ರ ಹಿನ್ನಡೆ ಉಂಟು ಮಾಡುವಂತದ್ದು ಎಂದು ಜಮ್ಮು ಮತ್ತು ಕಾಶ್ಮೀರದ ಹಿರಿಯ ಸಿಪಿಐ(ಎಂ) ಮುಖಂಡರೂ, ಶಾಸಕರೂ ಆಗಿರುವ ಮಹಮ್ಮದ್ ಯೂಸುಫ್ ತರಿಗಾಮಿ ಹೇಳಿದ್ದಾರೆ.

"ಅಪರಾಧಿಗಳನ್ನು ಶಿಕ್ಷಿಸಿರುವುದು ವ್ಯವಸ್ಥೆಯ ದೊಡ್ಡ ಶಕ್ತಿಯಾಗಿತ್ತು. ಆದರೆ ಈಗ ಅದೇ ವ್ಯವಸ್ಥೆ ಆ ಮೂವರು ಕಾಶ್ಮೀರಿ ಯುವಕರು ಸಾಮಾನ್ಯವಾಗಿ ಭಯೋತ್ಪಾದಕರು ತೊಡುವ ಪಠಾಣ್ ವೇಷಭೂಷಣದಲ್ಲಿ ಇದ್ದರು ಎಂದು ತಪ್ಪನ್ನು ಸಮರ್ಥಿಸಲು ಪ್ರಯತ್ನಿಸುತ್ತಿದೆ. ಇದು ಎಂತಹ ಸಂದೇಶ ಕೊಡುತ್ತದೆ? ಇದು ಅತ್ಯಂತ ನಿರುತ್ಸಾಹಗೊಳಿಸುವ ಸಂಗತಿ. ಅವರು ಸಮವಸ್ತ್ರದಲ್ಲಿ ಇದ್ದರೋ ಇಲ್ಲವೋ ತಪ್ಪು ಯಾರು ಮಾಡಿದರೂ ತಪ್ಪೇ. ಕಾನೂನಿನ ಪ್ರಕ್ರಿಯೆ ನಡೆಯಲೇ ಬೇಕು" ಎಂದಿರುವ ತರಿಗಾಮಿ ಅವರು ಇಂತಹ ನಿರ್ಧಾರ ಸೇನಾ ನ್ಯಾಯಾಲಯದಂತಹ ಸಂಸ್ಥೆಗಳ ಪ್ರತಿಷ್ಠೆಯನ್ನು ಇಳಿಸುವಂತದ್ದು ಎಂದಿದ್ದಾರೆ.

ಈ ಟ್ರಿಬ್ಯೂನಲ್ ಜಮ್ಮು –ಕಾಶ್ಮೀರ ಪೋಲೀಸ್ ಇಲಾಖೆಯ ತನಿಖೆಯನ್ನು ಮಾತ್ರವಲ್ಲ, ಸೇನೆಯ ತನಿಖಾ ನ್ಯಾಯಾಲಯ ಮತ್ತು ಮತ್ತು ಜನರಲ್ ಕೋರ್ಟ್ ಮಾರ್ಷಲ್‌ನ ತೀರ್ಮಾನಗಳನ್ನು ಕಡೆಗಣಿಸಿದೆ. ಇದು ನ್ಯಾಯದ ಕೊಲೆಯಲ್ಲದೆ ಬೇರೇನೂ ಅಲ್ಲ, ಸರಕಾರ ಇದನ್ನು ಸರಿಪಡಿಸಬೇಕು, ಮಚಿಲ್ ಹುಸಿ ಎನ್‌ಕೌಂಟರ್ ದೇಶ ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡಿರುವ ಒಂದು ಘಟನೆ, ಜನರಲ್ಲಿ ದೇಶದ ಕಾನೂನಿನ ಬಗ್ಗೆ ವಿಶ್ವಾಸವನ್ನು ಉಳಿಸಬೇಕಾದರೆ ತಪ್ಪಿತಸ್ಥರನ್ನು ಶಿಕ್ಷಿಸಬೇಕೇ ಹೊರತು ಬಿಡುಗಡೆ ಮಾಡುವುದಲ್ಲ ಎಂದು ಅವರು ಹೇಳಿದ್ದಾರೆ.

ಆದರೆ ಸೇನಾಪಡೆಗಳ ಸ್ಥೈರ್ಯ ಬೆಳೆಸಲಿಕ್ಕಾಗಿಯೇ ಇಂತಹ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂಬುದು ಕೆಲವು ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ.

ವಿಧಿ 370 ರ ಮೇಲೆ ಮತ್ತೊಂದು ಪ್ರಹಾರ

ಈ ನಡುವೆ ರಾಜಕೀಯ ರಂಗದಲ್ಲೂ ಸಂವಾದದ ಬದಲು ಕಲಮು 370ನ್ನು ನಿಷ್ಕ್ರಿಯಗೊಳಿಸುವ ಪ್ರಯತ್ನವೇ ಮುಂದುವರೆಯುತ್ತಿದೆ.

ಸಂಸತ್ತು ಅಂಗೀಕರಿಸುವ ಯಾವುದೇ ಮಸೂದೆಯನ್ನು ತಂತಾನೇ ಜಮ್ಮು–ಕಾಶ್ಮೀರಕ್ಕೆ ವಿಸ್ತರಿಸಲು ಸಾಧ್ಯವಿಲ್ಲ. ಅಲ್ಲಿನ ಶಾಸನ ಸಭೆಯ ಪರಿಶೀಲನೆಯ ನಂತರವೇ ಅದನ್ನು ರಾಷ್ಟ್ರಪತಿಗಳ ಆದೇಶದ ಮೂಲಕ ಆ ರಾಜ್ಯಕ್ಕೆ ಅನ್ವಯಗೊಳಿಸಬೇಕು. ಆದರೆ ಈ ವಿಧಾನವನ್ನು ಕಡೆಗಣಿಸಿ ಅಂಕಿ–ಅಂಶ ಸಂಗ್ರಹ(ತಿದ್ದುಪಡಿ) ಮಸೂದೆ, 2017ನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯಿಸಲಾಗಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಆಶಯಗಳು ಸರಿಯಾಗಿದ್ದರೆ ಸಂವಿಧಾನಿಕ ವಿಧಾನಗಳನ್ನು ಅನುಸರಿಸಲು ಇದ್ದ ಅಡ್ಡಿಯಾದರೂ ಏನು ಎಂದು ತರಿಗಾಮಿಯವರು ಪ್ರಶ್ನಿಸಿದ್ದಾರೆ.

ಬಲಪಂಥೀಯ ಶಕ್ತಿಗಳು ಒಂದೊಂದಾಗಿ ಜಮ್ಮು ಮತ್ತು ಕಾಶ್ಮೀರದ ವಿಶಿಷ್ಟ ಸ್ಥಾನಮಾನವನ್ನು ಕಳಚಿ ಹಾಕುತ್ತಿವೆ. ದೇಶದ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳು ಇದನ್ನು ಪ್ರತಿರೋಧಿಸಬೇಕಾಗಿದೆ. ಬಿಜೆಪಿ ಕೇಂದ್ರ ಸರಕಾರ ರಾಷ್ಟ್ರೀಯ ಪ್ರತಿಪಕ್ಷಗಳ, ರಾಜ್ಯ ರಾಜಕೀಯ ಪಕ್ಷಗಳ ಅಥವ ಅವರೇ ಭಾಗಿಯಾಗಿರುವ ರಾಜ್ಯ ಸರಕಾರದ ಸೂಚನೆಗಳನ್ನೂ ಕೇಳಿಲ್ಲ. ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳು ರಾಜ್ಯ ಸರಕಾರದ ಸಮ್ಮತಿಯಿಲ್ಲದೆ ಇದನ್ನು ಅಂಗೀಕರಿಸಬೇಡಿ ಎಂದು ಸಲಹೆ ನೀಡಿದರೂ ಕೇಳದೆ ಇದನ್ನು ಮಾಡಲಾಗಿದೆ, ಆದ್ದರಿಂದ ಅದರ ಪರಿಣಾಮಗಳಿಗೆ ಈ ಸರಕಾರವೇ ಹೊಣೆ ಎಂದು ತರಿಗಾಮಿ ಹೇ$ಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಮುಖ್ಯ ಮಂತ್ರಿಗಳು ಈ ಬಗ್ಗೆ ಮೌನವಾಗಿದ್ದರೂ ತಮ್ಮ ಪಕ್ಷದ ಸ್ಥಾಪನಾ ದಿನದಂದು ತನ್ನ ಮುಜುಗರಕ್ಕೆ ಕೊನೆಗೂ ದನಿ ನೀಡುವ ಪ್ರಯತ್ನ ಆರಂಭಿಸಿರುವಂತೆ ಕಾಣುತ್ತದೆ.

"ಸಂವಿಧಾನದಲ್ಲಿ ಮತ್ತು ಭಾರತ ಎಂಬ ವಿಚಾರದಲ್ಲಿ ನಮ್ಮ ವಿಶ್ವಾಸ ಅಲುಗದಂತೆ ನೋಡಿಕೊಳ್ಳಬೇಕು. ಒಕ್ಕೂಟ ಸರಕಾರ ಮತ್ತು ರಾಜ್ಯದ ನಡುವಿನ ವಿಶಿಷ್ಟ ಸಂವಿಧಾನಿಕ ವ್ಯವಸ್ಥೆಯಲ್ಲಿ ಕೈಯಾಡಿಸಿದರೆ, ಅದು ಸಂವಿಧಾನವನ್ನು ನಂಬಿರುವವರ ವಿಶ್ವಾಸವನ್ನು ಅಲುಗಾಡಿಸುತ್ತದೆ. ನಮಗೆ(ಅಂದರೆ ಕಾಶ್ಮೀರದ ಮುಖ್ಯಧಾರೆಯ ಪಕ್ಷಗಳಿಗೆ) ನಮ್ಮ ರಾಜಕಿಯ ನಂಬಿಕೆಗಳನ್ನು ವಿವರಿಸಲು ಏನೂ ಇರುವುದಿಲ್ಲ" ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.

ಆದರೆ ರಾಜ್ಯದಲ್ಲಿ ಅವರ ಸಹಯೋಗಿಯಾಗಿರುವ ಕೇಂದ್ರದ ಆಳುವ ಪಕ್ಷ ಈ ಅಭಿಪ್ರಾಯದ ಬಗ್ಗೆ ಗೌರವ ಹೊಂದಿರುವಂತೆ ಕಾಣುತ್ತಿಲ್ಲ.

ಅಂಬೇಡ್ಕರ್ 126 ಅಂತರಾಷ್ಟ್ರೀಯ ಸಮ್ಮೇಳನ – ಒಂದೆರಡು ಟಿಪ್ಪಣಿ

ಡಾ. ವಿಠ್ಠಲ ಭಂಡಾರಿ

ಜುಲೈ 21–23, 2017 ರಂದು ಬೆಂಗಳೂರಿನಲ್ಲಿ ನಡೆದ ಅಂಬೇಡ್ಕರ್ 126 ಅಂತಾರಾಷ್ಟ್ರೀಯ ಸಮ್ಮೇಳನ ಹಲವು ನಕಾರಾತ್ಮಕ-ಸಕಾರಾತ್ಮಕ ಚರ್ಚೆಯನ್ನು ಹುಟ್ಟುಹಾಕಿದೆ. ಆ ಚರ್ಚೆಗೆ ನನ್ನದೂ ಒಂದು ಸೇರ್ಪಡೆ.

1. ಹಾಗೆ ನೋಡಿದರೆ ಅಂಬೇಡ್ಕರ್ ಅವರ ಕುರಿತು ನಿಜವಾದ ಪೂರ್ಣ ಓದು ಪ್ರಾರಂಭ ಆಗಿದ್ದೇ ಇತ್ತೀಚೆಗೆ. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ನಡೆಯುತ್ತಿರುವ ಸಾಮಾಜಿಕ ನ್ಯಾಯದ ಕುರಿತ ಚರ್ಚೆಗೆ, ಚಳುವಳಿಗೆ, ಬೇಡಿಕೆಗಳಿಗೆ ಸ್ವಾತಂತ್ರ್ಯ ನಂತರ ಭಾರತ ಅಂಗೀಕರಿಸಿದ ಸಂವಿಧಾನದಲ್ಲಿ ಒಂದು ಮಾನ್ಯತೆ ಸಿಕ್ಕಿತು. ಈ ಮಾನ್ಯತೆಗೆ ಮುಖ್ಯ ಕಾರಣ ಡಾ. ಅಂಬೇಡ್ಕರ್. ಭಾರತದ ಸಂವಿಧಾನದ ರಚನೆಗೆ ಹಲವರು ಕೊಡುಗೆ ಕೊಟ್ಟಿದ್ದಾರೆ ಎನ್ನುವುದು ಸತ್ಯವೇ. ಅವುಗಳಲ್ಲಿ ಕೆಲವು ಧನಾತ್ಮಕವಾದುದಾದರೆ ಇನ್ನು ಕೆಲವು ಋಣಾತ್ಮಕವಾದದ್ದು. ಆದರೆ ಅಂಬೇಡ್ಕರ್ ತನ್ನೆಲ್ಲಾ ಸಾಮರ್ಥ್ಯವನ್ನು ಉಪಯೋಗಿಸಿ, ತನ್ನ ಅಪಾರ ಓದು, ಜೀವನಾನುಭವದ ಹಿನ್ನೆಲೆಯಲ್ಲಿ ಸಂವಿಧಾನವನ್ನು ಸಾಧ್ಯವಾದಷ್ಟು ಸಮಾಜಮುಖಿಯಾಗಿಸಿದರು. ಬಹುಶಃ ಅಂಬೇಡ್ಕರ್ ಇಲ್ಲದಿದ್ದರೆ ಒಂದು ಸಾಮಾನ್ಯ ದರ್ಜೆಯ 'ಡೊಕ್ಯುಮೆಂಟ್' ಆಗಬಹುದಾದ ಸಂವಿಧಾನ ಇಂದು ತನ್ನೆಲ್ಲಾ ಮಿತಿಯ ಒಳಗಡೆಯೂ ಸ್ವಾತಂತ್ರ್ಯ, ಸಮಾನತೆ ಮತ್ತು ಬಹುಸಂಸ್ಕೃತಿಯ ಹಕ್ಕುಗಳ ರಕ್ಷಣೆಯ ಮುಖ್ಯ ಕೈಪಿಡಿಯಾಗಿದೆ. ಆದರೆ ಅದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಆಳುವವರ ವರ್ಗ ಹಿತಾಸಕ್ತಿ ತಡೆಯಾಗುತ್ತಿದೆ.

ಆದರೆ ಈ ದೇಶದಲ್ಲಿ ಕಂಡುಬರುತ್ತಿರುವ ಒಂದು ಫ್ಯಾಸಿಸ್ಟ ರೂಪದ ಬೆಳವಣಿಗೆ, ಅಪಾಯಕಾರಿ ಹಂತಕ್ಕೆ ಹೋಗುತ್ತಿರುವ ಖಾಸಗೀಕರಣದ ಪ್ರಕ್ರಿಯೆ, ಜಾಗತೀಕರಣದ ಫಲವಾಗಿ ತಾರಕಕ್ಕೆ ಏರುತ್ತಿರುವ ರಾಜಕಾರಣದ ಅನೈತಿಕತೆಯನ್ನೇ ಒಂದು ಮೌಲ್ಯ ಎಂದು ಬಿಂಬಿಸುತ್ತಿರುವ ಅಡ್ಡೋಗತಿಯ ಸಂದರ್ಭದಲ್ಲಿ ನಾವು ಈ ದೇಶದ ಭವಿಷ್ಯದ ದಾರಿಯನ್ನು ಅರಸುತ್ತಿದ್ದೇವೆ. ಅಧಿಕಾರಕ್ಕೆ ಬಂದ ಸರ್ಕಾರಗಳು ಸಂವಿಧಾನ ಆಶಯವನ್ನು ಮುನ್ನಡೆಸುವುದು ಹಾಗಿರಲಿ, ಸಂವಿಧಾನದವನ್ನೇ ಅಮಾನ್ಯಗೊಳಿಸುತ್ತಿರುವ ಸಂದರ್ಭದಲ್ಲಿ ಡಾ. ಅಂಬೇಡ್ಕರ್ ಮತ್ತೆ ಮತ್ತೆ ನೆನಪಾಗುತ್ತಿದ್ದಾರೆ: ರಾಜ್ಯ ಶಾಸ್ತ್ರಜ್ಞರಾಗಿ, ಅರ್ಥಶಾಸ್ತ್ರಜ್ಞರಾಗಿ ಕಾನೂನು ತಜ್ಞರಾಗಿ, ಶಿಕ್ಷಣ ತಜ್ಞನಾಗಿ, ಸ್ತ್ರೀವಾದಿಯಾಗಿ, ಈ ಸಮಾಜವನ್ನು ಪುನರ್ ಸಂಘಟಿಸುವ ಆಶಯ ಹೊತ್ತ ಒಬ್ಬ ಇಂಜನಿಯರ್ ಆಗಿ. ಹಲವು ದಶಕಗಳ ಹಿಂದೆ ಭಾವನಾತ್ಮಕ ನೆಲೆಯಲ್ಲಿ ಕಾಣಲಾಗುತ್ತಿದ್ದ ಅಂಬೇಡ್ಕರ್ ಇಂದು ಭಾರತದಲ್ಲಿ ಸಂಭವಿಸಿದ ಒಂದು ಚಾರಿತ್ರಿಕ ವೈಚಾರಿಕ ವಿದ್ಯಮಾನವಾಗಿ ಪರಿಗಣಿಸಲ್ಪಡುತ್ತಿದ್ದಾರೆ. ಬಹುಶಃ ಮೊನ್ನೆ ಮೊನ್ನೆ ನಡೆದ ಅಂಬೇಡ್ಕರ್ ಕುರಿತ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಅಂಬೇಡ್ಕರ್ ಅವರನ್ನು ಇಂತಹ ಬಹುಸೈದ್ಧಾಂತಿಕ ಆಯಾಮದಲ್ಲಿ ನೋಡಲು ಸಾಧ್ಯವಾಯಿತು.

2. ಅದು ಅಂಬೇಡ್ಕರ್ ಇರಲಿ, ಮಾರ್ಕ್ಸ ಇರಲಿ, ಗಾಂಧಿ ಇರಲಿ – ಯಾರನ್ನೂ ಕೇವಲ ಭಾವನಾತ್ಮಕವಾಗಿ ನೋಡುವುದರಿಂದ ನಿರೀಕ್ಷಿತ ಫಲ ಸಿಗದು. ಅವರನ್ನು ವರ್ತಮಾನದ ಜೊತೆ (ಪ್ರಾಯೋಗಿಕ & ತಾತ್ವಿಕ ನೆಲೆಯಲ್ಲಿ) ಮುಖಾಮುಖಿಯಾಗಿಸಲೇ ಬೇಕು. ಇಲ್ಲದಿದ್ದರೆ ಎಂದೂ ಭಾರತದಲ್ಲಿ ಚಾಲ್ತಿಯಲ್ಲಿರದ ಕೇವಲ ಭ್ರಮಾತ್ಮಕ ಸಂಗತಿ ಮಾತ್ರ ಆಗಿರುವ ಭಾರತೀಯ ಸಂಸ್ಕೃತಿಯ ಉದಾತ್ತತೆಯ ಕುರಿತು ಸನಾತನವಾದಿಗಳು ಭಾಷಣ ಬಿಗಿದಂತೆ ಇದೂ ಆಗುತ್ತದೆ. ಭಾಷಣದಲ್ಲಿ ಹೇಳಿದ ಉದಾತ್ತತೆ ಕೃತಿಯಲ್ಲಿ ಇರುವುದಿಲ್ಲ. ಈ ಎಚ್ಚರ ಅಂದು ಮಾತನಾಡಿದ ಹಲವರಲ್ಲಿ ಇತ್ತು. ಸಧ್ಯ ಭಾರತಕ್ಕೆ ಸಮಸ್ಯೆಯೇ ಆಗಿರುವ 'ಭಕ್ತ' ಸಮೂಹದಿಂದ ದೇಶವನ್ನು ಬಚಾವ್ ಮಾಡುವ ಹಲವು ಮಾತುಗಳು ಸಮ್ಮೇಳನದ ವಿವಿಧ ಗೋಷ್ಠಿಯಲ್ಲಿ ಮತ್ತೆ ಮತ್ತೆ ಕೇಳಿ ಬಂದವು. ಸಮಾವೇಶ ಉದ್ಘಾಟನೆ ಮಾಡಿರುವ ಮಾರ್ಟಿನ್ ಲೂಥರ್ ಕಿಂಗ್ ಖಖಖ, ಅತಿಥಿಗಳಾದ ಪ್ರಕಾಶ ಅಂಬೇಡ್ಕರ್ ಕೈಲಾಶ್ ಸತ್ಯಾರ್ಥಿ ಮುಂತಾದವರ ಮಾತುಗಳು ಉದ್ಘಾಟನೆ ಸಮಾರಂಭವನ್ನು ಕಾಂಗ್ರೆಸ್ ಪಕ್ಷದ ರಾಜಕೀಯ ಸಮಾರಂಭವಾಗುವ ಅಪಾಯದಿಂದ ತಡೆದವು. ವರ್ತಮಾನದಲ್ಲಿ ಭಾರತವನ್ನು ಕಾಡುತ್ತಿರುವ ಸಮಸ್ಯೆಗೆ ಅಂಬೇಡ್ಕರ್ ಆಲೋಚನೆ ಹೇಗೆ ಪರ್ಯಾಯ ಆಗಬಹುದು, ಈ ಕಾಲಕ್ಕೆ ಅನುಸಂಧಾನಿಸುವ ಬಗೆ ಎಂತು ಎನ್ನುವುದನ್ನು ತುಂಬಾ ಗಂಭೀರವಾಗಿಯೇ ಪ್ರತಿಪಾದಿಸಿದರು.

ವೈವಿಧ್ಯಮಯ ವಿಷಯ:–

ಮುಖ್ಯ ಸಭಾಂಗಣವನ್ನು ಒಳಗೊಂಡಂತೆ 13 ಸ್ಥಳದಲ್ಲಿ ಏಕಕಾಲದಲ್ಲಿ ಹಲವು ಚರ್ಚೆಗಳು ನಡೆದವು. ಕಾಸ್ಟ, ಕ್ಲಾಸ್ & ಐಡೆಂಟಿಟಿ, ಸೆಕ್ಯೂಲರಿಸಂ & ಕಲ್ಚರಲ್ ಪ್ಲುರಲಿಸಂ, ಸೋಶಿಯಲ್ ಮೂಮೆಂಟ್ & ಸೋಶಿಯಲ್ ಟ್ರಾಸ್ಫೋರ್ಮೇಶನ್, ಪೊಲಿಟಿಕಲ್ ಪವರ್ & ಸೋಷಿಯಲ್ ಜಸ್ಟಿಸ್, ವ್ಹೂಮೆನ್ ಮೂಮೆಂಟ್: ಇಕ್ವಾಲಿಟಿ, ಡೆವಲ್ಪಮೆಂಟ್, ಎಂಪವರ್‌ಮೆಂಟ್, ಮೈನಾರಿಟಿ ಕೊಶ್ಚನ್, ರಿಲಿಜಿಯನ್ & ಸೋಶೀಯಲ್ ಜಸ್ಟಿಸ್, ಮೀಡಿಯಾ & ಕಾಸ್ಟ, ದಲಿತ ಲಿಟ್ರೇಚರ್, ಕಲ್ಚರ್ , ಆರ್ಟ & ಅಂಬೇಡ್ಕರ್, ಕಲ್ಚರ್ ಡೋಮಿನೆನ್ಸ & ಸೋಶಿಯಲ್ ಜಸ್ಟೀಸ್, ಅಂಬೇಡ್ಕರ್– ಸೋಶಿಯಲ್ ಜಸ್ಟೀಸ್ ಎಂಡ್ ಸೋಷಿಯಲ್ ಮೂಮೆಂಟ್ ....ಇತ್ಯಾದಿ ಹತ್ತು ಹಲವು ವಿಷಯಗಳು ಚರ್ಚೆಗೊಂಡವು.

ಹಲವು ಬಾರಿ ಪುನರಾವರ್ತನಾ ದೋಷ ಕಾಡಿದರೂ ಅಂಬೇಡ್ಕರ್, ಮಾರ್ಕ್ಸ್, ಗಾಂಧೀ..... ಮುಂತಾದವರ ತಾತ್ವಿಕತೆಯ ಹಿನ್ನೆಲೆಯಲ್ಲಿ ಇಡೀ ಭಾರತವನ್ನು, ಹಾಗೇಯೇ ಅಂಬೇಡ್ಕರ್ ಅವರನ್ನೂ ವಿಶ್ಲೇಷಿಸಿದರು. ಅಲ್ಲಿಗೆ ಬಂದ ಹಲವು ಅತಿಥಿಗಳು ಕೂಡ ನಾಡಿನ ಗಮನ ಸೆಳೆದವರೆ. ರಾಜೀವ್ ಭಾರ್ಗವ್, ಅರುಣ್ ರಾಯ್, ಜಿ. ಹರಗೋಪಾಲ, ಪ್ರಭಾತ ಪಟ್ನಾಯಕ್, ಆನಂದ ತೇಲ್ತುಬ್ಡೆ, ಆಶಿಶ್ ನಂದಿ, ಟ್ರೀನಾ ಜೋನ್ಸ, ಗಣೇಶ ದೇವಿ, ಎಸ್.ಕ ಥೊರಟ್ ಮುಖರ್ಜಿ, ಎಚ್.ಎಸ್ ನಾಗಮೋಹನದಾಸ ಹೀಗೆ ರಾಷ್ಟ್ರೀಯ ಅಂತಾರಾಷ್ಟ್ರೀಯ ಚಿಂತಕರು ಮತ್ತು ಕರ್ನಾಟಕದ ಮುಖ್ಯ ಲೇಖಕರು, ಹೋರಾಟಗಾರರು ವಿಚಾರಸಂಕಿರಣದಲ್ಲಿ ತಮ್ಮ ಚಿಂತನೆ ಹಂಚಿಕೊಂಡರು. ಬಂದ ವಿದ್ವಾಂಸರೆಲ್ಲರೂ ಅಂಬೇಡ್ಕರ್‌ವಾದಿಗಳಾಗಿರಲಿಲ್ಲ. ಬದಲಾಗಿ ಬೇರೆ ಬೇರೆ ವೈಚಾರಿಕ ಸ್ಕೂಲಿಗೆ ಸೇರಿದವರಾಗಿದ್ದರು; ಡಾ. ಅಂಬೇಡ್ಕರ್ ಅವರನ್ನು ಗೌರವಯುತವಾಗಿ ವಿಮರ್ಶಿಸುವವರಾಗಿದ್ದರು. ಹಾಗಾಗಿ ಇಲ್ಲಿ ಹಲವರು ಸಂಶಯಿಸಿದಂತೆ ಅಂಬೇಡ್ಕರ್ ಅವರ ಕೀರ್ತನೆ ನಡೆಯಲಿಲ್ಲ. ಬದಲಾಗಿ ಅಂಬೇಡ್ಕರ್ ಅವರನ್ನು ಓದುವ ಹಲವು ದಾರಿಗಳು ಅನಾವರಣಗೊಂಡವು. ಹಾಗಾಗಿ ಭಾಗವಹಿಸಿದ ಹಲವರಾಗಿದರೂ ಅಂಬೇಡ್ಕರ್ ಅವರ ವಿಚಾರ, ಬರಹದ ವ್ಯಾಪ್ತಿ, ಆಳ ಮತ್ತು ಮಿತಿಗಳ ಅರಿವಾಗದೇ ಇರಲಿಲ್ಲ. ಆ ದೃಷ್ಟಿಯಿಂದ ಸಮ್ಮೇಳನ ಯಶಸ್ಸನ್ನು ನೋಡಬೇಕಾಗಿದೆ.

ರಾಜ್ಯದ ಮತ್ತು ದೇಶದ ಹಲವು ಭಾಗಗಳಿಂದ ಪ್ರತಿನಿಧಿಗಳು ದೊಡ್ಡ ಸಂಖ್ಯೆಯಲ್ಲಿ ಬಂದು ಭಾಗವಹಿಸಿದರು. ಹಾಗೆ ಒಂದೆರಡು ಗೋಷ್ಠಿಗೆ ಹೊರತುಪಡಿಸಿದರೆ ಎಲ್ಲಾ ಗೋಷ್ಠಿಗಳಿಗೆ ಜನರ ಕೊರತೆ ಇರಲಿಲ್ಲ. ಇನ್ನಷ್ಟು ಖುಷಿಯಾಗಿದ್ದು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ ಯುವಕರ ದಂಡು ನೋಡಿ ಮತ್ತು ಆ ಯುವಕರು ದೇಶದ ಆಗು ಹೋಗುಗಳ ಬಗ್ಗೆ ಗಂಭೀರವಾಗಿ ಆಲೋಚಿಸ ಬಲ್ಲವರಾಗಿದ್ದರು. ಇಡೀ ರಾಜ್ಯದಲ್ಲಿ ಬಂದು ಇಲ್ಲಿ ಭಾಗವಹಿಸಿದ ಯುವಜನರ ದಂಡು ನಿಜವಾದ ಅಂಬೇಡ್ಕರ್‌ರನ್ನು ಎದೆಯಲ್ಲಿಟ್ಟುಕೊಂಡು ಕೋಮುವಾದಿಗಳ ವಿರುದ್ಧ ಕಾರ್ಯಾಚರಣೆಗಿಳಿದರೆ, ಕೋಮುವಾದ, ಬಂಡವಾಳವಾದದ ವಿರುದ್ಧದ ಒಂದು ಸಂಘಟಿತ ಹೋರಾಟಕ್ಕೆ ಮುಂದಾದರೆ ಖಂಡಿತ ಬದಲಾವಣೆಯನ್ನು ಕಾಣುವ ದಿನ ತುಂಬಾ ದೂರ ಇರದು. ದಲಿತರನ್ನು ಪ್ರತಿನಿಧಿಸುವ ಚಳುವಳಿಗಳ ಸತ್ವಹೀನತೆಯನ್ನು ಕೆಲವು ಗೋಷ್ಠಿಗಳು ಮುಂದಿಟ್ಟರೆ, ಸ್ವಂತ ದಲಿತ ಚಳುವಳಿಯಲ್ಲಿ ತೊಡಗಿಸಿಕೊಂಡವನು, ಹಲವು ಸಾಮೂಹಿಕ ಸಂಘಟನೆಗಳಲ್ಲಿ ತೊಡಗಿಸಿಕೊಂಡವರು, ಲೇಖಕರು ವೇದಿಕೆಯಲ್ಲಿ ಆತ್ಮವಿಮರ್ಶೆ ಮಾಡಿಕೊಂಡದ್ದು ಮಾತ್ರವಲ್ಲ. ಸಂವಿಧಾನದ ಅಮಾನ್ಯತೆಯ ಸಂಚಿನ ವಿರುದ್ಧ, ತೀವ್ರವಾಗಿ ಬೆಳೆಯುತ್ತಿರುವ ಫ್ಯಾಸಿಸ್ಟ ಮತ್ತು ಖಾಸಗೀ ಬಂಡವಾಳದ ಕ್ರೌರ್ಯದ ವಿರುದ್ಧ ಒಂದು ಸಂಘಟಿತ ಹೋರಾಟವನ್ನು ನಡೆಸಬೇಕೆನ್ನುವ ಅರಿವಿನ ದೀವಿಗೆಯನ್ನು ಈ ಸಮ್ಮೇಳನ ಹೊತ್ತಿಸಿದ್ದು ಕೂಡ ತೀರಾ ಮಹತ್ವದ್ದೆ.

3. ಸಮ್ಮೇಳನ ಪ್ರಶ್ನಾತೀತವಾಗಿತ್ತೇ? ಹಾಗೇನೂ ಇಲ್ಲ. ಸರ್ಕಾರ'ವನ್ನು ಹೊಗಳಲು ಪೈಪೋಟಿಗೆ ಇಳಿದಂತೆ ಕೆಲವರು ಮಾತನಾಡಿದರೆ ಇನ್ನು ಹಲವರು ಯಾವ ಋಣದ ಭೂತವನ್ನು ಲೆಕ್ಕಿಸದೇ ದಲಿತರ ಕುರಿತ ಸರ್ಕಾರದ ನಿಲುಮೆಯ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡಿದರು. ಸರ್ಕಾರದ ನಡೆಯ ಕುರಿತು ಒಂದು ಎಚ್ಚರಿಕೆಯನ್ನೂ ಕೊಟ್ಟರು. ಸರ್ಕಾರದ ರಾಜಾತಿಥ್ಯದ ನಡುವೆ ಕೂಡ ಸರ್ಕಾರದ ನೀತಿಯನ್ನೇ ಪ್ರಶ್ನಿಸುವ ಕೆಲಸ ಹಲವರಿಂದ ನಡೆಯಿತು. ಕೆಲವು ಹಿರಿಯರ ಮಾತುಗಳು ವಿವಾದಾತ್ಮಕವಾಗಿದ್ದವು. ಹಲವುಕಡೆ ಒಂದೇ ವೇದಿಕೆಯಲ್ಲಿ ಅಂಬೇಡ್ಕರ್‌ವಾದಿಗಳು, ಮಾರ್ಕ್ಸವಾದಿಗಳು, ಗಾಂಧಿವಾದಿಗಳು, ಲೋಹಿಯಾವಾದಿಗಳು, ಕಾನ್ಶಿರಾಂವಾದಿಗಳು ಕೂತು ಸೌಹಾರ್ದತೆಯಿಂದ ಚರ್ಚಿಸಿದ್ದು ಕೂಡ ವಿಶೇಷವೇ. (ಆದರೆ ಅವರೆಲ್ಲಾ ಒಟ್ಟಾಗಿ ಕಾರ್ಯಾಚರಣೆಗೆ ಇಳಿಯುವುದು ಬಾಕಿ ಇದೆ. ಕೋಮುವಾದ, ಜಾತಿವಾದ ಮತ್ತು ಬಂಡವಾಳವಾದದ ವಿರುದ್ಧ ಇವರೆಲ್ಲಾ ಒಟ್ಟಾಗಿ ಹೋರಾಟ ಮಾಡುವ ದಿನಗಳನ್ನು ಜನರಂತೂ ನಿರೀಕ್ಷಿಸುತ್ತಿದ್ದಾರೆ.) ಸಮ್ಮೇಳನದ ಕೊನೆಯಲ್ಲಿ ಮುಖ್ಯ ಮಂತ್ರಿಗಳೊಂದಿಗಿನ ಸಂವಾದದಲ್ಲಿ ಹಲವು ಒಳ್ಳೆಯ ಪ್ರಶ್ನೆಗಳು ಬಂದವಾದರೂ ಆ ಇಡಿ ಗೋಷ್ಠಿಯೇ ಅಲ್ಲಿ ಅನಗತ್ಯವಾಗಿತ್ತು. ಒಟ್ಟೂ ಸ್ವರೂಪಕ್ಕೆ ಈ ಸಂವಾದ ಹೊರಗಿನದಾಗೇ ಕಾಣುತ್ತಿತ್ತು. ಒಟ್ಟೂ ಖರ್ಚು 23 ಕೋಟಿ ರೂಪಾಯಿ ಎಂದು ಹೇಳಲಾಗಿದ್ದು ಕೇಳಿ ಬೆಚ್ಚಿ ಬೀಳುವುದೇ. ಎಸ್‌ಸಿ–ಎಸ್ಟಿಯ ಅಭಿವೃದ್ಧಿಗೆ ಮೀಸಲಾಗಿರಬೇಕಾದ ಹಣ ಅಪವ್ಯಯವಾಗಿದ್ದಂತೂ ಸತ್ಯ. ಎಲ್ಲವೂ ಇವೆಂಟ್ ಮ್ಯಾನೆಜ್ಮೆಂಟ್‌ನ ಪ್ರಭಾವ. ಒಂದಿಷ್ಟು ಹಿಡಿತದಲ್ಲಿ ಸಮ್ಮೇಳನ ನಡೆಸಿದ್ದರೆ ಇಂತಹದ್ದೇ ಇನ್ನೊಂದು ಸಮಾವೇಶವನ್ನು ಉತ್ತರ ಕರ್ನಾಟಕದ ಭಾಗದಲ್ಲಿ ನಡೆಸಬಹುದಾಗಿತ್ತು.

ಎಸ್‌ಸಿ–ಎಸ್ಟಿಯವರಿಗೆ ಮೀಸಲಿಟ್ಟಿರುವ ಹಣದ ಬದಲು ಸಾಮಾನ್ಯ ಖಾತೆಯಿಂದ ಖರ್ಚನ್ನು ಭರಿಸಬೇಕೆನ್ನುವ ಒತ್ತಾಯವನ್ನು ನಾವು ಅಲ್ಲಗಳೆಯಲು ಸಾಧ್ಯವಿಲ್ಲ. ಕರೆಯೋಲೆಯಲ್ಲಿ ಹೆಸರಿದ್ದರೂ –ಎಡಪಕ್ಷಗಳ ನಾಯಕರನ್ನು ಹೊರತು ಪಡಿಸಿ– ಉಳಿದ ಯಾವ ಪಕ್ಷದ ನಾಯಕರೂ ಭಾಗವಹಿಸದಿರುವುದು ಅಚ್ಚರಿಗೆ ಕಾರಣವಾಯಿತು. ಪ್ರತಿನಿಧಿಗಳ ಗೋಳು, ಸೆಕ್ಯುರಿಟಿಯ ಹೆಸರಿನಲ್ಲಿ ನಡೆದ ಕಿರಿಕಿರಿ, ಭಾಷಣಕಾರರಿಗೂ ಮುಟ್ಟದ ಕರೆಯೋಲೆ, ಅಬ್ಬರದ ಕುಣಿತ/ವಾದ್ಯದ ನಂತರ ಕೊನೆಯಲ್ಲಿ ಖಾಲಿ ಸಭಾಂಗಣದಲ್ಲಿ ಹಿರಿಯ ಹಿಂದುಸ್ತಾನಿ ಕಲಾವಿದ ವೆಂಕಟೇಶಕುಮಾರ ಅವರ ವಚನಗಾಯನ, ಇಂಥ ಹತ್ತಾರು ದೋಷಗಳ ಬಗ್ಗೆ ಹೇಳಬಹುದಾದರೂ ಅದಕ್ಕೆ ಈಗ ಸೂಕ್ತ ಸಮಯವಲ್ಲ. (ಈ ಸಮ್ಮೇಳನದ ಪೂರ್ವಭಾವಿಯಾಗಿ 20 ರಂದು ಸಂಜೆ ಪ್ರತಿ ಜಿಲ್ಲೆಯ ಜಿಲ್ಲಾ ಕೇಂದ್ರದಲ್ಲಿ ನಡೆದ ಅಂಬೇಡ್ಕರ್ ನಮನ ಕಾರ್ಯಕ್ರಮಗಳು ಕೂಡ ಹಲವು ಜಿಲ್ಲೆಯಲ್ಲಿ ಪೂರ್ವತಯಾರಿ ಇಲ್ಲದೆ ನಾಮ್ಕಾವಾಸ್ತೆ ನಡೆಯಿತು. ಬೀದಿನಾಟಕಕ್ಕೆ 2 ಕೋಟಿ ನೀಡಿದ್ದಾರೆ ಎಂಬ ಮಾತು ಹರಿದಾಡುತ್ತಿದೆ. ಇದು ಹಲವು ಕಡೆ ನಡೆದಂತಿಲ್ಲ) ಇಲ್ಲಿ ಭಾಷಣ ಮಾಡಿದವರಲ್ಲಿ ಕೆಲವರು ಪಂಚತಾರಾ ಹೊಟೇಲಿನಲ್ಲಿ ಉಳಿದಿದ್ದಾರೆನ್ನುವ ಕಾರಣದಿಂದ ಅವರ ಬದ್ಧತೆಯನ್ನು, ಈ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯನ್ನು ಸಂಶಯದಿಂದ ಕಾಣಬೇಕಾಗಿಲ್ಲ. ಹಾಗೆಯೇ ನಮ್ಮ ಯುವ ಜನಾಂಗ ಸಂಘಟಕರ ಆತಿಥ್ಯಕ್ಕೆ ಮರುಳಾಗಬೇಕಾಗಿಯೂ ಇಲ್ಲ.

ಸರ್ಕಾರ ಅಂಬೇಡ್ಕರ್ ಬಗ್ಗೆ ಒಂದು ಅಂತಾರಾಷ್ಟ್ರೀಯ ಸಮ್ಮೇಳನ ಮಾಡಿ ಕೈತೊಳೆದುಕೊಳ್ಳುವಂತಿಲ್ಲ. ಅಲ್ಲಿ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಕ್ರಿಯೆಗೆ ಇಳಿಯ ಬೇಕಾಗಿದೆ. ಭಾಷಣ ಮಾಡಿದ ಮಾತ್ರಕ್ಕೆ ಸಮಸ್ಯೆ ನಿಲ್ಲದು; ದಲಿತರನ್ನು ಒಳಗೊಂಡಂತೆ ಶೋಷಿತರಿಗೆ ಭೂಮಿ, ಉದ್ಯೋಗದ ಜೊತೆಗೆ ಘನತೆಯಿಂದ ಬದುಕುವ ವಾತಾವರಣ ನಿರ್ಮಾಣಕ್ಕಾಗಿ ಸರ್ಕಾರವನ್ನು ಗಂಭೀರವಾಗಿ ಎಚ್ಚರಿಸುವ ಸವಾಲನ್ನು ಭಾಷಣಕಾರರು ಸ್ವೀಕರಿಸಬೇಕಾಗಿದೆ.

ಡಾ.ಅಂಬೇಡ್ಕರ್ ಸಂಕೇತವಾಗುವ ಬದಲು ನಮ್ಮೊಳಗಿನ ಪ್ರಜ್ಞೆ ಆಗಬೇಕಾಗಿದೆ.

●

JANASHAKTHI KANNADA VARA PATRIKE AUGUST 7-13, 2017 Price : Rs. 10/- Date of Publication: 04 AUGUST 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಹ್ಯಾಂಬರ್ಗ್ ನಲ್ಲಿ ಜಿ–20 ಶೃಂಗಸಭೆಗೆ ಲಕ್ಷ ಪ್ರತಿಭಟನಾಕಾರರು "ನರಕಕ್ಕೆ ಸ್ವಾಗತ" ಎಂದ ಭೂತಗಳ ಮೆರವಣಿಗೆ



ನಾಗರಾಜ್ ನಂಜುಂಡಯ್ಯ

ಜಿ–20 ಹ್ಯಾಂಬರ್ಗ್ ಶೃಂಗ ಸಭೆ ಆಳವಾದ ಬಿಕ್ಕಟ್ಟಿನಲ್ಲಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಮೇಲೆತ್ತುವ ಪ್ರಯತ್ನದಲ್ಲಿದೆ. ಆದರೆ ಮತ್ತೊಂದೆಡೆ ಬಂಡವಾಳಶಾಹಿ ಶೋಷಣೆಯ ವಿರುದ್ಧ ನಡೆದ ಪ್ರತಿಭಟನೆಗಳು ಜನತೆಯ ಕೋಪ–ಅಸಮಾಧಾನಗಳ ಅಭಿವ್ಯಕ್ತಿಯಾಗಿ ಪ್ರತಿಬಿಂಬಿತವಾಗಿವೆ. ಇದು ಜನತೆಯ ಉತ್ತಮ ಬದು–ಕಿಗೆ ಆಶಾದಾಯಕವಾಗಿ ಪರಿಣಿಮಿಸಿದೆ. ಜಿ–20 ರ ಶೃಂಗ ಸಭೆಯ ದಾಖಲಾ ಪಟ್ಟಿಯಲ್ಲಿ ಪ್ರತಿಭಟನೆಕಾರರ ಬೇಡಿಕೆಗಳು ಒಳಗೊಂಡಿಲ್ಲದಿರುವುದು, ಅವರನ್ನು ನಿರಾಸೆಗೊಳಿಸಿಲ್ಲ ಅಥವಾ ಉತ್ಸಾಹವನ್ನು ಕುಗ್ಗಿಸಿಲ್ಲ. ಹ್ಯಾಂಬರ್ಗ್ ರಸ್ತೆಗಳಲ್ಲಿನ ಪ್ರತಿಭಟನೆಗಳು, ರಸ್ತೆ ದುರ್ಗಮವಾಗಿದ್ದರೂ ಗುರಿ ತಲುಪುವ ಯುವ ಪ್ರತಿಭಟನೆಕಾರರ ಹುಮ್ಮಸ್ಸು –ಉತ್ಸಾಹಕ್ಕೆ ನಿರಾಶೆ ಎಂಬುದಿಲ್ಲ ಎಂದು ತೋರಿಸಿಕೊಟ್ಟಿದೆ.

ಜರ್ಮನಿಯ ಹ್ಯಾಂಬರ್ಗ್ ನಲ್ಲಿ ಇತ್ತೀಚೆಗೆ ನಡೆದ, ಜಿ–20 ಶೃಂಗಸಭೆಯ ಹೊರಗೆ, ಅದಕ್ಕೆ ರಸ್ತೆಗಳಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಿರಂತರತೆ ವಿರುದ್ಧ ಕುದಿಯುತ್ತಿರುವ ಅಸಮಾಧಾನದ ಪ್ರತಿಬಿಂಬವಾದ ಪ್ರತಿಭಟನೆಗಳ ಮೂಲಕ ಸ್ವಾಗತ ಕೋರಿದ್ದವು. ಇವನ್ನು ಪ್ರಮುಖ ಸುದ್ದಿ ಮಾಧ್ಯಮಗಳಲ್ಲಿ ಬಿತ್ತರಿಸಲೇ ಇಲ್ಲ. ಬಹು ದೊಡ್ಡ ಸಂಖ್ಯೆಯಲ್ಲಿ ಯುವಕ–ಯುವತಿಯರೆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಹಣಕಾಸು ಬಂಡವಾಳದ ಶೋಷಣೆಯ ಪರಮಾವಧಿಯಿಂದಾಗಿ, ತಮ್ಮ ಭವಿಷ್ಯಕ್ಕೆ ಬಂದೊದಗಿರುವ ಆಪತ್ತಿನ ಈ ಪ್ರಕ್ಷುಬ್ಧ ಸನ್ನಿವೇಶ ಸೃಷ್ಟಿಸಿದ ನೀತಿ ರೂಪಕದ ಮೇಲೆ ಇದ್ದ ಅಸಮ್ಮತಿಯನ್ನು ವ್ಯಕ್ತಪಡಿಸುವಲ್ಲಿ ಈ ಪ್ರತಿಭಟನೆಗಳು ಹೊಸ ಪರ್ಯಾಯ ಯುಗಕ್ಕೆ ದಿಕೂಚಿಯಾಗಿದ್ದವು.

ಈ ಸಂದರ್ಭದಲ್ಲಿ ಪೋಲೀಸರಿಂದ ನಡೆದ ಕ್ರೂರ ಸ್ವರೂಪದ ಕ್ರೌರ್ಯವನ್ನು ಧೈರ್ಯದಿಂದಲೇ ಎದೆಗುಂದದೆ ಎದುರಿಸಿದ್ದು ಮುಂದಿನ ದಿನಗಳಲ್ಲಿ ಈ ಹೋರಾಟ ವಿಶ್ವವ್ಯಾಪಿ ವಿಸ್ತಾರಗೊಳ್ಳುವ ಎಲ್ಲ ಸೂಚನೆಗಳು ಕಂಡು ಬಂದವು. ಸಮ್ಮೇಳನದ ಮುನ್ನಾ ಮತ್ತು ಸಮ್ಮೇಳನ ನಡೆಯುತ್ತಿದ್ದ ಸಮಯದ ಎಲ್ಲಾ ದಿನಗಳಲ್ಲಿಯೂ ಪ್ರತಿಭಟನೆಯ ಸೃಜನಶೀಲತೆಯು ವ್ಯಾಪಕವಾಗಿ ಪ್ರದರ್ಶಿಸಲ್ಪಟ್ಟಿತ್ತು. ಪ್ರತಿಭಟನೆಯ ಪೂರ್ವ ಸಿದ್ಧತೆಗಳು ಒಂದು ತಿಂಗಳ ಮುಂಚಿತವಾಗಿಯೇ ಆರಂಭಗೊಂಡಿದ್ದವು. ಎಡ ಪಕ್ಷ–ಡೈ ಲಿಂಕ್, ಜರ್ಮನ್ ಕಮ್ಯೂನಿಸ್ಟ್ ಪಕ್ಷ–ಡಿ.ಕೆ.ಪಿ., ವಿವಿಧ ಸಾಮಾಜಿಕ ಚಳುವಳಿಗಳು, ಪರಿಸರವಾದಿಗಳು, ಚರ್ಚ್ ಗುಂಪುಗಳು ಮತ್ತು ಸಮಾಜದ ವಿವಿಧ ಭಾಗಗಳನ್ನು ಪ್ರತಿನಿಧಿಸುವ ಹಲವಾರು ಸಂಘಟನೆಗಳು ಸೇರಿ, ಪ್ರತಿಭಟನೆಗಳನ್ನು ಆಯೋಜಿಸಿದ್ದರು. ಇತರೆ ದೇಶಗಳ ಪಕ್ಷಗಳು ಮತ್ತು ಗುಂಪುಗಳೊಂದಿಗೆ ಸಂಯೋಜನೆ ಸ್ಥಾಪಿಸಲಾಗಿತ್ತು. ಪ್ರತಿಭಟನೆಗಳ ಹೊರತಾಗಿ, ವಿವಿಧ ವಿಷಯಗಳ ಕುರಿತಂತೆ ವಿಚಾರಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಜಿ–20 ಶೃಂಗಸಭೆಯ ಎರಡೂ ದಿನಗಳಲ್ಲಿಯೂ ಪರ್ಯಾಯವಾಗಿ 'ಜನತಾ ಶೃಂಗಸಭೆ' ಯನ್ನು ನಡೆಸಲಾಗಿತ್ತು. ಇಂತಹ ವ್ಯಾಪಕ ಯೋಜನೆ ಮತ್ತು ಸಿದ್ಧತೆಗಳಿಂದಾಗಿ ಒಂದು ಲಕ್ಷಕ್ಕೂ ಹೆಚ್ಚು ಪ್ರತಿಭಟನೆಕಾರರು ಹ್ಯಾಂಬರ್ಗ್‌ನಲ್ಲಿ ಜಮಾಯಿಸಿದ್ದರು.

ಮಾರ್ಕೆಲ್ "ಪ್ರಜಾಪ್ರಭುತ್ವದ" ಬಂಡ್ವಾಳಿಲ್ಲದ ಬಡಾಯಿ

ಜರ್ಮನಿಯ ಸರ್ಕಾರವು ಪ್ರತಿಭಟನೆಯನ್ನು ಎದುರಿಸುವ ಸಲುವಾಗಿ ಮತ್ತು ಭದ್ರತೆಯ ಹಿನ್ನಲೆಯಲ್ಲಿ 20 ಸಾವಿರಕ್ಕಿಂತ ಹೆಚ್ಚು ಪೋಲೀಸ್ ಪಡೆಗಳನ್ನು ನಿಯೋಜಿಸಿತ್ತು. ಇತ್ತೀಚಿನ ತಂತ್ರಜ್ಞಾನವನ್ನು ಬಳಸಿಕೊಂಡು ಸಂವಹನ ಮತ್ತು ಸಂಪರ್ಕಗಳನ್ನು ಹ್ಯಾಕ್ ಮಾಡಲಾಯಿತು. ಡ್ರೋನ್ಸ್ ಮತ್ತು ಹೆಲಿಕಾಪ್ಟರ್‌ಗಳನ್ನು ವ್ಯಾಪಕವಾಗಿ ಬಳಸಲಾಗಿತ್ತು. ಮೋಡಗಳಲ್ಲಿ ಹೆಲಿಕಾಪ್ಟರ್‌ಗಳು ನಿಲುಗಡೆ ಮಾಡಿರುವಂತೆ ಕಂಡು ಬಂದಿದ್ದವು. ಎಂಬ ಭಾವನೆ ಜನರಲ್ಲಿ ಮೂಡಿತ್ತು. ಜರ್ಮನಿಯ ಛಾನ್ಸಲರ್ ಏಂಜಲಾ ಮಾರ್ಕೆಲ್ ರವರು "ಬಡಾಯಿ ಕೊಚ್ಚಿಕೊಂಡದ್ದು ಹೀಗೆ";– ತನ್ನ ಸರ್ಕಾರವು ಜಗತ್ತಿಗೆ ತೋರಿಸಲು ಬಯಸುವುದೇನೆಂದರೆ, ಪ್ರತಿಭಟನೆಗಳಿಗೆ ಅನುಮತಿಕೊಡುವ ಮೂಲಕ ಪ್ರಜಾಪ್ರಭುತ್ವವನ್ನು ನಿಜವಾದ ಅರ್ಥದಲ್ಲಿ ಜರ್ಮನಿಯಲ್ಲಿ ಹೇಗೆ ನಿಭಾಯಿಸುತ್ತಿದ್ದೇವೆ.? ಮಾನವ ಹಕ್ಕುಗಳನ್ನು ಕಾಪಾಡುವಲ್ಲಿ ತನ್ನ ಪರಾಕ್ರಮವನ್ನು ಪ್ರದರ್ಶಿಸುವ ಹಾದಿಯನ್ನು ಮಾತ್ರವಲ್ಲದೇ ಜರ್ಮನಿ ಅದರ ಉನ್ನತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವ ಎಲ್ಲಾ ಯೋಜನೆಗಳನ್ನು ಜಗತ್ತಿಗೆ ತೋರಿಸುವ ಬಡಾಯಿತನದ ಬೂಟಾಟಿಕೆಯಾಗಿತ್ತು."



ಪ್ರತಿಭಟನೆಕಾರರನ್ನು ಬಗ್ಗು ಬಡಿದ ಕ್ರೂರತನದ ಬಗ್ಗೆ ಜರ್ಮನಿಯಲ್ಲಿ ಅತೀ ಹೆಚ್ಚು ಮಾರಾಟವಾಗುವ ದೈನಂದಿನ ಪತ್ರಿಕೆ "ಡೆರ್ ಸ್ಪೀಗೆಲ್" (Der Spiegel) ಹೀಗೆ ವರದಿ ಮಾಡಿದೆ : "ಪೋಲೀಸ್ ನಿಯೋಜನೆ ಮತ್ತು ಹಿಂಸೆ 1970ರ ದಶಕದಲ್ಲಿ ಪಶ್ಚಿಮ ಜರ್ಮನಿಯಲ್ಲಿ ನಡೆದ ಹಿಂಸೆಗಳನ್ನು ನೆನಪಿಸಿತ್ತು. ಮಾತ್ರವಲ್ಲದೆ, ಅಂದಿನಿಂದ ನೋಡಿರದ ರೀತಿಯಲ್ಲಿ ಪ್ರತಿಭಟನೆಕಾರರ ಮೇಲೆ ದೌರ್ಜನ್ಯವನ್ನು ಕ್ರೂರವಾಗಿ ನಡೆಸಲಾಯಿತು. ಮಾಧ್ಯಮಗಳು ಎಂದಿನಂತೆ ಬೆರಳೆಣಿಕೆಯಷ್ಟು ಅರಾಜಕತಾವಾದಿಗಳ ಹಿಂಸಾಚಾರದ ಬಗ್ಗೆ ಒತ್ತು ನೀಡಿವೆ. ಆದರೆ, ಸಾವಿರಾರು ಮಂದಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ನಡೆದ ಪೋಲೀಸರ ಬರ್ಬರ ದೌರ್ಜನ್ಯಗಳನ್ನು ಬೇಕೆಂತಲೇ ಕಡೆಗಣಿಸಿದ್ದಾರೆ. ಎಂದಿನಂತೆ ಅರಾಜಕತಾವಾದಿಗಳು ತಮ್ಮ ಕ್ರಿಯೆಗಳ ಮೂಲಕ ಪ್ರತಿಭಟನಾಕಾರರ ಬೇಡಿಕೆಗಳು ಮತ್ತು ಚರ್ಚಿಸಲಾದ ಪರ್ಯಾಯಗಳ ಬಗ್ಗೆ ಪ್ರಪಂಚದ ಗಮನವನ್ನು ಬೇರೆಡೆಗೆ ತಿರುಗಿಸಲು ಆಳುವ ವರ್ಗಗಳ ಜತೆ ಸಹಕರಿಸಿದ್ದಾರೆ.

ಫಾಕ್ಸ್ ನ್ಯೂಸ್ ನಂತಹ ತೀವ್ರ ಸಂಪ್ರದಾಯವಾದಿ ಮಾಧ್ಯಮಗಳು ಒಂದು ಹೆಜ್ಜೆ ಮುಂದೆ ಹೋಗಿ, "ಪ್ರತಿಭಟನೆಕಾರರಿಗೆ ಅಮೆರಿಕಾದ ಮೇಲೆ ಕೋಪ, ಏಕೆಂದರೆ ಈಗ ಜಗತ್ತಿನ ಜನ ಬಯಸುವ 'ಸಾಮಾಜಿಕ ನ್ಯಾಯ'ದ ಹೊರೆಯನ್ನು ಅಮೆರಿಕ ಭರಿಸಲು ನಿರಾಕರಿಸಿದೆ." ಎಂಬ ಅಪ್ಪಟ ಸುಳ್ಳುಗಳನ್ನು ಪ್ರಸಾರ ಮಾಡಿತು.

ಜಿ–20 ಎಷ್ಟು ಸಮಂಜಸ?

ಶೃಂಗಸಭೆಯಲ್ಲಿ ಪಾಲ್ಗೊಳ್ಳುವ 20 ಅಥವಾ 21 ದೇಶಗಳ ನಾಯಕರಿಗೆ, ಇಡೀ ಜಗತ್ತಿನ ಭವಿಷ್ಯದ ಬಗ್ಗೆ ನಿರ್ಧರಿಸಲು ಹೇಗೆ ಸಾಧ್ಯವಾಗುತ್ತದೆ? ಎಂಬ ಪ್ರಶ್ನೆಯನ್ನು ಪ್ರತಿಭಟನಾ ನಿರತರು ಎತ್ತಿದ್ದಾರೆ. ಇದು ಸೂಕ್ತವಾದ ಪ್ರಶ್ನೆಯಾದರೂ ಸಹ, ಜಿ–20 ಸಮೂಹವು; ಒಟ್ಟು ವಿಶ್ವ ಜಿಡಿಪಿಯ (ಒಟ್ಟು ಉತ್ಪನ್ನದ) ಶೇ.80ರಷ್ಟು, ಮತ್ತು ಜಾಗತಿಕ ವ್ಯಾಪಾರದ ಶೇ. 75ರಷ್ಟು ಭಾಗವನ್ನು ಹಾಗೆಯೇ, ಜಗತ್ತಿನ ಜನಸಂಖ್ಯೆಯ ಸುಮಾರು ಮೂರನೇ–ಎರಡರಷ್ಟು (2/3) ಜನಸಂಖ್ಯೆಯನ್ನು ಪ್ರತಿನಿದಿಸುತ್ತದೆ. ಎಂಬುದು ನಿಜ. ಆದಾಗ್ಯೂ 150ಕ್ಕಿಂತ ಹೆಚ್ಚು ದೇಶಗಳು ಜಿ–20 ರ ಆಚೆ ಇರುವುದೂ ನಿಜ. ಹೀಗೆ ಇತರೆ ಹೊರಗುಳಿದಿರುವ ರಾಷ್ಟ್ರಗಳ ಸಾರ್ವಭೌಮತ್ವ ಹಕ್ಕುಗಳ ಬಗ್ಗೆ ಅಸ್ಪಷ್ಟತೆಯ ಅಲಕ್ಷ್ಯದೊಂದಿಗೆ ಜಿ–20 ಶೃಂಗ ಸಭೆಯಲ್ಲಿನ ನಾಯಕರುಗಳು ಜಾಗತಿಕ ಬೆಳವಣಿಗೆಗೆ, ಅಂತರ ರಾಷ್ಟ್ರೀಯ ವ್ಯಾಪಾರ ಮತ್ತು ಹಣಕಾಸು ಮಾರುಕಟ್ಟೆ ನಿಯಂತ್ರಣ ಕುರಿತು ಚರ್ಚಿಸಿ, ತೆಗೆದುಕೊಳ್ಳುವ ನಿರ್ಣಯಗಳನ್ನು ಇಡೀ ಜಗತ್ತಿನ ರಾಷ್ಟ್ರಗಳು ಪಾಲಿಸಬೇಕೆಂಬುದು ಎಷ್ಟು ಸರಿ ಎಂಬ ಪ್ರತಿಭಟನೆಕಾರರು ಕೇಳುವ ಪ್ರಶ್ನೆಗಳು ಸಮಂಜಸವಲ್ಲವೇ?

ನಿರುದ್ಯೋಗ ದರದ ಹೆಚ್ಚಳಕ್ಕೆ ಹೊಣೆಗಾರರು ಯಾರು.?

ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಹೆಚ್ಚಿನ ಯುವ ಜನರು ಎತ್ತಿರುವ ಮತ್ತೊಂದು ಪ್ರಮುಖ ಪ್ರಶ್ನೆ. ಅವರ ಭವಿಷ್ಯಕ್ಕೆ ಸಂಬಂಧಿಸಿದ್ದು, ಹಿಂದೆಂಗಿಂತಲೂ ಹೆಚ್ಚಾಗಿರುವ ನಿರುದ್ಯೋಗ ದರದ ಸಮಸ್ಯೆಯ ಉಲ್ಬಣಕ್ಕೆ ಯಾರು ಹೊಣೆಗಾರರು? ಸುಮಾರು ಶೇ. 38 ರಷ್ಟು ಯುವ ಜನರನ್ನು ತೀವ್ರ ಬಡತನದ ಕೆಳಮಟ್ಟಕ್ಕೆ ತಳ್ಳಿದ ಹೊಣೆಯನ್ನೂ ಇವರೇ

ಪುಟ 10 ಕ್ಕೆ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**